6	ನಮಗೆ ನೀಡಲಾದಂತಹ ವಿವರಣೆಗಳಂತೆ, ನಿಗಮವು ಕರ್ನಾಟಕ ಸರ್ಕಾರದಿಂದ ಈ ಹಿಂದೆ ರೂ.4,00,00,000 ಮೊತ್ತದಷ್ಟು ಭದ್ರತೆಯಿಂದ ಕೂಡಿರದ ಸಾಲವನ್ನು ಪಡೆದುಕೊಂಡಿದ್ದಿತು ಹಾಗೂ ಅದು ಸಾಲದ ಮೂಲ ಷರತ್ತುಗಳ ಅನುಸಾರ ಮರುಪಾವತಿಸಲು ನಿಗದಿತ ದಿನಾಂಕವನ್ನು ಮಿತಿಮೀರಿದ್ದಿತು. ಮುಂದುವರೆದು, ಇತರೆ ಚಾಲ್ತಿ ಜವಾಬ್ದಾರಿಗಳಿಗೆ ಸಂಬಂಧಿತ ಟಿಪ್ಪಣಿ ಸಂಖ್ಯೆ 9ರಲ್ಲಿ ಬಹಿರಂಗಪಡಿಸಿರುವಂತೆ ಆಸ್ತಿ–ಜವಾಬ್ದಾರಿ ತ:ಖೆಯ ದಿನಾಂಕದಲ್ಲಿದ್ದಂತೆ 'ರೂ.5,55,49,397/–ರಷ್ಟು ಮೊತ್ತದ ಬಡ್ಡಿ ಪಾವತಿಯು ಬಾಕಿಯಿದ್ದಿತು. ಈ ನಿಟ್ಟಿನಲ್ಲಿ ಪ್ರಸಕ್ತ ಸಾಲಿನ ಅಂತ್ಯದಲ್ಲಿದ್ದಂತೆ ಉಳಿದಿರುವ ಶಿಲ್ಕಿಗೆ ಸಂಬಂಧಿಸಿದಂತೆ ಸಂಬಂಧಿತ ಇಲಾಖೆಯಿಂದ ಖಚಿತಪಡಿಸಿಕೊಂಡಿರುವಿಕೆಗೆ ಸಂಬಂಧಿಸಿದಂತೆ ಅಥವಾ ಸರ್ಕಾರಕ್ಕೆ ಪಾವತಿಸಲು ಬಾಕಿ ಉಳಿದಿರುವ ಅಂತಿಮ ಶಿಲ್ಕಿಗೆ ಸಂಬಂಧಿಸಿದಂತೆ ಖಚಿತಪಡಿಸಿಕೊಂಡಿರುವುದಕ್ಕೆ ಸಂಬಂಧಿತ ದಾಖಲೆಗಳನ್ನು ನಮಗೆ ಒದಗಿಸಲಿಲ್ಲ.	ಬಾಕಿಯಿರುವಂತಹ ಸಾಲಗಳನ್ನು ಅನುದಾನಗಳು ಎಂಬುದಾಗಿ ಪರಿಗಣಿಸುವಂತೆ ಆಡಳಿತ ಮಂಡಳಿಯು ಸರ್ಕಾರವನ್ನು ಕೋರಿರುವುದು ಹಾಗೂ ಈ ಕೋರಿಕೆಯು ಇನ್ನೂ ಪರಿಗಣನೆಯ ಅಡಿಯಲ್ಲಿರುವುದು. ಈ ನಿಟ್ಟಿನಲ್ಲಿ ಸರ್ಕಾರದಿಂದ ಖಚಿತ ಉತ್ತರವು ಬಂದ ಕೂಡಲೆಯೇ ಸೂಕ್ತ ಕ್ರಮವನ್ನು ತೆಗೆದುಕೊಳ್ಳಲಾಗುವುದು.
7	ನಾವು ಈ ಮೂಲಕ ಟಿಪ್ಪಣಿ ಸಂಖ್ಯೆ 45ರ ಕಡೆಗೆ ನಿಮ್ಮ ಗಮನವನ್ನು ಸೆಳೆಯುತ್ತಿರುವೆವು, ಕಂಪನಿಯ ಭವಿಷ್ಯದಲ್ಲಿನ ಕಾರ್ಯಾಚರಣೆಗಳ ಮೇಲೆ ಕೋವಿಡ್ – 19ರ ಪ್ರಭಾವದ ಬಗ್ಗೆ ಕೆಲವು ಅನಿಶ್ಚಿತತೆಗಳು ಇರುವುದಾಗಿ ಈ ಟಿಪ್ಪಣಿಯಲ್ಲಿ ತಿಳಿಸಲಾಗಿರುವುದು. ತನ್ನ ಕಾರ್ಯಚಟುವಟಿಕೆಗಳನ್ನು ಮುಂದುವರೆಸಿಕೊಂಡು ಹೋಗುವ ಬಗ್ಗೆ ಊಹೆಯ ಸೂಕ್ತತೆಯು ಕಂಪನಿಯ ವ್ಯಾಪಾರವ್ಯವಹಾರದ ಮೇಲೆ ಕೋವಿಡ್ – 19ರ ಪ್ರಭಾವವನ್ನು ತೊಡೆದುಹಾಕುವ ಸಲುವಾಗಿ ಕಂಪನಿಯು ಕೈಗೊಳ್ಳುವಂತಹ ವಿವಿಧ ಕ್ರಮಗಳನ್ನು ಸಾಕಾರಗೊಳಿಸುವುದರ ಮೇಲೆ ಅವಲಂಭಿಸಿರುತ್ತದೆ.	ಕಂಪನಿಯ ಕಾರ್ಯಾಚರಣೆಗಳು ಪುನ: ಸಾಮಾನ್ಯ ಸ್ಥಿತಿಗೆ ಮರಳಿರುವುದು ಮತ್ತು ಆದ್ದರಿಂದ ಕಂಪನಿಯ ಮುಂದುವರೆದುಕೊಂಡು ಹೋಗುತ್ತಿರುವ ಸಂಸ್ಥೆಯ ಸ್ಥಾನಮಾನದ ಮೇಲೆ ಕೋವಿಡ್ – 19ರ ಯಾವುದೇ ಪ್ರಭಾವವೂ ಇರುವುದಿಲ್ಲ.

ಕರ್ನಾಟಕ ಪ್ರವಾಸೋಧ್ಯಮ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು, ಇದರ 31 ಮಾರ್ಚ್ 2020ಕ್ಕೆ ಅಂತ್ಯಗೊಂಡ ಸಾಲಿನ ಕ್ರೋಡೀಕೃತ ಲೆಕ್ಕಪತ್ರಗಳ ಮೇಲೆ ಪರಿಚ್ಛೇದ 129 (4)ರ ಜೊತೆಯಲ್ಲಿ ಓದಲ್ಪಡುವ ಕಂಪನಿಗಳ ಅಧಿನಿಯಮ 2013ರ ಪರಿಚ್ಛೇದ 143 (6) (ಬಿ) ಅಡಿಯಲ್ಲಿ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ಟೀಕೆಟಿಪ್ಪಣಿಗಳು.

ಕಂಪನಿಗಳ ಅಧಿನಿಯಮ, 2013ರ ಅಡಿಯಲ್ಲಿ ನಿರ್ದಿಷ್ಟಪಡಿಸಲಾಗಿರುವ ಹಣಕಾಸಿನ ವರದಿಯ ಚೌಕಟ್ಟಿನ ಪ್ರಕಾರ 31 ಮಾರ್ಚ್ 2020ಕ್ಕೆ ಅಂತ್ಯಗೊಂಡಂತಹ ಸಾಲಿಗೆ **ಕರ್ನಾಟಕ ಪ್ರವಾಸೋಧ್ಯಮ ಅಭಿವೃದ್ಧಿ ನಿಗಮ ನಿಯಮಿತ,** ಬೆಂಗಳೂರು, ಇದರ ಹಣಕಾಸಿನ ತ:ಖ್ತೆಗಳನ್ನು ತಯಾರಿಸುವುದು ಕಂಪನಿಯ ಆಡಳಿತ ಮಂಡಳಿಯ ಜವಾಬ್ದಾರಿಯಾಗಿರುತ್ತದೆ. ಅಧಿನಿಯಮದ ಪರಿಚ್ಛೇದ 129 (4)ರ ಜೊತೆಯಲ್ಲಿ ಓದಲ್ಪಡುವಂತಹ ಅಧಿನಿಯಮದ ಪರಿಚ್ಛೇದ 139 (5)ರ ಅಡಿಯಲ್ಲಿ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು ನೇಮಕ ಮಾಡುವಂತಹ ಶಾಸನಬದ್ಧ ಲೆಕ್ಕಪರಿಶೋಧಕರು, ಧಿನಿಯಮದ ಪರಿಚ್ಛೇದ 129 (4)ರ ಜೊತೆಯಲ್ಲಿ ಓದಲ್ಪಡುವಂತಹ ಅಧಿನಿಯಮದ ಪರಿಚ್ಛೇದ 143 (10)ರ ಅಡಿಯಲ್ಲಿ ಲೆಕ್ಕಪರಿಶೋಧನೆಗಾಗಿ ನಿರ್ದಿಷ್ಟಪಡಿಸಲಾಗಿರುವಂತಹ ಮಾನದಂಡಗಳ ಅನುಸಾರ ನಡೆಸಲಾದಂತಹ ಸ್ವತಂತ್ರ ಲೆಕ್ಕಪರಿಶೋಧನೆಯ ಆಧಾರದ ಮೇರೆಗೆ ಹಣಕಾಸು ತ:ಖ್ತೆಗಳ ಮೇಲೆ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುವಲ್ಲಿ ಜವಾಬ್ದಾರರಾಗಿರುತ್ತಾರೆ. ಇದನ್ನು ಮಾಡಲಾಗಿದೆ ಎಂಬುದಾಗಿ ಅವರು **ತಮ್ಮ 30 ಡಿಸೆಂಬರ್ 2020** ದಿನಾಂಕದ ಪರಿಷ್ಕೃತ ಲೆಕ್ಕಪರಿಶೋಧನಾ ವರದಿಯಲ್ಲಿ ತಿಳಿಸಿರುತ್ತಾರೆ, ಈ ಪರಿಷ್ಕೃತ ಲೆಕ್ಕಪರಿಶೋಧನಾ ವರದಿಯು ಈ ಹಿಂದಿನ **18 ಡಿಸೆಂಬರ್ 2020** ದಿನಾಂಕದ ಲೆಕ್ಕಪರಿಶೋಧನಾ ವರದಿಯನ್ನು ರದ್ದುಗೊಳಿಸುತ್ತದೆ.

ನಾವು, ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ಪರವಾಗಿ, ಕರ್ನಾಟಕ ರಾಜ್ಯ ಪ್ರವಾಸೋಧ್ಯಮ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು, ಇದರ **31 ಮಾರ್ಚ್ 2020ಕ್ಕೆ** ಅಂತ್ಯಗೊಂಡಂತಹ ಹಣಕಾಸು ಸಾಲಿಗೆ ಅಧಿನಿಯಮದ ಪರಿಚ್ಛೇದ 129 (4)ರ ಜೊತೆಯಲ್ಲಿ ಓದಲ್ಪಡುವಂತಹ ಅಧಿನಿಯಮದ ಪರಿಚ್ಛೇದ 143 (6) (ಎ) ಅಡಿಯಲ್ಲಿ ಕ್ರೋಡೀಕೃತ ಹಣಕಾಸು ತ:ಖ್ತೆಗಳ ಒಂದು ಪೂರಕ ಲೆಕ್ಕಪರಿಶೋಧನೆಯನ್ನು ನಡೆಸಿದೆವು. ನಾವು ಕರ್ನಾಟಕ ರಾಜ್ಯ ಪ್ರವಾಸೋಧ್ಯಮ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು ಹಾಗೂ ಜಂಗಲ್ ಲಾಡ್ಜಸ್ ಅಂಡ್ ರೆಸಾರ್ಟ್ಸ್ ಲಿಮಿಟೆಡ್, ಬೆಂಗಳೂರು (ಜಂಟಿಯಾಗಿ ನಿಯಂತ್ರಿಸಲ್ಪಡುತ್ತಿರುವ ಸಂಸ್ಥೆ), ಇವುಗಳ **31 ಮಾರ್ಚ್ 2020ಕ್ಕೆ** ಅಂತ್ಯಗೊಂಡ ಹಣಕಾಸು ಸಾಲಿಗೆ ಒಂದು ಪೂರಕ ಲೆಕ್ಕಪರಿಶೋಧನೆಯನ್ನು ನೆಡೆಸಿದೆವು. ಪೂರಕ ಲೆಕ್ಕಪರಿಶೋಧನೆಯನ್ನು ಶಾಸನಬದ್ಧ ಲೆಕ್ಕಪರಿಶೋಧಕರುಗಳ ಲೆಕ್ಕಪರಿಶೋಧನೆಗೆ ಸಂಬಂಧಿತ ಕಾಗದ ಪತ್ರಗಳನ್ನು ಪರಿಶೀಲಿಸದೆಯೇ ಸ್ವತಂತ್ರವಾಗಿ ನಡೆಸಲಾಯಿತು ಹಾಗೂ ಪ್ರಾಥಮಿಕವಾಗಿ ಶಾಸನಬದ್ಧ ಲೆಕ್ಕಪರಿಶೋಧಕರುಗಳು ಹಾಗೂ ಕಂಪನಿಯ ಸಿಬ್ಬಂದಿ/ಅಧಿಕಾರಿಗಳೊಂದಿಗೆ ಸಮಾಲೋಚನೆ ಹಾಗೂ ಕೆಲವು ಲೆಕ್ಕಪತ್ರಗಳಿಗೆ ಸಂಬಂಧಿತ ದಾಖಲೆಗಳ ಆಯ್ಕೆ ಮಾಡಿಕೊಳ್ಳಲಾದ ಪರಿಶೀಲನೆಗೆ ಸೀಮಿತಗೊಳಿಸಿಕೊಳ್ಳಲಾಯಿತು.

ನಮ್ಮ ಪೂರಕ ಲೆಕ್ಕಪರಿಶೋಧನೆಯ ಸಮಯದಲ್ಲಿ ನಾವು ಗಮನಿಸಲಾದ ಅಂಶಗಳನ್ನು ಶಾಸನಬದ್ಧ ಲೆಕ್ಕಪರಿಶೋಧಕರುಗಳು ತಮ್ಮ ವರದಿಯಲ್ಲಿ ಜಾರಿಗೊಳಿಸುವ ಸಲುವಾಗಿ ತಮ್ಮ ಲೆಕ್ಕಪರಿಶೋಧನಾ ವರದಿಯನ್ನು ಪರಿಷ್ಕರಿಸಿದ್ದರಿಂದ, ಅಧಿನಿಯಮದ ಪರಿಚ್ಛೇದ 129 (4)ರ ಜೊತೆಯಲ್ಲಿ ಓದಲ್ಪಡುವಂತಹ ಪರಿಚ್ಛೇದ 143 (6) (ಬಿ) ಅಡಿಯಲ್ಲಿ ಇನ್ನೂ ಹೆಚ್ಚಿನ ಟೀಕೆಟಿಪ್ಪಣಿ ಮಾಡಲು ಅಥವಾ ಶಾಸನಬದ್ಧ ಲೆಕ್ಕಪರಿಶೋಧಕರುಗಳ ವರದಿಗೆ ಪೂರಕವಾಗಿ ಹೆಚ್ಚಿನ ಟೀಕೆಟಿಪ್ಪಣಿ ಮಾಡುವ ಸಲುವಾಗಿ ಯಾವುದೇ ಹೆಚ್ಚುವರಿ ಅಂಶಗಳು ಇರುವುದಿಲ್ಲ.

ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರಿಗಾಗಿ ಮತ್ತು ಅವರ ಪರವಾಗಿ

–ಸಹಿ ಮಾಡಲಾಗಿದೆ–
(ಅನುಪ್ ಫ್ರಾನ್ಸಿಸ್ ಡಂಗ್‌ಡಂಗ್)
ಮಹಾಲೇಖಾಪಾಲರು
(ಆರ್ಥಿಕ ಮತ್ತು ರಾಜಸ್ವ ವಲಯ ಲೆಕ್ಕಪರಿಶೋಧನೆ)

ಕರ್ನಾಟಕ, ಬೆಂಗಳೂರು
ಬೆಂಗಳೂರು
ದಿನಾಂಕ : 31.12. 2020

ಆರ್. ಸಿಂಘ್ವಿ ಅಂಡ್ ಅಸೋಸಿಯೇಟ್ಸ್
ಚಾರ್ಟರ್ಡ್ ಅಕೌಂಟೆಂಟ್ಸ್

ಸ್ವತಂತ್ರ ಲೆಕ್ಕಪರಿಶೋಧಕರುಗಳ ಪರಿಷ್ಕೃತ ವರದಿ

ಎಲ್ಲಾ ಸದಸ್ಯರುಗಳಿಗೆ.
ಕರ್ನಾಟಕ ರಾಜ್ಯ ಪ್ರವಾಸೋಧ್ಯಮ ಅಭಿವೃದ್ಧಿ ನಿಗಮ ನಿಯಮಿತ
ಸಿಐಎನ್ : ಯು63040ಕೆಎ1971ಎಸ್‌ಜಿಸಿ002003
ಬೆಂಗಳೂರು

ಪ್ರತ್ಯೇಕ ಹಣಕಾಸು ತ:ಖ್ತೆಗಳ ಮೇಲಿನ ವರದಿ

ನಮ್ಮ ಷರತ್ತುಬದ್ಧ ಅಭಿಪ್ರಾಯ

ಈ ವರದಿಯ ಜೊತೆಯಲ್ಲಿರುವ **ಕರ್ನಾಟಕ ರಾಜ್ಯ ಪ್ರವಾಸೋಧ್ಯಮ ಅಭಿವೃದ್ಧಿ ನಿಗಮ ನಿಯಮಿತ (ನಿಯಮಿತ),** ಇದರ ,31 ಮಾರ್ಚ್ 2020ರಲ್ಲಿದ್ದಂತೆ ಕ್ರೋಡೀಕೃತ ಆಸ್ತಿ–ಜವಾಬ್ದಾರಿ ತ:ಖ್ತೆ, ಅದೇ ದಿನಾಂಕಕ್ಕೆ ಅಂತ್ಯಗೊಂಡಂತಹ ಸಾಲಿಗೆ ಕ್ರೋಡೀಕೃತ ಲಾಭ ಮತ್ತು ನಷ್ಟ ತ:ಖ್ತೆ, ಕ್ರೋಡೀಕೃತ ನಗದು/ಹಣಕಾಸು ಹರಿವಿನ ತ:ಖ್ತೆ ಹಾಗೂ ಗಮನಾರ್ಹ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಕಾರ್ಯನೀತಿಗಳ ಒಂದು ಸಂಕ್ಷಿಪ್ತ ವರದಿ ಹಾಗೂ ಇತರೆ ವಿವರಣಾತ್ಮಕ ಮಾಹಿತಿಗಳನ್ನು ಒಳಗೊಂಡಂತೆ ಪ್ರತ್ಯೇಕ ಹಣಕಾಸು ತ:ಖ್ತೆಗಳನ್ನು ನಾವು ಲೆಕ್ಕಪರಿಶೋಧನೆ ಮಾಡಿರುವೆವು.

ನಮ್ಮ ಅಭಿಪ್ರಾಯದಲ್ಲಿ ಹಾಗೂ ನಮ್ಮ ಅತ್ಯುತ್ತಮ ಅರಿವಿನಂತೆ ಹಾಗೂ ನಮಗೆ ನೀಡಲಾಗಿರುವಂತಹ ವಿವರಣೆಗಳಂತೆ, ನಮ್ಮ ವರದಿಯ ಷರತ್ತುಬದ್ಧ ಅಭಿಪ್ರಾಯಗಳಿಗೆ ಆಧಾರಕ್ಕೆ ಸಂಬಂಧಿತ ಕಂಡಿಕೆಯಲ್ಲಿ ವಿವರಿಸಿರುವಂತಹ ವಿಷಯಗಳ ಸಂಭಾವ್ಯ ಪರಿಣಾಮಗಳನ್ನು ಹೊರತುಪಡಿಸಿದಂತೆ, ,ಭಾರತೀಯ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಮಾನದಂಡಗಳ ಅನುಸಾರ ತಯಾರಿಸಲಾಗಿರುವಂತಹ ಪ್ರತ್ಯೇಕ ಹಣಕಾಸು ತ:ಖ್ತೆಗಳು' ಅಧಿನಿಯಮದ ಅಗತ್ಯತೆಯ ರೀತಿಯಲ್ಲಿ ಮಾಹಿತಿಯನ್ನು ನೀಡುತ್ತವೆ ಹಾಗೂ ಭಾರತದಲ್ಲಿ ಸರ್ವೇಸಾಮಾನ್ಯವಾಗಿ ಒಪ್ಪಿಕೊಳ್ಳಲಾಗಿರುವಂತಹ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ತತ್ವಗಳ ಅನುಸಾರ ಹಾಗೂ ಅಧಿನಿಯಮದ ಅಗತ್ಯತೆಯಂತೆ 31 ಮಾರ್ಚ್ 2020ರಲ್ಲಿದ್ದಂತೆ ಕಂಪನಿಯ ವ್ಯವಹಾರಗಳ ಸ್ಥಿತಿಗತಿಗಳನ್ನು, ಹಾಗೂ ಅದೇ ದಿನಾಂಕಕ್ಕೆ ಅಂತ್ಯಗೊಂಡಂತಹ ಸಾಲಿಗೆ ನಷ್ಟ ಹಾಗೂ ಸಮಗ್ರ ವರಮಾನ, ಈಕ್ವಿಟಿಯಲ್ಲಿನ ಬದಲಾವಣೆಗಳು ಹಾಗೂ ಕಂಪನಿಯ ನಗದು/ಹಣಕಾಸಿನ ಹರಿವುಗಳ ಒಂದು ಸತ್ಯಾಸತ್ಯತೆಯಿಂದ ಕೂಡಿದ ಹಾಗೂ ನ್ಯಾಯಸಮ್ಮತವಾದಂತಹ ಅಭಿಪ್ರಾಯಗಳನ್ನು ನೀಡುತ್ತವೆ.

ಕರ್ನಾಟಕ ರಾಜ್ಯ ಪ್ರವಾಸೋಧ್ಯಮ ಅಭಿವೃದ್ಧಿ ನಿಗಮದ 31 ಮಾರ್ಚ್ 2020ಕ್ಕೆ ಅಂತ್ಯಗೊಂಡಂತಹ ಸಾಲಿಗೆ ಲೆಕ್ಕಪತ್ರಗಳ ಲೆಕ್ಕಪರಿಶೋಧನೆಯನ್ನು ಪೂರ್ಣಗೊಳಿಸಿದನಂತರ, ನಾವು ನಮ್ಮ ವರದಿಯನ್ನು 18 ಡಿಸೆಂಬರ್ 2020ರಂದು ಬೆಂಗಳೂರಿನಲ್ಲಿ ಸಲ್ಲಿಸಿದೆವು. ನಾವು ನಮ್ಮ ವರದಿಯನ್ನು ಸಲ್ಲಿಸಿದನಂತರ, ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು ತಮ್ಮ ಲೆಕ್ಕಪರಿಶೋಧನೆಯಲ್ಲಿ ಗಮನಿಸಿದಂತಹ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ನಮ್ಮ ವರದಿಯನ್ನು ನಾವು ಪರಿಷ್ಕರಿಸಿರುವೆವು, ಈ ಪರಿಷ್ಕೃತ ವರದಿಯು ನಮ್ಮ ಮೂಲ ವರದಿಯನ್ನು ರದ್ದುಗೊಳಿಸುತ್ತದೆ.

ನಮ್ಮ ಷರತ್ತುಬದ್ಧ ಅಭಿಪ್ರಾಯಗಳಿಗೆ ಆಧಾರ :

1. ಹಣಕಾಸು ತ;ಖ್ತೆಗಳ ಟಿಪ್ಪಣಿ ಸಂಖ್ಯೆ 4ರಲ್ಲೆ ತಿಳಿಸಿರುವಂತೆ, ಸ್ವೀಕರಿಸಲಾಗಿರುವಂತಹ ಅಭಿವೃದ್ಧಿ ಅನುದಾನಗಳನ್ನು ಮೀಸಲಿರಿಸಿರುವಿಕೆಗಳು ಮತ್ತು ಮಿಗುತಾಯಗಳ ಅಡಿಯಲ್ಲಿ ತೋರಿಸಲಾಗಿರುವುದು, ಕರ್ನಾಟಕ ಸರ್ಕಾರ/ಭಾರತ ಸರ್ಕಾರದ ನಿರ್ದೇಶನಗಳ ಅನುಸಾರ ಅಂತಹ ಅನುದಾನಗಳಿಂದ ಮೊತ್ತಗಳನ್ನು ವೆಚ್ಚ ಮಾಡಬೇಕಿರುವುದರಿಂದ ಚಾಲ್ತಿ ಜವಾಬ್ದಾರಿಗಳ ಅಡಿಯಲ್ಲಿ ತೋರಿಸುವ ಅಗತ್ಯತೆಯಿರುತ್ತದೆ. ಖರ್ಚು ಮಾಡದೇ ಉಳಿದಿರುವಂತಹ ಅಭಿವೃದ್ಧಿ

ಅನುದಾನಗಳ ಮೊತ್ತಗಳನ್ನು ಹಾಗೂ ಅನುದಾನ ಲೆಕ್ಕಗಳ ಸಂಬಂಧಿತ ಅಂತಿಮ ಬ್ಯಾಂಕು ಶಿಲ್ಕುಗಳನ್ನು ಸಮರ್ಪಕವಾಗಿ ಸಮನ್ವಯಗೊಳಿಸುವಲ್ಲಿನ ಅನುಪಸ್ಥಿತಿಯ ಕಾರಣ ಅಭಿವೃದ್ಧಿ ಅನುದಾನಗಳನ್ನು ಪರಿಗಣಿಸಿರುವುದರ ಬಗ್ಗೆ ಯಾವುದೇ ಟೀಕೆಟಿಪ್ಪಣಿಗಳನ್ನು ಮಾಡಲು ನಮಗೆ ಸಾಧ್ಯವಾಗುವುದಿಲ್ಲ. ಮುಂದುವರೆದು, ಕಂಪನಿಯು ಸರ್ಕಾರದ ಅನುದಾನಗಳಿಗಾಗಿ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಮಾನದಂಡ – 12ರ ಅನುಸಾರ ಲೆಕ್ಕವನ್ನಿಡುವ ಮತ್ತು ಬಹಿರಂಗ ಪಡಿಸುವಿಕೆ ಅಗತ್ಯತೆಗಳನ್ನು ಕಂಪನಿಯು ಅನುಸರಿಸಿರುವುದಿಲ್ಲ.

2. ಹಣಕಾಸು ತ:ಖ್ತೆಗಳ ಟಿಪ್ಪಣಿ ಸಂಖ್ಯೆ 8ರಲ್ಲಿ ತಿಳಿಸಿರುವಂತೆ ಕಂಪನಿಯು ಅತಿ ಸಣ್ಣ ಮತ್ತು ಸಣ್ಣ ಉದ್ಯಮಗಳಿಗೆ ಇರುವಂತಹ ಬಾಕಿಗಳನ್ನು ವಿಭಜಿಸಿರುವುದಿಲ್ಲ ಹಾಗೂ ಎಲ್ಲಾ ಮಾರಾಟಗಾರರುಗಳಿಂದ ಮತ್ತು ಸೇವೆಗಳನ್ನು ಒದಗಿಸುವವರುಗಳಿಂದ ಅವರುಗಳ ನೋಂದಣಿ ವಿವರಗಳನ್ನು ಕಂಪನಿಯು ಪಡೆದುಕೊಂಡಿರುವುದಿಲ್ಲ. ಮುಂದುವರೆದು, ಆಸ್ತಿ–ಜವಾಬ್ದಾರಿ ತ:ಖ್ತೆಯ ದಿನಾಂಕದಲ್ಲಿದ್ದಂತೆ ಬಾಕಿಯಿದ್ದಂತಹ ರೂ.38,65,665/–ರಷ್ಟು (ಟಿಪ್ಪಣಿ 8ರಲ್ಲಿ ಬಹಿರಂಗಪಡಿಸಿರುವ ಶಿಲ್ಕಿನ ಪೈಕಿ) ಹಾಗೂ ಬಹಳ ದೀರ್ಘಕಾಲದವರೆಗೆ ಬಾಕಿಯಿದ್ದಂತಹ ರೂ.9,66,603/–ರಷ್ಟು (ಟಿಪ್ಪಣಿ ಸಂಖ್ಯೆ 20ರಲ್ಲಿ ಬಹಿರಂಗಪಡಿಸಿರುವ ಶಿಲ್ಕಿನ ಪೈಕಿ) ಮೊತ್ತಗಳಿಗೆ ಸಂಬಂಧಿಸಿದಂತೆ ಸಂಬಂದಿತ ತಂಡಗಳಿಂದ ಖಚಿತಪಡಿಸಿಕೊಂಡಿರುವುದಿಲ್ಲ.

3. ಇತರೆ ಚಾಲ್ತಿ ಜವಾಬ್ದಾರಿಗಳಿಗೆ ಸಂಬಂಧಿತ ಟಿಪ್ಪಣಿ ಸಂಖ್ಯೆ 9ರಲ್ಲಿ ಬಹಿರಂಗಪಡಿಸಿರುವಂತೆಲೆಕ್ಕಪತ್ರಗಳ ಪುಸ್ತಕಗಳಲ್ಲಿ ದೀರ್ಘಕಾಲದವರೆಗೆ ಬಾಕಿಯಿರುವಂತಹ ರೂ.23,47,65,666/–ರಷ್ಟು (ಟಿಪ್ಪಣಿ ಸಂಖ್ಯೆ 9ರಲ್ಲಿ ಬಹಿರಂಗಪಡಿಸಿರುವ ಒಟ್ಟು ಮೊತ್ತದ ಪೈಕಿ) ಮೊತ್ತಕ್ಕೆ ಸಂಬಂಧಿಸಿದಂತೆ ಖಚಿತಪಡಿಸಿಕೊಂಡಿರುವಿಕೆಯು ಲಭ್ಯವಿರುವುದಿಲ್ಲ. ಒಂದು ವರ್ಷಕ್ಕೂ ಮೀರಿದ ಅವಧಿಗೆ ಪಾವತಿಸಬೇಕಿರುವ ಜವಾಬ್ದಾರಿಗಳನ್ನು ಪ್ರತ್ಯೇಕಿಸಿರುವುದಿಲ್ಲ ಮತ್ತು ದೀರ್ಘಾವಧಿ ಜವಾಬ್ದಾರಿಗಳ ಅಡಿಯಲ್ಲಿ ತೋರಿಸಿರುವುದಿಲ್ಲ.

4. ಇತರೆ ಚಾಲ್ತಿ ಜವಾಬ್ದಾರಿಗಳಿಗೆ ಸಂಬಂಧಿತ ಟಿಪ್ಪಣಿ ಸಂಖ್ಯೆ 14ರಲ್ಲಿ ಬಹಿರಂಗಪಡಿಸಿರುವಂತೆ ಲೆಕ್ಕಪತ್ರಗಳ ಪುಸ್ತಕಗಳಲ್ಲಿ ದೀರ್ಘಕಾಲದವರೆಗೆ ಬಾಕಿಯಿರುವಂತಹ ಚಾಲ್ತಿಯೇತರ ರೂ.5,08,66,657/–ರಷ್ಟು ಮೊತ್ತದಷ್ಟು ಈ ಹಿಂದಿನ ಸಾಲುಗಳಿಗೆ ಸಂಬಂಧಿತ ಆದಾಯ ತೆರಿಗೆ ಮರುಪಾವತಿಗಾಗಿ ಲೆಕ್ಕಪತ್ರ ಪುಸ್ತಕಗಳಲ್ಲಿ ಅನುವನ್ನು ಮಾಡಿರುವುದಿಲ್ಲ. ಮುಂದುವರೆದು, ಕಂಪನಿಯು ಆದಾಯ ತೆರಿಗೆ ಪಾವತಿಗಳಿಗಾಗಿನ ತಗಾದೆಗಳಿಗೆ ಸಮರ್ಪಕ ಅನುವು ಮಾಡಿರುವುದಿಲ್ಲ. ಆದಾಯ ತೆರಿಗೆ ಪೋರ್ಟಲಿನ ಅನುಸಾರ, ವಿವಿಧ ಆದಾಯ ತೆರಿಗೆ ಅಧಿಕಾರಿಗಳು ಪಾವತಿಗಾಗಿ ಸೃಷ್ಟಿಸಿರುವ ತಗಾದೆಗಳ ಮೊತ್ತವು ರೂ.13,59,08,016/–ರಷ್ಟು ಆಗಿದ್ದು, ಈ ನಿಟ್ಟಿನಲ್ಲಿ ಆಕಸ್ಮಿಕ ಜಾವಾಬ್ದಾರಿಗಳಿಗಾಗಿ ,ಅನುವುಗಳು, ಆಕಸ್ಮಿಕ ಜವಾಬ್ದಾರಿಗಳೂ ಮತ್ತು ಆಕಸ್ಮಿಕ ಆಸ್ತಿಗಳಿಗೆ' ಸಂಬಂಧಿತ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಮಾನದಂಡ 29ರ ಅನುಸಾರ ಲೆಕ್ಕಪತ್ರ ಪುಸ್ತಕಗಳಲ್ಲಿ ಯಾವುದೇ ಅನುವನ್ನೂ ಮಾಡಿರುವುದಿಲ್ಲ ಅಥವಾ ಬಹಿರಂಗಪಡಿಸಿರುವುದಿಲ್ಲ.

5. ಟಿಪ್ಪಣಿ ಸಂಖ್ಯೆ 17ರಲ್ಲಿ ಬಹಿರಂಗಪಡಿಸಿರುವಂತೆ ವ್ಯಾಪಾರವ್ಯವಹಾರಗಳಿಗೆ ಸಂಬಂಧಿಸಿದಂತೆ ಸ್ವೀಕರಿಸಬೇಕಾದವುಗಳು ಆಸ್ತಿ–ಜವಾಬ್ದಾರಿ ತ:ಖ್ತೆಯ ದಿನಾಂಕದಲ್ಲಿದ್ದಂತೆ ರೂ.2,24,40,972/–ರಷ್ಟು ಬಾಕಿಯಿದ್ದವು, ಸಂಬಂಧಿತ ತಂಡಗಳಿಂದ ಇದರ ಬಗ್ಗೆ ಖಚಿತಪಡಿಸಿಕೊಂಡಿರಲಿಲ್ಲ ಹಾಗೂ ಈ ನಿಟ್ಟಿನಲ್ಲಿ ಆಸ್ತಿ–ಜವಾಬ್ದಾರಿ ತ:ಖ್ತೆಯ ದಿನಾಂಕದಲ್ಲಿದ್ದಂತೆ ಸ್ವೀಕರಿಸಬೇಕಾದವುಗಳು ಅನುಮಾನಾಸ್ಪದವಾಗಿರುವುದಕ್ಕೆ ಸಂಬಂಧಿಸಿದಂತೆ ಅನುವು ಮಾಡಿರಲಿಲ್ಲ.

6. ಚಾಲ್ತಿ ಆಸ್ತಿಗಳು – ಅಲ್ಪಾವಧಿ ಸಾಲಗಳು ಮತ್ತು ಮುಂಗಡಗಳು ಆಸ್ತಿ–ಜವಾಬ್ದಾರಿ ತ:ಖ್ತೆಯ ದಿನಾಂಕದಲ್ಲಿದ್ದಂತೆ ರೂ.40,39,510ರಷ್ಟು ಇನ್ನೂ ಬಾಕಿಯಿದ್ದವು ಹಾಗೂ ವಸೂಲಾತಿಯು ಅನುಮಾನಾಸ್ಪದವಾಗಿರುವ ಮುಂಗಡಗಳಿಗೆ ಮಾಡಲಾಗಿದ್ದ ಅನುವು ರೂ.25,17,592 ಆಗಿದ್ದಿತು. ಉಳಿಕೆ ಮುಂಗಡಗಳ ಮೊತ್ತವು ರೂ.15,21,918 ಆಗಿದ್ದಿತು, ಈ ನಿಟ್ಟಿನಲ್ಲಿ ಶಿಲ್ಕುಗಳ ಬಗ್ಗೆ ಖಚಿತಪಡಿಸಿಕೊಂಡಿರಲಿಲ್ಲ ಹಾಗೂ ಆಸ್ತಿ–ಜವಾಬ್ದಾರಿ ತ:ಖ್ತೆಯ ದಿನಾಂಕದಲ್ಲಿದ್ದಂತೆ ಉದ್ಯೋಗಿವಾರು ತೆಗೆದುಕೊಳ್ಳಲಾಗಿರುವ ವಸೂಲಾತಿ ಕ್ರಮಗಳ ಬಗ್ಗೆ ವಿವರಗಳು ಲಭ್ಯವಿರಲಿಲ್ಲ.

7. ಟಿಪ್ಪಣಿ ಸಂಖ್ಯೆ 20ರಲ್ಲಿ ಬಹಿರಂಗಪಡಿಸಲಾಗಿರುವ ಇತರೆ ಚಾಲ್ತಿ ಜವಾಬ್ದಾರಿಗಳು ರೂ.24,99,973 ಮೊತ್ತದಷ್ಟು ದೀರ್ಘಕಾಲದವರೆಗೆ ಬಾಕಿಯಿದ್ದಂತಹ ಮೊತ್ತವನ್ನು ಒಳಗೊಂಡಿರುತ್ತದೆ. ಆದಾಗ್ಯೂ, ಸಂಬಂಧಿತ ತಂಡಗಳಿಂದ ಇದರ ಬಗ್ಗೆ ಖಚಿತಪಡಿಸಿಕೊಂಡಿರಲಿಲ್ಲ ಹಾಗೂ ಅನುಮಾನಾಸ್ಪದವಾಗಿರುವ ವಸೂಲಾತಿಗಳಿಗೆ ಸಂಬಂಧಿಸಿದಂತೆ ಅನುವು ಮಾಡಿರಲಿಲ್ಲ.

8. ಟಿಪ್ಪಣಿ ಸಂಖ್ಯೆ 20ರಲ್ಲಿ ಬಹಿರಂಗಪಡಿಸಲಾಗಿರುವ ಇತರೆ ಚಾಲ್ತಿ ಆಸ್ತಿಗಳು ಟ್ಯಾಕ್ಸಿ ಚಾಲಕರುಗಳಿಂದ ಸ್ವೀಕರಿಸಬೇಕಿರುವ ನಿಗದಿತ ಶುಲ್ಕಗಳು ರೂ.9,59,496/- ಆಗಿದ್ದು ಒಂದು ಸುದೀರ್ಘ ಕಾಲದಿಂದ ಬಾಕಿ ಉಳಿದಿರುತ್ತದೆ. ಈ ವಾಹನಗಳ ಪರವಾನಿಗೆ ಮತ್ತು ರಸ್ತೆ ಅನುಮತಿಯನ್ನು ರದ್ದುಗೊಳಿಸುವಂತೆ ನಿಗಮವು ಪ್ರಾದೇಶಿಕ ಸಾರಿಗೆ ಅಧಿಕಾರಿಯವರಿಗೆ ಪತ್ರವನ್ನು ಬರೆದಿರುವುದು. ಆದಾಗ್ಯೂ, ಈ ನಿಟ್ಟಿನಲ್ಲಿ ಅನುಮಾನಾಸ್ಪದವಾಗಿರುವ ವಸೂಲಾತಿಗೆ ಅನುವು ಮಾಡಿರುವುದಿಲ್ಲ.

9. ಆಸ್ತಿ-ಜವಾಬ್ದಾರಿ ತ:ಖ್ತೆಯ ದಿನಾಂಕದಲ್ಲಿದ್ದಂತೆ, ವಿವಿಧ ನ್ಯಾಯಾಲಯಗಳಲ್ಲಿ 40 ನ್ಯಾಯಿಕ ವಿವಾದಗಳು ಬಾಕಿಯಿರುವವು. ಬಾಕಿಯಿರುವಂತಹ ಪ್ರಕರಣಗಳಿಂದ ಉದ್ಭವಿಸಬಹುದಾದ ಜವಾಬ್ದಾರಿಯ ಸಂಭಾವ್ಯ ಮೊತ್ತವನ್ನು ನಿಗಮವು ಅಂದಾಜು ಮಾಡಿರುವುದಿಲ್ಲ. ಆದ್ದರಿಂದ, ಅನುವುಗಳು, ಸಾದಿಲ್ವಾರು ಜವಾಬ್ದಾರಿಗಳು ಮತ್ತು ಸಾದಿಲ್ವಾರು ಆಸ್ತಿಗಳಿಗೆ ಸಂಬಂಧಿತ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಮಾನದಂಡ-29ರ ಅಗತ್ಯತೆಯನ್ನು ಪೂರೈಸಿರುವುದಿಲ್ಲ. ಈ ವಿವರಗಳ ಅನುಪಸ್ಥಿತಿಯಲ್ಲಿ, ಸಾದಿಲ್ವಾರು ಜವಾಬ್ದಾರಿಗಳನ್ನು ನಾವು ಪರಿಮಾಣೀಕರಿಸಲಾಗಲಿಲ್ಲ.

10. ಹೋಟೆಲು ಆಸ್ತಿಗಳನ್ನು ನವೀಕರಿಸು, ಕಾರ್ಯಾಚರಣೆಗೊಳಿಸು, ನಿರ್ವಹಿಸು ಹಾಗೂ ವರ್ಗಾಯಿಸು (ಆರ್‌ಒಎಂಟಿ) ಆಧರದ ಮೇರೆಗೆ ನೀಡಲಾಗಿರುವ ಘಟಕಗಳಿಂದ ಬರುವ ವರಮಾನವನ್ನು ಪರಿಗಣಿಸುವುದಕ್ಕೆ ಸಂಬಂಧಿಸಿದಂತೆ ಅಂತಹ ಹೋಟೆಲು ಆಸ್ತಿಗಳಿಗಾಗಿನ ಒಡಂಬಡಿಕೆಯಲ್ಲಿನ ಷರತ್ತುಗಳ ಆಧಾರದ ಮೇರೆಗೆ ಸಂಚಿತ ಅಧಾರದ ಮೇರೆಗೆ ಪರಿಗಣಿಸತಕ್ಕದ್ದು. ಲೆಕ್ಕಪತ್ರ ಪುಸ್ತಕಗಳಲ್ಲಿ ಅದನ್ನು ಸಂಬಂಧಿತ ಹಣಕಾಸು ಸಾಲಿನಲ್ಲಿ ಸ್ವೀಕರಿಸಲಾದಂತಹ ಮೊತ್ತ ಹಾಗೂ ನೀಡಲಾದಂತಹ ಇನ್ವಾಯ್ಸುಗಳ ಆಧಾರದ ಮೇರೆಗೆ ಪರಿಗಣಿಸಲಾಗಿರುವುದು. ಒಡಂಬಡಿಕೆಗಳಲ್ಲಿನ ಷರತ್ತುಗಳನ್ನು ನಾವು ಮಾಡಿದ ಸಮೀಕ್ಷೆಯ ಅಧಾರದ ಮೇರೆಗೆ, 2019-20 ಹಣಕಾಸು ಸಾಲಿಗೆ ಸಂಬಂಧಿತ ರೂ.49,46,948/-ರಷ್ಟು ಮೊತ್ತದ ವರಮಾನವನ್ನು 2018-19 ಹಣಕಾಸು ಸಾಲಿನಲ್ಲಿ ಪರಿಗಣಿಸಲಾಗಿದ್ದಿತು, 2020-21 ಹಣಕಾಸು ಸಾಲಿಗೆ ಸಂಬಂಧಿತ ರೂ.59,50,005/-ರಷ್ಟು ಮೊತ್ತದ ವರಮಾನವನ್ನು 2019-20 ಹಣಕಾಸು ಸಾಲಿಗೆ ಲೆಕ್ಕಕ್ಕೆ ತೆಗೆದುಕೊಳ್ಳಲಾಗಿದ್ದಿತು ಹಾಗೂ ರೂ.27,000/-ದಷ್ಟು ಮೊತ್ತದ ಹಿಂದಿನ ಸಾಲಿಗೆ ಸಂಬಂಧಿತ ವರಮಾನವನ್ನು 2019-20 ಹಣಕಾಸು ಸಾಲಿಗೆ (ಪೂರ್ವಾವಧಿ ವರಮಾನ) ಲೆಕ್ಕಕ್ಕೆ ತೆಗೆದುಕೊಳ್ಳಲಾಗಿದ್ದಿತು ಎಂಬುದನ್ನು ನಾವು ಗಮನಿಸಿದೆವು.

11. ನಿಗಮವು ಹೋಟೆಲು ಕೊಠಡಿಗಳ ಕಾಯ್ದಿರಿಸಿರುವಿಕೆಗಾಗಿ ವಿವಿಧ ಆನ್‌ಲೈನ್ ಬುಕಿಂಗ್ ಪ್ರತಿನಿಧಿಗಳನ್ನು ನೇಮಕ ಮಾಡಿಕೊಂಡಿರುವುದು. ಈ ಪ್ರತಿನಿಧಿಗಳು ಗ್ರಾಹಕರುಗಳಿಂದ ವರಮಾನವನ್ನು ಸಂಗ್ರಹಿಸುವರು ಹಾಗೂ ತಮ್ಮ ಕಮಿಷನ್ ಮೊತ್ತವನ್ನು ಕಳೆದುಕೊಂಡು ನಿವ್ವಳ ಮೊತ್ತವನ್ನು ನಿಗಮಕ್ಕೆ ಪಾವತಿಸುವರು. ಆದಾಗ್ಯೂ, ಅಂತಹ ಪ್ರತಿನಿಧಿಗಳು ಗ್ರಾಹಕರಿಗೆ ನೀಡುವಂತಹ ರಸೀದಿ ಮತ್ತು ನಿಗಮಕ್ಕೆ ಬರಬೇಕಾದಂತಹ ಮೊತ್ತದ ಜಾಡನ್ನು/ಯಥಾರ್ಥತೆಯನ್ನು ಖಚಿತಪಡಿಸಿಕೊಳ್ಳುವ ಸಲುವಾಗಿ ಪರಿಣಾಮಕಾರಿತ್ವದಿಂದ ಕೂಡಿದ ಒಂದು ವ್ಯವಸ್ಥೆಯನ್ನು ನಿಗಮವು ಹೊಂದಿರುವುದಿಲ್ಲ. ಆಸ್ತಿ-ಜವಾಬ್ದಾರಿ ತ:ಖ್ತೆಯ ದಿನಾಂಕದಲ್ಲಿದ್ದಂತೆ ಆನ್‌ಲೈನ್ ಪ್ರತಿನಿಧಿಗಳ ಪೈಕಿ ಓರ್ವ ಪ್ರತಿನಿಧಿಗೆ ಸಂಬಂಧಿಸಿದಂತೆ ರೂ.8,98,906/-ರಷ್ಟು ಮೊತ್ತದ ಋಣಾತ್ಮಕ ಶಿಲ್ಕನ್ನು ಹಾಗೂ ರೂ.36,90,365/-ರಷ್ಟು ಮೊತ್ತದ ಜಮೆ ಶಿಲ್ಕನ್ನು ನಿಗಮವು ಹೊಂದಿದ್ದಿತು, ಈ ಶಿಲ್ಕುಗಳನ್ನು ಸಮನ್ವಯಗೊಳಿಸಿರಲಿಲ್ಲ.

12. ನಿಗಮವು ರಜೆ ನಗದೀಕರಣ ಮತ್ತು ಗ್ರಾಚುಯಿಟಿಗಾಗಿ ವಿಮಾಗಣಿತ ಮೌಲ್ಯಮಾಪನದ ಆಧಾರದ ಮೇರೆಗೆ ಅನುವನ್ನು ಮಾಡಿರುವುದಿಲ್ಲ, ಇದರಿಂದಾಗಿ, ಲೆಕ್ಕವನ್ನಿಡುವಿಕೆಗೆ ಸಂಬಂಧಿತ ಮಾನದಂಡ -15ರ (ಪರಿಷ್ಕೃತ) ಉಲ್ಲಂಘನೆಯಾಗಿರುತ್ತದೆ. ವಿಮಾಗಣಿತ ಮೌಲ್ಯಮಾಪನದ ಅನುಪಸ್ಥಿತಿಯಲ್ಲಿ, ಅಂತಹ ಅನುವು ಸಮರ್ಪಕವಾಗಿರುವುದೇ ಅಥವಾ ಇಲ್ಲವೇ ಎಂಬುದರ ಬಗ್ಗೆ ನಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಲು

ಸಾಧ್ಯವಾಗುವುದಿಲ್ಲ. ಮುಂದುವರೆದು, ನಿಗಮವು ಭಾರತೀಯ ಜೀವ ವಿಮಾ ನಿಗಮದಿಂದ ಗುಂಪು ಗ್ರಾಚುಯಿಟಿ ಯೋಜನೆಯನ್ನು ಹೊಂದಿರುವುದು ಹಾಗೂ ಭಾರತೀಯ ಜೀವ ವಿಮಾ ನಿಗಮವು, ನಿಗಮದ ಉದ್ಯೋಗಿಗಳ ಗುಂಪು ಗ್ರಾಚುಯಿತಿ ಯೋಜನೆಯ ಕಡೆಗೆ ಪಾವತಿಸಬೇಕಾದ ಮೊತ್ತವು ರೂ.8,27,13,270 ಎಂಬುದಾಗಿ ತಿಳಿಸಿದ್ದಿತು. ಆದಾಗ್ಯೂ, ಟಿಪ್ಪಣಿ ಸಂಖ್ಯೆ – 17ರ (ದೀರ್ಘಾವಧಿ ಅನುವುಗಳು), ಅನುಸಾರ ಗ್ರಾಚುಯಿಟಿಗಾಗಿ ಉದ್ಯೋಗಿಗಳ ಪ್ರಯೋಜನಗಳಿಗಾಗಿ ಮಾಡಲಾಗಿರುವ ಅನುವು ರೂ.5,57,32,070. ಆದ್ದರಿಂದ ಗ್ರಾಚುಯಿಟಿಗಾಗಿ ಉದ್ಯೋಗಿಗಳ ಪ್ರಯೋಜನಗಳನ್ನು ರೂ.827.13 ಲಕ್ಷ ಮೊತ್ತದಷ್ಟು ಕಡಿಮೆ ಪ್ರಮಾಣದಲ್ಲಿ ತಿಳಿಸಲಾಗಿರುವುದು.

13. ನಿಗಮವು ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಮಾನದಂಡ 22ರ ಅಗತ್ಯತೆಯಂತೆ ಮುಂದೂಡಲ್ಪಟ್ಟಿರುವ ತೆರಿಗೆಗಳನ್ನು ಪರಿಗಣಿಸಿರುವುದಿಲ್ಲ. ಅದರ ಬಗ್ಗೆ ನಿಗಮವು ಖಚಿತಪಡಿಸಿಕೊಂಡಿರುವುದಿಲ್ಲವಾದ್ದರಿಂದ ಕ್ರೋಡೀಕೃತ ಹಣಕಾಸು ತ:ಖ್ತೆಗಳ ಮೇಲೆ ಅದರ ಪ್ರಭಾವವನ್ನು ಪರಿಮಾಣೀಕರಿಸಲು ಸಾಧ್ಯವಾಗುವುದಿಲ್ಲ.

14. ಘಟಕಗಳ ವರದಿ ಸಲ್ಲಿಕೆಗೆ ಸಂಬಂಧಿಸಿದಂತೆ ನಿಗಮವು ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಮಾನದಂಡ – 17ರ ಅಗತ್ಯತೆಯನ್ನು ಪೂರೈಸಿರುವುದಿಲ್ಲ ಹಾಗೂ ತನ್ನ ಹಣಕಾಸು ತ:ಖ್ತೆಯಲ್ಲಿ ಪ್ರಾಥಮಿಕ ವ್ಯಾಪಾರವ್ಯವಹಾರ ಘಟಕಗಳನ್ನು ಬಹಿರಂಗಪಡಿಸಿರುವುದಿಲ್ಲ.

15. ನಮಗೆ ಒದಗಿಸಲಾಗಿರುವ ಮಾಹಿತಿಯಂತೆ ಹಾಗೂ ನೀಡಲಾಗಿರುವ ವಿವರಣೆಗಳಂತೆ, ನಿಗಮವು ಪ್ರಸಕ್ತ ಸಾಲಿಗೆ ಬೋನಸ್ಸು ಅಧಿನಿಯಮ, 1965ರ ಅನುವುಗಳ ಅನ್ಸುಆರ ಉದ್ಯೋಗಿಗಳಿಗೆ ಬೋನಸ್ಸು ಪಾವತಿಗಾಗಿ ಸಮರ್ಪಕ ಅನುವು ಮಾಡಿರುವುದಿಲ್ಲ. ಸಮರ್ಪಕ ವಿವರಗಳ ಅನುಪಸ್ಥಿತಿಯಲ್ಲಿ ಹಾಗೂ ಕಡಿಮೆ ಪ್ರಮಾಣದಲ್ಲಿ ಮಾಡಲಾಗಿರುವ ಅನುವಿನ ಕಾರಣ ಪ್ರಸಕ್ತ ಸಾಲಿಗೆ ಹಣಕಾಸು ತ:ಖ್ತೆಗಳ ಮೇಲೆ ಭೀರಬಹುದಾದ ಪರಿಣಾಮ ಹಾಗೂ ದಂಡನಾ ಅನುವನ್ನು ಖಚಿತಪಡಿಸಿಕೊಳ್ಳಲು ಸಾಧ್ಯವಾಗಲಿಲ್ಲ.

16. ಸರ್ಕಾರಿ ಅನುದಾನದ ಪರಿಗಣನೆಗೆ ಸಂಬಂಧಿಸಿದಂತೆ ಗಮನಾರ್ಹವಾದಂತಹ ಲೆಕ್ಕವನ್ನಿಡುವಿಕೆಗೆ ಸಂಬಂಧಿತ ಕಾರ್ಯನೀತಿಗಳ ಕಂಡಿಕೆ ಸಂಖ್ಯೆ ಖಘಿರ ಕಡೆಗೆ ಗಮನವನ್ನು ಸೆಳೆಯಲಾಗುತ್ತಿದೆ – ,'ಸರ್ಕಾರದಿಂದ ಸ್ವೀಕರಿಸಲಾದಂತಹ ಅನುದಾನಗಳನ್ನು ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಮಾನದಂಡ – 12ರ ಅಡಿಯಲ್ಲಿನ ಮಾರ್ಗಸೂಚಿಗಳ ಅನುಸಾರ ಲೆಕ್ಕವನ್ನಿಡಲಾಗಿರುವುದು. ಅದರಂತೆಯೇ, ಬಳಕೆಯಾಗುವುದು ಬಾಕಿಯಿದ್ದಂತೆ ಹೂಡಿಕೆ ಮಾಡಲಾಗುವ ಅನುದಾನಗಳ ಹಣಕಾಸಿನ ಮೇಲೆ ಗಳಿಸಲಾಗುವ ಬಡ್ಡಿಯನ್ನು ಅನುದಾನಕ್ಕೆ ಸೇರಿಸಲಾಗುವುದು.' ನಿಗಮವು 2019–20 ಹಣಕಾಸು ಸಾಲಿನಲ್ಲಿ ಅನುದಾನಗಳ ಹಣಕಾಸಿನ ಮೇಲೆ ರೂ.2,13,85,732/–ರಷ್ಟು ಮೊತ್ತದ ಬಡ್ಡಿಯನ್ನು ಗಳಿಸಿತು ಹಾಗೂ ಅದನ್ನು ಆಸ್ತಿ–ಜವಾಬ್ದಾರಿ ತ:ಖ್ತೆಯಲ್ಲಿ ಮೀಸಲಿರಿಸಿರುವವುಗಳು ಮತ್ತು ಮಿಗುತಾಯಗಳ ಅಡಿಯಲ್ಲಿ ಅಭಿವೃದ್ಧಿ ಅನುದಾನಗಳಿಗೆ ಸೇರಿಸುವ ಬದಲು ಲಾಭ ಮತ್ತು ನಷ್ಟ ತ:ಖ್ತೆಯಲ್ಲಿ ಇತರೆ ವರಮಾನ ಎಂಬುದಾಗಿ ತೋರಿಸಲಾಗಿರುವುದು. ಇದು ಮೀಸಲಿರಿಸಿರುವವುಗಳು ಮತ್ತು ಮಿಗುತಾಯಗಳನ್ನು ರೂ.2,13,85,732/–ರಷ್ಟು ಕಡಿಮೆ ಪ್ರಮಾಣದಲ್ಲಿ ತಿಳಿಸುವಲ್ಲಿ ಹಾಗೂ ಇತರೆ ವರಮಾನವನ್ನು ಅಷ್ಟರಮಟ್ಟಿಗೆ ಅಧಿಕ ಪ್ರಮಾಣದಲ್ಲಿ ತಿಳಿಸುವಲ್ಲಿ ಪರಿಣಮಿಸಿತು. ತತ್ಪರಿಣಾಮವಾಗಿ, ಪ್ರಸಕ್ತ ಸಾಲಿನ ಲಾಭವನ್ನು ರೂ.2,13,85,732/–ರಷ್ಟು ಮೊತ್ತದಿಂದ ಅಧಿಕ ಪ್ರಮಾಣದಲ್ಲಿ ತಿಳಿಸಲಾಗಿರುವುದು.

17. ಸುವರ್ಣ ರಥ (ಟಿಜಿಸಿ) ವಿಲಾಸಿ ಟ್ರೈನಿಗಾಗಿ ಸಾಗಾಣಿಕೆ ಶುಲ್ಕ/ವೆಚ್ಚಗಳ ಕಡೆಗೆ ನೈಋತ್ಯ ರೈಲ್ವೇಗೆ ಪಾವತಿಸಲಾಯಿತು. ನೈಋತ್ಯ ರೈಲ್ವೇ ಹಾಗೂ ನಿಗಮದ ನಡುವೆ ಮಾಡಿಕೊಳ್ಳಲಾಗಿರುವ ಒಡಂಬಡಿಕೆಯಲ್ಲಿನ ಷರತ್ತುಗಳು ಮತ್ತು ನಿಬಂಧನೆಗಳ ಅನುಸಾರ ಸಾಗಾಣಿಕೆ ಶುಲ್ಕ/ವೆಚ್ಚಗಳನ್ನು ಪಾವತಿಸಲಾಗುತ್ತಿರುವುದು. ಪ್ರಸಕ್ತ ಸಾಲಿನ ಸಾಗಾಣಿಕೆ ವೆಚ್ಚ/ಶುಲ್ಕಗಳ ಪಾವತಿಯನ್ನು ಪರಿಶೀಲಿಸಲಾಗಿ, ನೈಋತ್ಯ ರೈಲ್ವೇಯು ರೂ.3.81 ಲಕ್ಷ ಮೊತ್ತದಷ್ಟು ಮನ್ನಾ ಶುಲ್ಕಗಳನ್ನು ಅನುವು ಮಾಡಿದನಂತರ್ರ ಹಾಗೂ ರೂ.5.39 ಲಕ್ಷ ಮೊತ್ತದಷ್ಟು ಬಡ್ಡಿಯನ್ನು ವಿಧಿಸಿದನಂತರ 2019–20 ಹಣಕಾಸು ಸಾಲಿಗೆ ರೂ.95,24,429/–ರಷ್ಟು ಮೊತ್ತದ ಪಾವತಿಗಾಗಿ ತಗಾದೆಯನ್ನು ನಿಗಮಕ್ಕೆ ನೀಡಿದ್ದಿತು ಎಂಬುದನ್ನು ಗಮನಿಸಲಾಯಿತು, ನಿಗಮವು ಈ ವೆಚ್ಚವನ್ನು ಸಾಗಾಣಿಕೆ ಶುಲ್ಕ/ವೆಚ್ಚಗಳ ಅಡಿಯಲ್ಲಿ ಲೆಕ್ಕಕ್ಕೆ

ತೆಗೆದುಕೊಳ್ಳಬೇಕಿದ್ದಿತು, ಇದಕ್ಕೆ ಬದಲಾಗಿ ನಿಗಮವು ಕರ್ನಾಟಕ ಸರ್ಕಾರದ ಅನುದಾನದಿಂದ ರೂ.66.43 ಲಕ್ಷ ಮೊತ್ತವನ್ನು ಹಾಗೂ ಐಆರ್‌ಸಿಟಿಸಿಯಿಂದ (ಜನವರಿ 2020ರಿಂದ ಮಾರ್ಚ್ 2020ರವರೆಗೆ ಗುತ್ತಿಗೆದಾರರು) ಸ್ವೀಕರಿಸಲಾದ ರೂ.23.41 ಲಕ್ಷ ಮೊತ್ತವನ್ನು, ಈ ಹಿಂದಿನ ಅವಧಿಗೆ ರೈಲ್ವೇಯಿಂದ ಸ್ವೀಕರಿಸಲಾದಂತಹ ರೂ.18.57 ಲಕ್ಷ ಮೊತ್ತದಷ್ಟು ಮರುಪಾವತಿಯನ್ನು ವೆಚ್ಚಕ್ಕೆ ಹೊಂದಾಣಿಕೆ ಮಾಡಿದನಂತರ ರೂ.18.66 ಲಕ್ಷ ಮೊತ್ತವನ್ನು ಲೆಕ್ಕಕ್ಕೆ ತೆಗೆದುಕೊಂಡಿತು. ಈ ನಿಟ್ಟಿನಲ್ಲಿ ಅನುದಾನದ ಪ್ರತಿಯಾಗಿ ಹಾಗೂ ಇತರೆ ಸ್ವೀಕರಿಸಬೇಕಾಗಿರುವವುಗಳ ಪ್ರತಿಯಾಗಿ ವೆಚ್ಚಗಳನ್ನು ನಿವ್ವಳಗೊಳಿಸಿದ್ದು ರೂ.104.25 ಲಕ್ಷ (ರೂ.122.91 ಲಕ್ಷ – ರೂ.18.66 ಲಕ್ಷ) ಮೊತ್ತದಷ್ಟು ವೆಚ್ಚವನ್ನು ಕಡಿಮೆ ಪ್ರಮಾಣದಲ್ಲಿ ತಿಳಿಸುವಲ್ಲಿ ಹಾಗೂ ಲಾಭವನ್ನು ಅಷ್ಟರಮಟ್ಟಿಗೆ ಅಧಿಕ ಪ್ರಮಾಣದಲ್ಲಿ ತಿಳಿಸುವಲ್ಲಿ ಪರಿಣಮಿಸಿದ್ದಿತು ಎಂಬುದನ್ನು ಗಮನಿಸಲಾಯಿತು.

18. 2019–20 ಹಣಕಾಸು ಸಾಲಿನಲ್ಲಿ ವಿಲಾಸಿ ಟ್ರೈನು ಕಾರ್ಯಾಚರಣೆಗೊಂಡಿರಲಿಲ್ಲವಾದ್ದರಿಂದ ವಿಲಾಸಿ ಸುವರ್ಣ ರಥದಿಂದ (ಟಿಜಿಸಿ) ವರಮಾನವು ಬಂದಿರಲಿಲ್ಲವಾದ್ದರಿಂದ ಸಾಗಾಣಿಕೆ ವೆಚ್ಚಗಳಿಗಾಗಿ ಅನುದಾನವನ್ನು ಬಿಡುಗಡೆಗೊಳಿಸುವಂತೆ ನಿಗಮವು ಕರ್ನಾಟಕ ಸರ್ಕಾರವನ್ನು ಕೋರಿತು, ನಿಗಮದ ಕೋರಿಕೆಯ ಆಧಾರದ ಮೇರೆಗೆ ಕರ್ನಾಟಕ ಸರ್ಕಾರವು ಸಾಗಾಣಿಕೆ ವೆಚ್ಚದ ಕಡೆಗೆ ರೂ.1,12,40,541/–ರಷ್ಟು ಮೊತ್ತವನ್ನು ಬಿಡುಗಡೆಗೊಳಿಸಿತು ಹಾಗೂ ವರಮಾನ ಅನುದಾನದ ರೂಪದಲ್ಲಿದ್ದಿತು. ಈ ನಿಟ್ಟಿನಲ್ಲಿ ಕರ್ನಾಟಕ ಸರ್ಕಾರವು ಅನುದಾನವನ್ನು ಸಾಗಾಣಿಕೆ ವೆಚ್ಚಗಳ ಕಡೆಗೆ ಬಿಡುಗಡೆಗೊಳಿಸಿದ್ದಿತಾದ್ದರಿಂದ ಹಾಗೂ ಅದನ್ನು ಲಾಭ ಮತ್ತು ನಷ್ಟ ತ:ಖ್ತೆಯ ಮೂಲಕ ಪರಿಗಣಿಸಬೇಕಿದ್ದಿತು, ಆದರೆ, ಇದರ ಬದಲಾಗಿ ನಿಗಮವು ಈ ಮೊತ್ತವನ್ನು ಬಂಡವಾಳ ಅನುದಾನ ಎಂಬುದಾಗಿ ಲೆಕ್ಕವನ್ನಿಟ್ಟಿದ್ದಿತು 'ಎಂಬುದನ್ನು ಗಮನಿಸಲಾಯಿತು. ಇದು ಐಆರ್‌ಸಿಟಿಸಿಯಿಂದ ಸ್ವೀಕರಿಸಬೇಕಿರುವ (ಜನವರಿ 2020ರಿಂಸ ಮಾರ್ಚ್ 2020) ಸಾಗಾಣಿಕೆ ವೆಚ್ಚಗಳ ಕಡೆಗೆ ಇತರೆ ವರಮಾನವನ್ನು ಹಾಗೂ ಪ್ರಸಕ್ತ ಸಾಲಿನ ಲಾಭವನ್ನು ರೂ.104.25 ಲಕ್ಷದಷ್ಟು (ರೂ.122.91 ಲಕ್ಷ – ರೂ.18.66 ಲಕ್ಷ) ಕಡಿಮೆ ಪ್ರಮಾಣದಲ್ಲಿ ತೋರಿಸುವಲ್ಲಿ ಪರಿಣಮಿಸಿದ್ದಿತು.

19. ಕಟ್ಟಡ/ಭೂಮಿ ಮುಂತಾದ ಆಸ್ತಿಗಳು, ಯಂತ್ರಗಳು/ಸ್ಥಾವರ ಮತ್ತು ಉಪಕರಣಗಳು ನಿಗಮದ ಎಲ್ಲಾ 19 ಆಸ್ತಿಗಳಿಗೆ ಸೋಲಾರ್ ದೀಪದ ಅನುಕೂಲತೆ ಒದಗಿಸುವ ಸಲುವಾಗಿ ಭರಿಸಲಾಗಿದ್ದ ರೂ.236.21 ಲಕ್ಷ ಮೊತ್ತವನ್ನು ಒಳಗೊಂಡಿರುತ್ತದೆ. ಈ ಮೊತ್ತವು ಸಾಮಗ್ರಿ/ಉಪಕರಣಗಳ ಸರಬರಾಜಿಗಾಗಿ ಬಿಡುಗಡೆಗೊಳಿಸಲಾಗಿದ್ದ 65% ಮೊತ್ತಕ್ಕೆ ಸಂಬಂಧಿಸಿರುತ್ತದೆ. ಈ ಯೋಜನೆಯನ್ನು ಇನ್ನೂ ಕಾರ್ಯೋದ್ಯುಕ್ತಗೊಳಿಸುವುದು ಬಾಕಿಯಿರುವುದರಿಂದ, ಅದನ್ನು ಬಂಡವಾಳೀಕರಿಸಿರುವುದು ಸರಿಯಾಗಿರುವುದಿಲ್ಲ. ಇದು ಕಟ್ಟಡ/ಭೂಮಿ ಮುಂತಾದ ಆಸ್ತಿಗಳು, ಯಂತ್ರಗಳು/ಸ್ಥಾವರ ಮತ್ತು ಉಪಕರಣಗಳನ್ನು ರೂ.236.21 ಲಕ್ಷ ಮೊತ್ತದಷ್ಟು ಅಧಿಕ ಪ್ರಮಾಣದಲ್ಲಿ ತಿಳಿಸುವಲ್ಲಿ ಹಾಗೂ ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿಗಳನ್ನು ಅಷ್ಟರಮಟ್ಟಿಗೆ ಕಡಿಮೆ ಪ್ರಮಾಣದಲ್ಲಿ ತಿಳಿಸುವಲ್ಲಿ ಪರಿಣಮಿಸಿದ್ದಿತು. ಮೇಲೆ ತಿಳಿಸಲಾದಂತಹ ಆಸ್ತಿಯ ಮೇಲೆ ರೂ.14.16 ಲಕ್ಷ ಮೊತ್ತದಷ್ಟು ಸವಕಳಿಯನ್ನೂ ಸಹ ಅನುವು ಮಾಡಲಾಗಿರುವುದು ಹಾಗೂ ಅದನ್ನು ಅನುದಾನ ಖಾತೆಗೆ ಖರ್ಚಿಗೆ ಹಾಕಲಾಗಿರುವುದು. ಆದ್ದರಿಂದ ಅಭಿವೃದ್ಧಿ ಅನುದಾನವನ್ನು ಅಷ್ಟರಮಟ್ಟಿಗೆ ಕಡಿಮೆ ಪ್ರಮಾಣದಲ್ಲಿ ತಿಳಿಸಲಾಗಿರುವುದು.

20. ನಿಗಮವು 31 ಮಾರ್ಚ್ 2014ರವರೆಗೆ ಬಂಡವಾಳೀಕರಿಸಲಾದಂತಹ ಆಸ್ತಿಗಳಿಗೆ ಸಂಬಂಧಿಸಿದಂತೆ ಕಂಪನಿಗಳ ಅಧಿನಿಯಮ, 2013ರ ಷೆಡ್ಯೂಲು ಖಖರ ಅನುಸಾರ ಸವಕಳಿ ಕಾರ್ಯವಿಧಾನವನ್ನು ಅನುಸರಿಸುತ್ತಿರುವುದಿಲ್ಲ. ಲೆಕ್ಕಪತ್ರಗಳ ಮೇಲೆ ಇದರ ಪ್ರಭಾವವನ್ನು ಪರಿಮಾಣೀಕರಿಸಲು ಸಾಧ್ಯವಿರುವುದಿಲ್ಲ.

21. ಸರ್ಕಾರಿ ಸಾಲಗಳು, ವ್ಯಾಪಾರವ್ಯವಹಾರಗಳಿಗೆ ಸಂಬಂಧಿಸಿದಂತೆ ಪಾವತಿಸಬೇಕಿರುವವುಗಳು, ಇತರೆ ಚಾಲ್ತಿ ಜವಾಬ್ದಾರಿಗಳು, ವ್ಯಾಪಾರವ್ಯವಹಾರಗಳಿಗೆ ಸಂಬಂಧಿಸಿದಂತೆ ಸ್ವೀಕರಿಸಬೇಕಿರುವವುಗಳು ಹಾಗೂ ಇತರೆ ಚಾಲ್ತಿ ಆಸ್ತಿಗಳಿಗೆ ಸಂಬಂಧಿಸಿದಂತೆ ಶಿಲ್ಕುಗಳನ್ನು ಖಚಿತಪಡಿಸಿಕೊಳ್ಳದಿರುವುದು ಹಾಗೂ ಅವುಗಳ ಸಮನ್ವಯಗೊಳಿಸುವಿಕೆಯಿಂದ ಲಾಭ/ನಷ್ಟ ಮತ್ತು ಆಸ್ತಿಗಳು/ಜವಾಬ್ದಾರಿಗಳ ಮೇಲೆ ಸಂಭವಿಸಬಹುದಾದ ಪ್ರಭಾವಗಳು, ಯಾವುದಾದರೂ ಇದ್ದಲ್ಲಿ ಖಚಿತಪಡಿಸಿಕೊಳ್ಳಲು ಸಾಧ್ಯವಿರುವುದಿಲ್ಲ.

22. ನಮಗೆ ನೀಡಲಾದಂತಹ ವಿವರಣೆಗಳಂತೆ, ನಿಗಮವು ಕರ್ನಾಟಕ ಸರ್ಕಾರದಿಂದ ಈ ಹಿಂದೆ ರೂ.4,00,00,000 ಮೊತ್ತದಷ್ಟು ಭದ್ರತೆಯಿಂದ ಕೂಡಿರದ ಸಾಲವನ್ನು ಪಡೆದುಕೊಂಡಿದ್ದಿತು ಹಾಗೂ ಅದು ಸಾಲದ ಮೂಲ ಷರತ್ತುಗಳ ಅನುಸಾರ ಮರುಪಾವತಿಸಲು ನಿಗದಿತ ದಿನಾಂಕವನ್ನು ಮಿತಿಮೀರಿದ್ದಿತು. ಮುಂದುವರೆದು, ಇತರೆ ಚಾಲ್ತಿ ಜವಾಬ್ದಾರಿಗಳಿಗೆ ಸಂಬಂಧಿತ ಟಿಪ್ಪಣಿ ಸಂಖ್ಯೆ 9ರಲ್ಲಿ ಬಹಿರಂಗಪಡಿಸಿರುವಂತೆ ಆಸ್ತಿ–ಜವಾಬ್ದಾರಿ ತ:ಖೆಯ ದಿನಾಂಕದಲ್ಲಿದ್ದಂತೆ 'ರೂ.5,55,49,397/–ರಷ್ಟು ಮೊತ್ತದ ಬಡ್ಡಿ ಪಾವತಿಯು ಬಾಕಿಯಿದ್ದಿತು. ಈ ನಿಟ್ಟಿನಲ್ಲಿ ಪ್ರಸಕ್ತ ಸಾಲಿನ ಅಂತ್ಯದಲ್ಲಿದ್ದಂತೆ ಉಳಿದಿರುವ ಶಿಲ್ಕಿಗೆ ಸಂಬಂಧಿಸಿದಂತೆ ಸಂಬಂಧಿತ ಇಲಾಖೆಯಿಂದ ಖಚಿತಪಡಿಸಿಕೊಂಡಿರುವಿಕೆಗೆ ಸಂಬಂಧಿಸಿದಂತೆ ಅಥವಾ ಸರ್ಕಾರಕ್ಕೆ ಪಾವತಿಸಲು ಬಾಕಿ ಉಳಿದಿರುವ ಅಂತಿಮ ಶಿಲ್ಕಿಗೆ ಸಂಬಂಧಿಸಿದಂತೆ ಖಚಿತಪಡಿಸಿಕೊಂಡಿರುವುದಕ್ಕೆ ಸಂಬಂಧಿತ ದಾಖಲೆಗಳನ್ನು ನಮಗೆ ಒದಗಿಸಲಿಲ್ಲ.

23. ಕ್ರೋಡೀಕೃತ ಹಣಕಾಸು ತ:ಖ್ತೆಗಳನ್ನು ಸಮೀಕ್ಷಿಸಲಾಗಿ, ಷೆಡ್ಯೂಲು III ರ ನಿರ್ದೇಶನಗಳನ್ನು ಅಳವಡಿಸಿಕೊಳ್ಳಲಾಗಿದ್ದಿತಾದರೂ, ಷೆಡ್ಯೂಲು III ರ ಅಗತ್ಯತೆಗಳನ್ನು ಸಂಪೂರ್ಣವಾಗಿ ಅನುಸರಿಸಿರಲಿಲ್ಲ ಎಂಬುದನ್ನು ಗಮನಿಸಲಾಯಿತು. ಈ ನಿಟ್ಟಿನಲ್ಲಿ ಗಮನಿಸಲಾದಂತಹ ಕೆಲವು ನಿರ್ದಿಷ್ಟ ಅಂಶಗಳನ್ನು ಈ ಕೆಳಗೆ ವಿವರಿಸಲಾಗಿದೆ :

I. ಟಿಪ್ಪಣಿ ಸಂಖ್ಯೆ 5ರಲ್ಲಿ ಬಹಿರಂಗಪಡಿಸಲಾಗಿರುವ ದೀರ್ಘಾವಧಿ ಸಾಲಗಳು ಕರ್ನಾಟಕ ಸರ್ಕಾರದ ವಿವಿಧ ಸಂಸ್ಥೆಗಳಿಂದ ಪಡೆದುಕೊಳ್ಳಲಾಗಿರುವ ರೂ.4.00 ಕೋಟಿ ಮೊತ್ತದಷ್ಟು ಸಾಲವನ್ನು ಒಳಗೊಂಡಿರುತ್ತದೆ ಹಾಗೂ ಈ ಶಿಲ್ಕು ಹಿಂದಿನ ಸಾಲಿನಿಂದ ಮುಂದುವರೆದುಕೊಂಡು ಬಂದಿರುತ್ತದೆ. ಈ ಸಾಲಗಳಿಗೆ ಸಂಬಂಧಿತ ಷರತ್ತುಗಳು ಈ ಸಾಲಗಳು ಮರುಪಾವತಿಗಾಗಿನ ದಿನಾಂಕಗಳನ್ನು ಮಿತಿಮೀರಿರುತ್ತವೆ ಎಂಬುದನ್ನು ತೋರಿಸಿಕೊಟ್ಟವು ಮತ್ತು ಆದ್ದರಿಂದ ಈ ಸಾಲಗಳನ್ನು ಅಲ್ಪಾವಧಿ ಸಾಲಗಳು ಎಂಬುದಾಗಿ ವರ್ಗೀಕರಿಸಬೇಕಿದ್ದಿತು.

II. ರೂ.4,59,40,890 ಮೊತ್ತದಷ್ಟು ಇತರೆ ದೀರ್ಘಾವಧಿ ಜವಾಬ್ದಾರಿಗಳು ಪ್ರತಿನಿಧಿಗಳು, ಗುತ್ತಿಗೆದಾರರುಗಳಿಂದ ವಿವಿಧ ಭದ್ರತಾ ಠೇವಣಿಗಳು ಹಾಗೂ ಸಂಗ್ರಹಿಸಲಾಗಿದ್ದ ಇತರೆ ಬಾಡಿಗೆ ಠೇವಣಿಗಳನ್ನು ಒಳಗೊಂಡಿರುವುದು. ಈ ನಿಟ್ಟಿನಲ್ಲಿ ವಾಯಿದೆ ದಿನಾಂಕದೊಂದಿಗೆ ವೈಯಕ್ತಿಕ ವ್ಯಕ್ತಿವಾರು ಐಟಂವಾರು ವಿವರಗಳನ್ನು ಒದಗಿಸಲಿಲ್ಲ ಹಾಗೂ ಈ ಜವಾಬ್ದಾರಿಗಳನ್ನು ಚಾಲ್ತಿ ಮತ್ತು ಚಾಲ್ತಿಯೇತರವುಗಳನ್ನಾಗಿ ವರ್ಗೀಕರಿಸಿರುವುದಿಲ್ಲ.

III. ಟಿಪ್ಪಣಿ ಸಂಖ್ಯೆ 17ರಲ್ಲಿ ರೂ.4,98,49,654/–ರಷ್ಟು ವ್ಯಾಪಾರವ್ಯವಹಾರಗಳಿಗೆ ಸಂಬಂಧಿಸಿದಂತೆ ಸ್ವೀಕರಿಸಬೇಕಾದವುಗಳನ್ನು ಬಹಿರಂಗಪಡಿಸಲಾಗಿರುವುದು. ಈ ನಿಟ್ಟಿನಲ್ಲಿ ನಿಗಮವು ಬಿಲ್ಲುವಾರು/ತಂಡವಾರು ಬಾಕಿಯಿರುವ ವಿವರಗಳನ್ನು ಸಮರ್ಪಕವಾಗಿ ನಿರ್ವಹಿಸಿರುವುದಿಲ್ಲ ಹಾಗೂ ಹಣಕಾಸು ತ:ಖ್ತೆಗಳಲ್ಲಿ 31 ಮಾರ್ಚ್ 2020ರ ಅಂತ್ಯದಲ್ಲಿದ್ದಂತೆ 6 ತಿಂಗಳುಗಳಿಗೂ ಮೀರಿದಂತೆ ಇರುವ ಬಾಕಿಗಳಿಗೆ ಸಂಬಂಧಿಸಿದಂತೆ ಸಮರ್ಪಕ ವರ್ಗೀಕರಣವನ್ನು ಮಾಡಿರುವುದಿಲ್ಲ. ಮೇಲೆ ತಿಳಿಸಿರುವಂತೆ, ವ್ಯಾಪಾರವ್ಯವಹಾರಗಳಿಗೆ ಸಂಬಂಧಿಸಿದಂತೆ ಸ್ವೀಕರಿಸಬೇಕಾಗಿರುವವುಗಳ ಅಡಿಯಲ್ಲಿ ಆಸ್ತಿ–ಜವಾಬ್ದಾರಿ ದಿನಾಂಕದಲ್ಲಿದ್ದಂತೆ ರೂ.2,24,40,972/–ರಷ್ಟು ಮೊತ್ತವು ಬಾಕಿಯಿದ್ದಿತು.

ಸದಸ್ಯರ ಗಮನ ಸೆಳೆಯುವ ಸಲುವಾಗಿ ಒತ್ತಿಹೇಳಲಾಗುತ್ತಿರುವ ವಿಷಯಗಳು :

1. *ನಿಗಮವು ಸ್ಥಿರಾಸ್ತಿಗಳ ರಿಜಿಸ್ಟರನ್ನು ನಿರ್ವಹಿಸಿಲ್ಲವಾದ್ದರಿಂದ, ಕಟ್ಟಡ/ಭೂಮಿ ಮುಂತಾದ ಆಸ್ತಿಗಳು, ಯಂತ್ರಗಳು/ಸ್ಥಾವರ ಮತ್ತು ಉಪಕರಣಗಳ ಮೌಲ್ಯ ಹಾಗೂ ಅವುಗಳ ಮೇಲಿನ ಸವಕಳಿಯ ಯಥಾರ್ಥತೆಯ ಬಗ್ಗೆ ನಾವು ಯಾವುದೇ ಟೀಕೆಟಿಪ್ಪಣಿಯನ್ನು ಮಾಡಲು ಸಾಧ್ಯವಾಗಲಿಲ್ಲ.*

2. *ನಿಗಮವು ಎಲ್ಲಾ ಘಟಕಗಳಿಗೆ ಸಂಬಂಧಿಸಿದಂತೆ 31 ಮಾರ್ಚ್ 2020ರಲ್ಲಿದ್ದಂತೆ ಅಂತಿಮ ದಾಸ್ತಾನಿನ ಭೌತಿಕ ಪರಿಶೀಲನೆಯನ್ನು ನಡೆಸಿರುವುದಿಲ್ಲ. ಸವಿವರ ಭೌತಿಕ ಪರಿಶೀಲನಾ ದಾಖಲೆಗಳ ಅನುಪಸ್ಥಿತಿಯಲ್ಲಿ ಘಟಕದ ವ್ಯವಸ್ಥಾಪಕರು ಪ್ರಮಾಣೀಕರಿಸಿದಂತೆ ಅಂತಿಮ ದಾಸ್ತಾನನ್ನು ಹಣಕಾಸು ತ:ಖ್ತೆಗಳಲ್ಲಿ ಪರಿಗಣಿಸಲಾಗಿರುವುದು.*

3. *ಕರ್ನಾಟಕ ಸರ್ಕಾರವು ಆನೇಕಲ್ಲು ಮತ್ತು ಬಿಳಿಗಿರಿರಂಗನ ಬೆಟ್ಟಗಳಲ್ಲಿ ಅನುದಾನಗಳ ಪೈಕಿಯಿಂದ ಹೋಟೆಲು ಯೋಜನೆಗಳ ನಿರ್ಮಾಣವನ್ನು ನಿಗಮಕ್ಕೆ ವಹಿಸಿತು. ಈ ಯೋಜನೆಗಳನ್ನು ರೂ.2,16,07,919/–ರಷ್ಟು ಮೌಲ್ಯದಲ್ಲಿ ಪ್ರಸಕ್ತ ಸಾಲಿನಲ್ಲಿ ಬಂಡವಾಳೀಕರಿಸಲಾಯಿತು, ಆದಾಗ್ಯೂ, ಇತರೆ ಸ್ಥಳಗಳಲ್ಲಿ ರೂ.46,00,797/–ರಷ್ಟು ಮೌಲ್ಯದಲ್ಲಿ ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿಗಳ ಅಡಿಯಲ್ಲಿ ತೋರಿಸಲಾಗಿದ್ದಿತು, ನಮಗೆ ನೀಡಲಾದ ವಿವರಣೆಗಳಂತೆ ಸಂಬಂಧಿತ ಭೂಮಿಯ ಹಕ್ಕು ಪತ್ರಗಳು ನಿಗಮದ ಹೆಸರಿನಲ್ಲಿ ಇರುವುದಿಲ್ಲ.*

4. *ನಾವು ಈ ಮೂಲಕ ಟಿಪ್ಪಣಿ ಸಂಖ್ಯೆ 45ರ ಕಡೆಗೆ ನಿಮ್ಮ ಗಮನವನ್ನು ಸೆಳೆಯುತ್ತಿರುವೆವು, ಕಂಪನಿಯ ಭವಿಷ್ಯದಲ್ಲಿನ ಕಾರ್ಯಾಚರಣೆಗಳ ಮೇಲೆ ಕೋವಿಡ್ – 19ರ ಪ್ರಭಾವದ ಬಗ್ಗೆ ಕೆಲವು ಅನಿಶ್ಚಿತತೆಗಳು ಇರುವುದಾಗಿ ಈ ಟಿಪ್ಪಣಿಯಲ್ಲಿ ತಿಳಿಸಲಾಗಿರುವುದು. ತನ್ನ ಕಾರ್ಯಚಟುವಟಿಕೆಗಳನ್ನು ಮುಂದುವರೆಸಿಕೊಂಡು ಹೋಗುವ ಬಗ್ಗೆ ಊಹೆಯ ಸೂಕ್ತತೆಯು ಕಂಪನಿಯ ವ್ಯಾಪಾರವ್ಯವಹಾರದ ಮೇಲೆ ಕೋವಿಡ್ – 19ರ ಪ್ರಭಾವವನ್ನು ತೊಡೆದುಹಾಕುವ ಸಲುವಾಗಿ ಕಂಪನಿಯು ಕೈಗೊಳ್ಳುವಂತಹ ವಿವಿಧ ಕ್ರಮಗಳನ್ನು ಸಾಕಾರಗೊಳಿಸುವುದರ ಮೇಲೆ ಅವಲಂಭಿಸಿರುತ್ತದೆ.*

ಪ್ರತ್ಯೇಕ ಹಣಕಾಸು ತ:ಖ್ತೆಗಳು ಮತ್ತು ಅವುಗಳ ಮೇಲಿನ ಲೆಕ್ಕಪರಿಶೋಧಕರುಗಳ ವರದಿಯನ್ನು ಹೊರತುಪಡಿಸಿದಂತೆ ಇತರೆ ಮಾಹಿತಿ

ಇತರೆ ಮಾಹಿತಿಗಳನ್ನು ಒದಗಿಸುವಲ್ಲಿ ಕಂಪನಿಯ ವ್ಯವಸ್ಥಾಪನೆಯು ಹಾಗೂ ಕಂಪನಿಯ ನಿರ್ದೇಶಕರುಗಳ ಮಂಡಳಿಯು ಜವಾಬ್ದಾರಿಯುತವಾಗಿರುತ್ತದೆ. ಇತರೆ ಮಾಹಿತಿಗಳು ಕಂಪನಿಯ ವಾರ್ಷಿಕ ವರದಿಯಲ್ಲಿ ಒಳಗೊಂಡಿರುವಂತಹ ಮಾಹಿತಿಯನ್ನು ಒಳಗೊಂಡಿರುತ್ತವೆ, ಆದರೆ ಹಣಕಾಸು ತ:ಖ್ತೆಗಳನ್ನು ಹಾಗೂ ಅವುಗಳ ಮೇಲಿನ ನಮ್ಮ ಲೆಕ್ಕಪರಿಶೋಧನಾ ವರದಿಯನ್ನು ಒಳಗೊಂಡಿರುವುದಿಲ್ಲ.

ಹಣಕಾಸು ತ;ಖ್ತೆಗಳ ಮೇಲಿನ ನಮ್ಮ ಅಭಿಪ್ರಾಯವು ಇತರೆ ಮಾಹಿತಿಗಳನ್ನು ಒಳಗೊಂಡಿರುವುದಿಲ್ಲ ಹಾಗೂ ಅವುಗಳ ಮೇಲೆ ನಾವು ಯಾವುದೇ ರೀತಿಯಲ್ಲಿಯೂ ಭರವಸೆಗಳ ನಿರ್ಣಯವನ್ನು ವ್ಯಕ್ತಪಡಿಸುವುದಿಲ್ಲ.

ಹಣಕಾಸು ತ:ಖ್ತೆಗಳ ನಮ್ಮ ಲೆಕ್ಕಪರಿಶೋಧನೆಯ ಸಂಬಂಧವಾಗಿ, ನಮ್ಮ ಜವಾಬ್ದಾರಿಯು ಇತರೆ ಮಾಹಿತಿಗಳನ್ನು ಓದುವುದಾಗಿರುತ್ತದೆ ಹಾಗೂ ಆ ರೀತಿ ಓದುವ ಸಮಯದಲ್ಲಿ, ಇತರೆ ಮಾಹಿತಿಗಳು ಹಣಕಾಸು ತ:ಖ್ತೆಗಳೊಂದಿಗೆ ಅಥವಾ ನಾವು ನಮ್ಮ ಲೆಕ್ಕಪರಿಶೋಧನೆಯಲ್ಲಿ ಪಡೆದುಕೊಂಡಿರುವಂತಹ ಅರಿವು/ಮಾಹಿತಿಗಳ ಜೊತೆಯಲ್ಲಿ ವಿಷಯಕವಾಗಿ ಅಸಮಂಜಸತೆಗಳಿಂದ ಕೂಡಿರುತ್ತವೆಯೇ ಅಥವಾ ವಿಷಯಕವಾಗಿ ತಪ್ಪು ಹೇಳಿಕೆಗಳಿಂದ ಕೂಡಿರುತ್ತವೆಯೇ ಎಂಬುದನ್ನು ಪರಿಗಣಿಸುವೆವು.

ನಾವು ನಿರ್ವಹಿಸಿದ ಕಾರ್ಯಚಟುವಟಿಕೆಗಳ ಆಧಾರದ ಮೇರೆಗೆ, ಇತರೆ ಮಾಹಿತಿಗಳಲ್ಲಿ ಒಂದು ವಿಷಯಕ ತಪ್ಪು ಹೇಳಿಕೆ ಇರುವುದಾಗಿ ನಾವು ತೀರ್ಮಾನಕ್ಕೆ ಬಂದಲ್ಲಿ, ನಾವು ಅಂತಹ ವಾಸ್ತವಾಂಶವನ್ನು ವರದಿ ಮಾಡುವ ಅಗತ್ಯತೆಯಿರುತ್ತದೆ. ನಾವು ಈ ನಿಟ್ಟಿನಲ್ಲಿ ಆ ರೀತಿ ವರದಿ ಮಾಡಲು ಯಾವುದೇ ಅಂಶಗಳು/ವಿಷಯಗಳು ಇರುವುದಿಲ್ಲ.

ಹಣಕಾಸು ತ:ಖ್ತೆಗಳ ತಯಾರಿಕೆಗೆ ಸಂಬಂಧಿಸಿದಂತೆ ವ್ಯವಸ್ಥಾಪನೆ / ಆಡಳಿತ ಮಂಡಳಿಯ ಜವಾಬ್ದಾರಿ

ಕಂಪನಿಗಳ (ಲೆಕ್ಕಪತ್ರಗಳು) ನಿಯಮಗಳು, 2014ರ ನಿಯಮ 7ರ ಜೊತೆಯಲ್ಲಿ ಓದಲ್ಪಡುವ ಅಧಿನಿಯಮದ 133ನೇ ಪರಿಚ್ಛೇದದಲ್ಲಿ ನಿರ್ದಿಷ್ಟಪಡಿಸಲಾಗಿರುವ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಮಾನದಂಡಗಳು ಒಳಗೊಂಡಂತೆ ಭಾರತದಲ್ಲಿ ಸರ್ವೇಸಾಮಾನ್ಯವಾಗಿ ಒಪ್ಪಿಕೊಳ್ಳಲಾಗಿರುವ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ತತ್ವಗಳ ಅನುಸಾರ ಕಂಪನಿಯ ಹಣಕಾಸಿನ ಸ್ಥಿತಿಗತಿಗಳ, ಹಣಕಾಸಿನ ನಿರ್ವಹಣೆ ಹಾಗೂ ಹಣಕಾಸಿನ ಹರಿವಿನ ಬಗ್ಗೆ ಒಂದು ಸತ್ಯಾಸತ್ಯತೆಯಿಂದ ಕೂಡಿದ ಹಾಗೂ ನ್ಯಾಯಸಮ್ಮತ ಅಭಿಪ್ರಾಯವನ್ನು ನೀಡುವಂತಹ ಈ ಹಣಕಾಸು ತ:ಖ್ತೆಗಳನ್ನು ತಯಾರಿಸುವುದಕ್ಕೆ ಸಂಬಂಧಿಸಿದಂತೆ ಕಂಪನಿಗಳ ಅಧಿನಿಯಮ, 2013ರ ಪರಿಚ್ಛೇದ 134 (5)ರಲ್ಲಿ ಉಲ್ಲೇಖಿಸಲಾಗಿರುವ ವಿಷಯಗಳಿಗೆ ಸಂಬಂಧಿಸಿದಂತೆ ಕಂಪನಿಯ ನಿರ್ದೇಶಕರುಗಳ ಮಂಡಳಿಯು ಜವಾಬ್ದಾರಿಯುತವಾಗಿರುತ್ತದೆ. ಈ ಜವಾಬ್ದಾರಿಯು ಅಧಿನಿಯಮದ ಅನುವುಗಳ ಅನುಸಾರ ಕಂಪನಿಯ ಆಸ್ತಿಗಳ ಸಂರಕ್ಷಣೆಗಾಗಿ ಹಾಗೂ ವಂಚನೆಗಳು ಮತ್ತು ಇತರೆ ನಿಯಮಬಾಹಿರತೆಗಳನ್ನು ತಡೆಯುವ ಸಲುವಾಗಿ ಸೂಕ್ತ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಕಾರ್ಯನೀತಿಗಳನ್ನು ಆಯ್ಕೆ ಮಾಡುವುದು ಹಾಗೂ ಅನ್ವಯಗೊಳಿಸುವುದು, ಲೆಕ್ಕಪತ್ರಗಳ ದಾಖಲೆಗಳ ಯಾಥಾರ್ಥತೆ ಮತ್ತು ಪರಿಪೂರ್ಣತೆಯನ್ನು ಖಚಿತಪಡಿಸಿಕೊಳ್ಳಲು ನ್ಯಾಯಸಮ್ಮತವಾದ ಹಾಗೂ ವಿವೇಚನೆಯಿಂದ ಕೂಡಿದ ತೀರ್ಮಾನಗಳನ್ನು ತೆಗೆದುಕೊಳ್ಳುವುದು ಮತ್ತು ಅಂದಾಜುಗಳನ್ನು ಮಾಡುವುದು, ಒಂದು ಸತ್ಯಾಸತ್ಯತೆಯಿಂದ ಹಾಗೂ ನ್ಯಾಯಸಮ್ಮತತೆಯಿಂದ ಕೂಡಿದ, ತಪ್ಪು ಹೇಳಿಕೆಗಳಿಂದ ಹೊರತಾದ ಹಣಕಾಸಿನ ತ:ಖ್ತೆಗಳನ್ನು ತಯಾರಿಸುವ ಹಾಗೂ ಮಂಡಿಸುವುದಕ್ಕೆ ಸೂಕ್ತವಾದಂತಹ ಸಮರ್ಪಕ ಆಂತರಿಕ ಹಣಕಾಸು ನಿಯಂತ್ರಣಗಳನ್ನು ರೂಪಿಸುವುದು, ಕಾರ್ಯಗತಗೊಳಿಸುವುದು ಹಾಗೂ ನಿರ್ವಹಿಸುವುದನ್ನು ಕೂಡ ಒಳಗೊಂಡಿರುತ್ತದೆ.

ಹಣಕಾಸು ತ:ಖ್ತೆಗಳನ್ನು ತಯಾರಿಸುವಲ್ಲಿ, ವ್ಯವಸ್ಥಾಪನೆಯು ತನ್ನ ಕಂಪನಿಯು ತನ್ನ ವ್ಯವಹಾರಗಳನ್ನು ಮುಂದುವರೆಸಿಕೊಂಡು ಹೋಗುವ ಕಂಪನಿಯನ್ನಾಗಿ ನಡೆಸಿಕೊಂಡು ಹೋಗುವ ಸಾಮರ್ಥ್ಯವನ್ನು ಹೊಂದಿರುವುದೇ ಎಂಬುದನ್ನು ನಿರ್ಧಾರಣೆ ಮಾಡುವಲ್ಲಿ ಜವಾಬ್ದಾರಿಯುತವಾಗಿರುತ್ತದೆ ಹಾಗೂ ವ್ಯವಸ್ಥಾಪನೆಯು ಕಂಪನಿಯನ್ನು ಸಮಾಪನಗೊಳಿಸುವ ಅಥವಾ ಅದರ ಕಾರ್ಯಚರಣೆಗಳನ್ನು ಮುಕ್ತಾಯಗೊಳಿಸುವ ಅಥವಾ ಆ ರೀತಿ ತೀರ್ಮಾನಕ್ಕೆ ಬರದಿರಲು ವಾಸ್ತವಿಕ ಬದಲಿ ಚಿಂತನೆಗಳು ಇಲ್ಲದಿರದ ಹೊರತು, ಲೆಕ್ಕಪತ್ರಗಳನ್ನು ಕಂಪನಿಯು ತನ್ನ ವ್ಯಾಪಾರ ವ್ಯವಹಾಂಗಳನ್ನು ಮುಂದುವರೆಸಿಕೊಂಡು ಹೋಗುವ ಆಧಾರದ ಮೇರೆಗೆ ತಯಾರಿಸಲು ಜವಾಬ್ದಾರಿಯುತವಾಗಿರುತ್ತದೆ.

ಕಂಪನಿಯ ಹಣಕಾಸು ತ:ಖ್ತೆಗಳ ತಯಾರಿಕೆಯ ಪ್ರಕ್ರಿಯೆಗಳನ್ನು ಮೇಲ್ವಿಚಾರಣೆ ಮಾಡುವಲ್ಲಿಯೂ ಕೂಡ ಕಂಪನಿಯ ನಿರ್ದೇಶಕರುಗಳ ಮಂಡಳಿಯು ಜವಾಬ್ದಾರಿಯುತವಾಗಿರುತ್ತದೆ.

ಲೆಕ್ಕಪರಿಶೋಧಕರುಗಳ ಜವಾಬ್ದಾರಿ:

ಹಣಕಾಸು ತ:ಖ್ತೆಗಳು, ಒಟ್ಟಾರೆಯಾಗಿ ವಂಚಿಸುವ ಉದ್ದೇಶದಿಂದಲೇ ಆಗಿರಲಿ ಅಥವಾ ಕೈ ಅಚಾತುರ್ಯದಿಂದಲೇ ಆಗಿರಲಿ ಇರಬಹುದಾದಂತಹ ವಿಷಯಕ ತಪ್ಪು ಹೇಳಿಕೆಗಳಿಂದ ಮುಕ್ತವಾಗಿರುವವೆ ಎಂಬುದರ ಬಗ್ಗೆ ಒಂದು ನ್ಯಾಯಸಮ್ಮತ ಭರವಸೆಯನ್ನು ಪಡೆಯುವುದು, ನಮ್ಮ ಅಭಿಪ್ರಾಯವನ್ನು ಒಳಗೊಂಡಿರುವಂತಹ ಲೆಕ್ಕಪರಿಶೋಧಕರ ವರದಿಯನ್ನು ನೀಡುವುದು ನಮ್ಮ ಉದ್ದೇಶಗಳಾಗಿರುತ್ತವೆ. ನ್ಯಾಯಸಮ್ಮತ ಭರವಸೆಯು ಒಂದು ಉನ್ನತ ಮಟ್ಟದ ಭರವಸೆಯಾಗಿರುತ್ತದೆ, ಆದರೆ ಭಾರತೀಯ ಚಾರ್ಟರ್ಡ್ ಅಕೌಂಟೆಂಟ್‌ಗಳ ಸಂಸ್ಥೆಯು ಲೆಕ್ಕಪರಿಶೋಧನೆಗೆ ಸಂಬಂಧಿಸಿದಂತೆ ನೀಡಿರುವಂತಹ ಮಾನದಂಡಗಳ ಅನುಸಾರ ನಡೆಸಲಾಗಿರುವ ಲೆಕ್ಕಪರಿಶೋಧನೆಯು ಸದಾಕಾಲವೂ, ಒಂದು ವಿಷಯಕ ತಪ್ಪು ಹೇಳಿಕೆಗಳು ಇರುವ ಸಂದರ್ಭಗಳಲ್ಲೆಲ್ಲವೂ ಪತ್ತೆಹಚ್ಚಲಾಗುವುದು ಎಂಬುದರ ಬಗ್ಗೆ ಯಾವುದೇ ಖಾತರಿಯಿಂದ ಕೂಡಿರುವುದಿಲ್ಲ. ತಪ್ಪು ಹೇಳಿಕೆಗಳು ವಂಚನೆಗಳು ಅಥವಾ ಕೈಯಿಂದ ಆದಂತಹ ಅಚಾತುರ್ಯಗಳ ಕಾರಣ ಉದ್ಭವಿಸುತ್ತವೆ ಹಾಗೂ ವೈಯಕ್ತಿಕವಾಗಿ ಅಥವಾ ಒಟ್ಟಾರೆಯಾಗಿ ಈ ಹಣಕಾಸು ತ:ಖ್ತೆಗಳ ಆಧಾರದ ಮೇರೆಗೆ ಬಳಕೆದಾರರುಗಳು ತೆಗೆದುಕೊಳ್ಳಲಾದಂತಹ ಆರ್ಥಿಕ ನಿರ್ಣಯಗಳ ಮೇಲೆ ಪರಿಣಾಮ ಭೀರುವುದನ್ನು ನ್ಯಾಯಸಮ್ಮತವಾಗಿ ನಿರೀಕ್ಷಿಸಿದಲ್ಲಿ ಅವುಗಳನ್ನು ಪರಿಗಣಿಸಲಾಗುವುದು.

ಲೆಕ್ಕಪರಿಶೋಧನೆಯ ಮಾನದಂಡಗಳ ಅನುಸಾರ ನಡೆಸಲಾಗುವ ಒಂದು ಲೆಕ್ಕಪರಿಶೋಧನೆಯ ಒಂದು ಭಾಗವಾಗಿ, ನಾವು ನಮ್ಮ ಸಂಪೂರ್ಣ ಲೆಕ್ಕಪರಿಶೋಧನೆಯ ಪ್ರಕ್ರಿಯೆಗಳ ಉದ್ದಕ್ಕೂ ನಮ್ಮ ವೃತ್ತೀಯ ತೀರ್ಮಾನವನ್ನು ಚಲಾಯಿಸುವೆವು. ಈ ಕೆಳಗಿನ ಅಂಶಗಳನ್ನೂ ಸಹ ನಾವು ಗಮನದಲ್ಲಿಟ್ಟುಕೊಂಡಿರುವೆವು :

- ವಂಚಿಸುವ ಉದ್ದೇಶದಿಂದಲೇ ಆಗಿರಲಿ ಅಥವಾ ಕೈಯಿಂದ ಆಗುವಂತಹ ಅಚಾತುರ್ಯದಿಂದಲೇ ಆಗಿರಲಿ ಇರಬಹುದಾದಂತಹ ವಿಷಯಕ ತಪ್ಪು ಹೇಳಿಕೆಗಳನ್ನು ಗುರುತಿಸುವುದು ಹಾಗೂ ಅವುಗಳ ಸಂಭಾವ್ಯ ಅಪಾಯಗಳ ನಿರ್ಧಾರಣೆ ಮಾಡುವುದು, ಇಂತಹ ಸಂಭಾವ್ಯ ಅಪಾಯಗಳಿಗೆ ಸ್ಪಂದಿಸುವಂತಹ ಲೆಕ್ಕಪರಿಶೋಧನಾ ಪೂರ್ವಭಾವಿ ಯೋಜನೆಯನ್ನು ರೂಪಿಸುವುದು ಹಾಗೂ ಲೆಕ್ಕಪರಿಶೋಧನಾ ಕಾರ್ಯವಿಧಾನಗಳನ್ನು ನಡೆಸಿಕೊಂಡು ಹೋಗುವುದು ಹಾಗೂ ನಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುವ ಸಲುವಾಗಿ ಸಮರ್ಪಕವಾಗಿರುವಂತಹ ಹಾಗೂ ಸೂಕ್ತವಾಗಿರುವಂತಹ ಲೆಕ್ಕಪರಿಶೋಧನಾ ಸಾಕ್ಷ್ಯಾಧಾರ ದಾಖಲೆಗಳನ್ನು ಪಡೆದುಕೊಳ್ಳುವುದು. ವಂಚನೆ, ಸುಳ್ಳು ಸಹಿ/ಸುಳ್ಳು ದಾಖಲೆ ಸೃಷ್ಟನೆ, ಉದ್ದೇಶಪೂರ್ವಕ ಲೋಪದೋಷಗಳು, ತಪ್ಪುಗಳಿಂದ ಕೂಡಿದ ನಿರೂಪಣೆಗಳು/ಹೇಳಿಕೆಗಳು ಅಥವಾ ಆಂತರಿಕ ನಿಯಂತ್ರಣಗಳನ್ನು ಪಾಲಿಸದಿರುವುದು, ಇತ್ಯಾದಿಗಳನ್ನು ಒಳಗೊಂಡಿರಬಹುದಾದ್ದರಿಂದ ಒಂದು ವಿಷಯಕ ತಪ್ಪು ಹೇಳಿಕೆಗಳನ್ನು ಪತ್ತೆಹಚ್ಚದಿರುವ ಸಂಭಾವ್ಯ ಅಪಾಯವು ತಪ್ಪುಗಳು ಅಥವಾ ಲೋಪದೋಷಗಳ ಕಾರಣದಿಂದ ಇರಬಹುದಾದಂತಹ ಸಂಭಾವ್ಯ ಅಪಾಯಕ್ಕಿಂತಲೂ ದೊಡ್ಡದಾಗಿರುತ್ತದೆ, ಇಂತಹವುಗಳನ್ನೂ ಸಹ ನಾವು ಗುರುತಿಸುವೆವು.

- ಸಂದರ್ಭಗಳಿಗೆ ಸೂಕ್ತವೆನಿಸುವಂತಹ ಲೆಕ್ಕಪರಿಶೋಧನಾ ಕಾರ್ಯವಿಧಾನಗಳನ್ನು ರೂಪಿಸುವ ಉದ್ದೇಶದಿಂದ ಲೆಕ್ಕಪರಿಶೋಧನೆಗೆ ಸಂಬಂಧಿಸಿರುವಂತಹ ಕಂಪನಿಯ ಆಂತರಿಕ ನಿಯಂತ್ರಣಗಳ ಮಾಹಿತಿಯನ್ನು ಪಡೆದುಕೊಳ್ಳುವುದು. ಕಂಪನಿಗಳ ಅಧಿನಿಯಮ, 2013ರ ಪರಿಚ್ಛೇದ 143 (3)(i)ರ ಅಡಿಯಲ್ಲಿ, ಕಂಪನಿಯು ಸಮರ್ಪಕ ಆಂತರಿಕ ಹಣಕಾಸು ನಿಯಂತ್ರಣಗಳ ವ್ಯವಸ್ಥೆಯನ್ನು ಹೊಂದಿರುವುದೆ ಹಾಗೂ ಅಂತಹ ನಿಯಂತ್ರಣಗಳ ಕಾರ್ಯಾಚರಣೆಗಳು ಪರಿಣಾಮಕಾರಿತ್ವದಿಂದ ಕೂಡಿರುವವೆ ಎಂಬುದರ ಬಗ್ಗೆ ವರದಿಯನ್ನು ಸಲ್ಲಿಸುವುದಕ್ಕೂ ಸಹ ನಾವು ಜವಾಬ್ದಾರರಾಗಿರುವೆವು.

- ಉಪಯೋಗಿಸಿಕೊಳ್ಳಲಾಗಿರುವಂತಹ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಕಾರ್ಯನೀತಿಗಳ ಸೂಕ್ತತೆಯನ್ನು ಮೌಲ್ಯಮಾಪನ ಮಾಡುವುದು ಹಾಗೂ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಅಂದಾಜುಗಳ ನ್ಯಾಯಸಮ್ಮತತೆ ಹಾಗೂ ವ್ಯವಸ್ಥಾಪನೆಯು ಈ ನಿಟ್ಟಿನಲ್ಲಿ ಮಾಡಿರುವಂತಹ ಬಹಿರಂಗಪಡಿಸುವಿಕೆಗಳು ಸೂಕ್ತವಾಗಿರುವವೆ ಎಂಬುದರ ಬಗ್ಗೆ ಮೌಲ್ಯಮಾಪನ ಮಾಡುವುದು.

- ಕಂಪನಿಯು ತನ್ನ ಕಾರ್ಯಾಚರಣೆಗಳನ್ನು ಮುಂದುವರೆಸಿಕೊಂಡು ಹೋಗುತ್ತಿರುವ ಆಧಾರದ ಮೇರೆಗಿನ ಲೆಕ್ಕವನಿಡುವಿಕೆಯನ್ನು ವ್ಯವಸ್ಥಾಪನೆಯು ಬಳಸಿಕೊಳ್ಳುತ್ತಿರುವುದರ ಸೂಕ್ತತೆಯ ಬಗ್ಗೆ ಒಂದು ನಿರ್ಣಯಕ್ಕೆ ಬರುವುದು ಹಾಗೂ ಪಡೆದುಕೊಳ್ಳಲಾಗಿರುವಂತಹ ಲೆಕ್ಕಪರಿಶೋಧನಾ ಸಾಕ್ಷ್ಯಾಧಾರಗಳ ಆಧಾರದ ಮೇರೆಗೆ, ತನ್ನ ಕಾರ್ಯಾಚರಣೆಗಳನ್ನು ಮುಂದುವರೆಸಿಕೊಂಡು ಹೋಗುತ್ತಿರುವ ಸಂಸ್ಥೆಯಾಗಿ ಮುಂದುವರೆಯುವ ಕಂಪನಿಯ ಸಾಮರ್ಥ್ಯತೆಯ ಬಗ್ಗೆ ಗಮನಾರ್ಹವಾದಂತಹ ರೀತಿಯಲ್ಲಿ ಅನುಮಾನವನ್ನು ಸೃಷ್ಟಿಸುವಂತಹ ಘಟನೆಗಳು ಅಥವಾ ಪರಿಸ್ಥಿತಿಗಳಿಗೆ ಸಂಬಂಧಿಸಿದಂತೆ ಒಂದು ವಿಷಯಕ ಅನಿಶ್ಚಿತತೆಯು ಇರುವುದೆ ಎಂಬುದರ ಬಗ್ಗೆ ಒಂದು ನಿರ್ಣಯಕ್ಕೆ ಬರುವುದು. ವಿಷಯಕ ಅನಿಶ್ಚಿತತೆಯು ಇರುವುದಾಗಿ ನಮ್ಮ ನಿರ್ಣಯವನ್ನು ವ್ಯಕ್ತಪಡಿಸಿದಲ್ಲಿ, ಹಣಕಾಸು ತ:ಖ್ತೆಗಳಲ್ಲಿನ ಬಹಿರಂಗಪಡಿಸುವಿಕೆಗಳಿಗೆ ಸಂಬಂಧಿತ ವರದಿಯಲ್ಲಿ ನಾವು ಸದಸ್ಯರುಗಳ ಗಮನವನ್ನು ಸೆಳೆಯುವ ಅಗತ್ಯತೆಯಿರುತ್ತದೆ ಅಥವಾ, ಅಂತಹ ಬಹಿರಂಗಪಡಿಸುವಿಕೆಗಳು ಅಸಮರ್ಪಕವಾಗಿದ್ದಲ್ಲಿ, ನಮ್ಮ ಅಭಿಪ್ರಾಯವನ್ನು ಮಾರ್ಪಡಿಸುವ ಅಗತ್ಯತೆಯಿರುತ್ತದೆ. ನಮ್ಮ ನಿರ್ಣಯಗಳು/ತೀರ್ಮಾನಗಳು ನಮ್ಮ ಲೆಕ್ಕಪರಿಶೋಧಕರುಗಳ ವರದಿಯ

ದಿನಾಂಕದವರೆಗಿನ ನಾವು ಪಡೆದುಕೊಳ್ಳಲಾಗಿರುವಂತಹ ಲೆಕ್ಕಪರಿಶೋಧನಾ ಸಾಕ್ಷ್ಯಾಧಾರಗಳ ಆಧಾರದ ಮೇರೆಗೆ ಆಗಿರುತ್ತವೆ. ಆದಾಗ್ಯೂ, ಭವಿಷ್ಯದ ಘಟನೆಗಳು ಅಥವಾ ಪರಿಸ್ಥಿತಿಗಳು ಕಂಪನಿಯ ತನ್ನ ಮುಂದುವರೆದುಕೊಂಡು ಹೋಗುತ್ತಿರುವ ಸಂಸ್ಥೆಯಾಗಿ ಮುಂದುವರೆಯುವುದನ್ನು ಸಮಾಪ್ತಿಗೊಳಿಸಬಹುದು.

- o ಬಹಿರಂಗಪಡಿಸುವಿಕೆಗಳೂ ಸೇರಿದಂತೆ ಹಣಕಾಸು ತ:ಖ್ತೆಗಳ ಒಟ್ಟಾರೆ ನಿರೂಪಣೆ, ರಚನೆ ಹಾಗೂ ಅಡಕಗಳನ್ನು ಮೌಲ್ಯಮಾಪನ ಮಾಡುವುದು ಹಾಗೂ ಪ್ರತ್ಯೇಕ ಹಣಕಾಸು ತಖ್ತೆಗಳು ಮೂಲಾಧಾರವಾಗಿರುವ ವ್ಯವಹಾರಗಳು ಮತ್ತು ಘಟನೆಗಳನ್ನು ನ್ಯಾಯಸಮ್ಮತ ರೀತಿಯಲ್ಲಿ ನಿರೂಪಣೆಯನ್ನು ಸಾಧಿಸುವ ರೀತಿಯಲ್ಲಿ ಪ್ರತಿನಿಧಿಸುವವೆ ಎಂಬುದರ ಬಗ್ಗೆ ಮೌಲ್ಯಮಾಪನ ಮಾಡುವುದು.

- o ಪ್ರತ್ಯೇಕ ಹಣಕಾಸು ತ:ಖ್ತೆಗಳಲ್ಲಿ ತಪ್ಪು ಹೇಳಿಕೆಗಳ ವಿಸ್ತಾರವು ಪ್ರಾಮುಖ್ಯತೆಯನ್ನು ಹೊಂದಿರುತ್ತದೆ, ಹಣಕಾಸು ತ:ಖ್ತೆಗಳನ್ನು ಓರ್ವ ನ್ಯಾಯಸಮ್ಮತ ಅರಿವನ್ನು ಹೊಂದಿರುವ ಬಳಸಿಕೊಳ್ಳುವ ವ್ಯಕ್ತಿ/ಸಂಸ್ಥೆಯ ಮೇಲೆ ಅದು ವೈಯಕ್ತಿಕವಾಗಿ ಅಥವಾ ಒಟ್ಟಾರೆಯಾಗಿ ಪ್ರಭಾವ ಭೀರಬಹುದು. (೨) ನಮ್ಮ ಲೆಕ್ಕಪರಿಶೋಧನಾ ಕಾರ್ಯಕ್ರಮದ ವ್ಯಾಪ್ತಿಯನ್ನು ಪೂರ್ವಭಾವಿಯಾಗಿ ಯೋಜಿಸುವಲ್ಲಿ ಹಾಗೂ ನಮ್ಮ ಲೆಕ್ಕಪರಿಶೋಧನಾ ಕಾರ್ಯಕ್ರಮದ ಫಲಿತಾಂಶವನ್ನು ಮೌಲ್ಯಮಾಪನ ಮಾಡುವಲ್ಲಿ ಹಾಗೂ (೨) ಹಣಕಾಸು ತ:ಖ್ತೆಗಳಲ್ಲಿ ಯಾವುದಾದರೂ ಗುರುತಿಸಲ್ಪಟ್ಟಿರುವ ತಪ್ಪು ಹೇಳ್ಕಿಕೆಗಳ ಪ್ರಭಾವವನ್ನು ಮೌಲ್ಯಮಾಪನ ಮಾಡುವ ಸಲುವಾಗಿ ನಾವು ಪರಿಮಾಣಕ ಪ್ರಾಮುಖ್ಯತೆ ಹಾಗೂ ಗುಣಾತ್ಮಕ ಅಂಶಗಳನ್ನು ಪರಿಗಣಿಸುವೆವು.

ಇನ್ನಿತರೆ ವಿಷಯಗಳ ನಡುವೆ, ಲೆಕ್ಕಪರಿಶೋಧನೆಯ ಪೂರ್ವಭಾವಿಯಾಗಿ ಯೋಜಿಸಲ್ಪಟ್ಟಿರುವ ವ್ಯಾಪ್ತಿ ಮತ್ತು ಸಮಯ ಹಾಗೂ ನಮ್ಮ ಲೆಕ್ಕಪರಿಶೋಧನೆಯ ವೇಳೆಯಲ್ಲಿ ನಾವು ಗುರುತಿಸಬಹುದಾದ ಆಂತರಿಕ ನಿಯಂತ್ರಣದಲ್ಲಿನ ಯಾವುದೇ ಲೋಪದೋಷಗಳನ್ನು ಒಳಗೊಂಡಂತೆ ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಗಿರುವ ಗಮನಾರ್ಹ ಅಂಶಗಳನ್ನು ಹಣಕಾಸು ತ:ಖ್ತೆಗಳ ತಯಾರಿಕೆಯ ಜವಾಬ್ದಾರಿಯನ್ನು ಹೊಂದಿರುವ ವ್ಯವಸ್ಥಾಪನೆಯ ಗಮನಕ್ಕೆ ತರುವೆವು.

ನಮ್ಮ ಸ್ವತಂತ್ರ್ಯತೆಯ ಬಗ್ಗೆ ಸೂಕ್ತ ಔಚಿತ್ಯತೆಗಳ ಅಗತ್ಯತೆಗಳನ್ನು ನಾವು ಅನುಸರಿಸಿರುವೆವು ಎಂಬುದರ ಬಗ್ಗೆಯೂ ನಾವು ಒಂದು ಹೇಳಿಕೆಯನ್ನು ನೀಡುವೆವು ಹಾಗೂ ನಮ್ಮ ಸ್ವತಂತ್ರ್ಯತೆಯ ಮೇಲೆ ಹೊರೆಯಾಗಬಹುದೆಂಬುದಾಗಿ ನ್ಯಾಯಸಮ್ಮತವಾಗಿ ಯೋಚಿಸಬಹುದಾದ ಎಲ್ಲಾ ಸಂಬಂಧಗಳು ಹಾಗೂ ಇತರೆ ವಿಷಯಗಳನ್ನು ಹಾಗೂ ಅನ್ವಯಗೊಳ್ಳುವೆಡೆಗಳಲ್ಲಿ ಸಂಬಂಧಿತ ಮುಂಜಾಗ್ರತಾ ಕ್ರಮಗಳನ್ನೂ ಸಹ ಹಣಕಾಸು ತ:ಖ್ತೆಗಳ ತಯಾರಿಕೆಯ ಜವಾಬ್ದಾರಿಯನ್ನು ಹೊಂದಿರುವ ವ್ಯವಸ್ಥಾಪನೆಯ ಗಮನಕ್ಕೆ ತರುವೆವು.

ಇತರೆ ವಿಷಯಗಳು

1. 31 ಮಾರ್ಚ್ 2019ಕ್ಕೆ ಅಂತ್ಯಗೊಂಡ ಸಾಲಿಗೆ ಈ ಕ್ರೋಡೀಕೃತ ಹಣಕಾಸು ತ:ಖ್ತೆಗಳಲ್ಲಿ ಒಳಗೊಂಡಿರುವ ನಿಗಮದ ಕ್ರೋಡೀಕೃತ ಹಣಕಾಸು ತ:ಖ್ತೆಯನ್ನು ಈ ಹಿಂದಿನ ಲೆಕ್ಕಪರಿಶೋಧಕರು ಲೆಕ್ಕಪರಿಶೋಧನೆ ಮಾಡಿರುವರು ಹಾಗೂ ಅವರು ಅಂತಹ ತ:ಖ್ತೆಗಳ ಮೇಲೆ 27 ಡಿಸೆಂಬರ್ 2019ರಂದು ತಮ್ಮ ಷರತ್ತುಬದ್ಧ ಅಭಿಪ್ರಾಯಗಳನ್ನು ವ್ಯಕ್ತಪಡಿಸಿರುವರು. ಈ ವಿಷಯಗಳಿಗೆ ಸಂಬಂಧಿಸಿದಂತೆ ನಮ್ಮ ಅಭಿಪ್ರಾಯವು ಷರತ್ತುಬದ್ಧವಾಗಿರುವುದಿಲ್ಲ.

ಇತರೆ ಕಾನೂನು ಮತ್ತು ನಿಯಂತ್ರಕ ಅಗತ್ಯತೆಗಳ ಮೇಲಿನ ವರದಿ

ಪರಿಚ್ಛೇದ 143ರ (3)ರ ಅಡಿಯಲ್ಲಿ ಅಗತ್ಯತೆಯಿರುವಂತೆ, ನಮ್ಮ ಲೆಕ್ಕಪರಿಶೋಧನೆಯ ಆಧಾರದ ಮೇರೆಗೆ ನಾವು ಈ ಕೆಳಗಿನಂತೆ ವರದಿ ಮಾಡುತ್ತಿರುವೆವು ;

ಎ. ನಮ್ಮ ಷರತ್ತುಬದ್ಧ ಅಭಿಪ್ರಾಯಕ್ಕೆ ಆಧಾರ ಕಂಡಿಕೆಯಲ್ಲಿ ವಿವರಿಸಿರುವುದನ್ನು ಹೊರತುಪಡಿಸಿದಂತೆ, ನಮ್ಮ ಲೆಕ್ಕಪರಿಶೋಧನೆಯ ಉದ್ದೇಶಕ್ಕೆ ನಮ್ಮ ಅತ್ಯುತ್ತಮ ಅರಿವಿಗೆ ಹಾಗೂ ನಂಬಿಕೆಯ ಪ್ರಕಾರ ಅಗತ್ಯವೆಂಬುದಾಗಿ ಪರಿಗಣಿಸಲಾಯಿತೋ ಅಂತಹ ಎಲ್ಲಾ ಮಾಹಿತಿ ಹಾಗೂ ವಿವರಣೆಗಳನ್ನು ಪಡೆದುಕೊಂಡಿರುವೆವು.

ಬಿ. ನಮ್ಮ ಷರತ್ತುಬದ್ಧ ಅಭಿಪ್ರಯ ಕಂಡಿಕೆಯಲ್ಲಿ ವಿವರಿಸಲಾಗಿರುವಂತಹ ವಿಷಯದ ಪ್ರಭಾವಗಳನ್ನು ಹೊರತುಪಡಿಸಿದಂತೆ, ನಮ್ಮ ಅಭಿಪ್ರಾಯದಲ್ಲಿ, ನಾವು ಪರಿಶೀಲಿಸಲಾದ ಲೆಕ್ಕ ಪುಸ್ತಕಗಳಿಂದ ಗಮನಿಸಲಾದಂತೆ ಕಂಪನಿಯು ನಿಯಮಗಳ ಪ್ರಕಾರ ಅಗತ್ಯವಿರುವ ಸಮರ್ಪಕ ಲೆಕ್ಕಪುಸ್ತಕಗಳನ್ನು ಇಟ್ಟಿರುವುದು ಹಾಗೂ ನಾವು ಭೇಟಿ ನೀಡದ ಶಾಖೆಗಳಿಂದ ನಮ್ಮ ಲೆಕ್ಕಪರಿಶೋಧನೆಯ ಉದ್ದೇಶಕ್ಕಾಗಿ ಸಮರ್ಪಕವಾದಂತಹ ಸಲ್ಲಿಕೆಗಳನ್ನು ಸ್ವೀಕರಿಸಲಾಗಿರುವುದು.

ಸಿ. ಈ ವರದಿಯಲ್ಲಿ ಉಲ್ಲೇಖಿಸಲ್ಪಟ್ಟಿರುವ ಆಸ್ತಿ ಮತ್ತು ಜವಾಬ್ದಾರಿ ತ:ಖ್ತೆ ಹಾಗೂ ಲಾಭ ಮತ್ತು ನಷ್ಟ ತ:ಖ್ತೆಗಳು, ಹಣಕಾಸಿನ ಹರಿವು, ಇವುಗಲೂ ಲೆಕ್ಕಪತ್ರ ಪುಸ್ತಕಗಳಿಗೆ ತಾಳೆ ಹೊಂದುತ್ತವೆ.

ಡಿ. ನಮ್ಮ ಷರತ್ತುಬದ್ಧ ಅಭಿಪ್ರಾಯಕ್ಕೆ ಆಧಾರ ಕಂಡಿಕೆಯಲ್ಲಿ ವಿವರಿಸಿರುವ ವಿಷಯಗಳ ಸಂಭಾವ್ಯ ಪರಿಣಾಮಗಳನ್ನು ಹೊರತುಪಡಿಸಿದಂತೆ, ನಮ್ಮ ಅಭಿಪ್ರಾಯದಲ್ಲಿ ಆಸ್ತಿ ಮತ್ತು ಜವಾಬ್ದಾರಿ ತ:ಖ್ತೆ ಹಾಗೂ ಲಾಭ ಮತ್ತು ನಷ್ಟ ತ:ಖ್ತೆಗಳನ್ನು, ಕಂಪನಿಗಳ (ಲೆಕ್ಕಪತ್ರಗಳು) ನಿಯಮಗಳು, 2014ರ ನಿಯಮ 7ರ ಜೊತೆಯಲ್ಲಿ ಓದಲ್ಪಡುವ ಅಧಿನಿಯಮದ ಪರಿಚ್ಛೇದ 133 ಅಡಿಯಲ್ಲಿ ನಿರ್ದಿಷ್ಟಪಡಿಸಲಾಗಿರುವಂತಹ ಲೆಕ್ಕಪತ್ರಗಳನ್ನಿಡುವುದಕ್ಕೆ ಸಂಬಂಧಿತ ಮಾನದಂಡಗಳ ಅನುಸಾರವೇ ತಯಾರಿಸಲಾಗಿದೆ.

ಇ. ಭಾರತ ಸರ್ಕಾರದ ಸಂಸ್ಥಿಕ ವ್ಯವಹಾರಗಳ ಮಂತ್ರಾಲಯವು ನೀಡಿರುವ 5 ಜೂನ್ 2015 ದಿನಾಂಕದ ಅಧಿಸೂಚನೆ ಸಂಖ್ಯೆ ಜಿ.ಎಸ್.ಆರ್.463(ಇ), ಇದರ ಕಾರಣ, ಪ್ರಕಾರ ಓರ್ವ ನಿರ್ದೇಶಕನಾಗಿ ನೇಮಕಗೊಳ್ಳಲು ನಿರ್ದೇಶಕರು ಅನರ್ಹಗೊಳ್ಳುವುದಕ್ಕೆ ಸಂಬಂಧಿಸಿದಂತೆ ಕಂಪನಿಗಳ ಅಧಿನಿಯಮ, 1956ರ ಪರಿಚ್ಛೇದ 164(2)ರ ನಿಗಮಕ್ಕೆ ಅನ್ವಯಗೊಳ್ಳುವುದಿಲ್ಲ.

ಎಫ್. ಕಂಪನಿಯ ಹಣಕಾಸಿನ ವರದಿಗಳ ಮೇಲೆ ಆಂತರಿಕ ಹಣಕಾಸು ನಿಯಂತ್ರಣಗಳ ಸಮರ್ಪಕತೆಗೆ ಸಂಬಂಧಿಸಿದಂತೆ ಹಾಗೂ ಅಂತಹ ನಿಯಂತ್ರಣಗಳ ಕಾರ್ಯಾಚರಣೆಯ ಪರಿಣಾಮಕಾರಿತ್ವಕ್ಕೆ ಸಂಬಂಧಿಸಿದಂತೆ, **'ಅನುಬಂಧ ಎ'**ಯಲ್ಲಿ ನೀಡಲಾಗಿರುವ ನಮ್ಮ ಪ್ರತ್ಯೇಕ ವರದಿಯನ್ನು ಉಲ್ಲೇಖಿಸುವುದು.

ಜಿ. ಭಾರತ ಸರ್ಕಾರದ ಸಂಸ್ಥಿಕ ವ್ಯವಹಾರಗಳ ಮಂತ್ರಾಲಯವು ನೀಡಿರುವ 5 ಜೂನ್ 2015 ದಿನಾಂಕದ ಅಧಿಸೂಚನೆ ಸಂಖ್ಯೆ ಜಿ.ಎಸ್.ಆರ್.463(ಇ), ಇದರ ಕಾರಣ, ವ್ಯವಸ್ಥಾಪನೆ/ಉನ್ನತ ಅಧಿಕಾರಿಗಳ ಸಂಬಳ/ಸಂಭಾವನೆಗಳಿಗೆ ಸಂಬಂಧಿತ ಪರಿಚ್ಛೇದ 197ರ ಅನುವುಗಳು ನಿಗಮಕ್ಕೆ ಅನ್ವಯಗೊಳ್ಳುವುದಿಲ್ಲ. ಆದ್ದರಿಂದ, ತಿದ್ದುಪಡಿಗೊಂಡಿರುವ ಅಧಿನಿಯಮದ ಪರಿಚ್ಛೇದ 197 (16)ರ ವರದಿ ಸಲ್ಲಿಸುವ ಅಗತ್ಯತೆಗಳು ನಿಗಮಕ್ಕೆ ಅನ್ವಯಗೊಳ್ಳುವುದಿಲ್ಲ.

ಎಚ್. ಕಂಪನಿಗಳ (ಲೆಕ್ಕಪರಿಶೋಧನೆ ಮತ್ತು ಲೆಕ್ಕಪರಿಶೋಧಕರುಗಳು) ನಿಯಮಗಳು, 2014ರ ನಿಯಮ 11ರ (ತಿದ್ದುಪಡಿಗೊಂಡಿರುವಂತೆ) ಅನುಸಾರ ಲೆಕ್ಕಪರಿಶೋಧಕರ ವರದಿಯಲ್ಲಿ ಸೇರಿಸಬೇಕಾಗಿರುವಂತಹ ಇತರೆ ವಿಷಯಗಳಿಗೆ ಸಂಬಂಧಿಸಿದಂತೆ, ನಮ್ಮ ಅಭಿಪ್ರಾಯದಲ್ಲಿ ಮತ್ತು ನಮ್ಮ ಅರಿವಿಗೆ ಬಂದಿರುವಂತೆ ಮತ್ತು ನಮಗೆ ನೀಡಲಾಗಿರುವಂತಹ ವಿವರಣೆಗಳಂತೆ :

i. ಕಂಪನಿಯು 31 ಮಾರ್ಚ್ 2020ಕ್ಕೆ ಅಂತ್ಯಗೊಂಡ ಹಣಕಾಸು ಸಾಲಿಗೆ ತನ್ನ ಹಣಕಾಸು ಸ್ಥಿತಿಗತಿಗಳ ಮೇಲೆ ಬಾಕಿ ಇರುವ ವಿವಾದಗಳ ಪ್ರಭಾವಗಳನ್ನು ಹಣಕಾಸು ತ:ಖ್ತೆಗಳಲ್ಲಿ ಬಹಿರಂಗಪಡಿಸಿರುವುದಿಲ್ಲ **'ಅನುಬಂಧ – ಸಿ'**ಯನ್ನು ಉಲ್ಲೇಖಿಸುವುದು.

ii. ಭೌತಿಕವಾಗಿ ನಿರೀಕ್ಷಿಸಬಹುದಾದಷ್ಟು ಸಮೀಪದಲ್ಲಿರುವ ನಷ್ಟಗಳು ಸಂಭವಿಸುವ ರೀತಿಯಲ್ಲಿನ ಜನ್ಯ/ವ್ಯುತ್ಪನ್ನ ಗುತ್ತಿಗೆಗಳೂ ಸೇರಿದಂತೆ ಯಾವುದೇ ದೀರ್ಘಾವಧಿ ಗುತ್ತಿಗೆಗಳಿಂದ ಯಾವುದೇ ವಿಷಯಕ ನಷ್ಟಗಳನ್ನೂ ನಿರೀಕ್ಷಿಸಿರುವುದಿಲ್ಲ.

iii. ಹೂಡಿಕೆದಾರರ ಶಿಕ್ಷಣ ಹಾಗೂ ಸಂರಕ್ಷಣಾ ನಿಧಿಗೆ ನಿಗಮದಿಂದ ವರ್ಗಾಯಿಸುವ ಅಗತ್ಯತೆಯಿರುವ ಯಾವುದೇ ಮೊತ್ತಗಳೂ ಇರುವುದಿಲ್ಲ.

2.ಅಧಿನಿಯಮದ ಪರಿಚ್ಛೇದ 143 (11)ರ ಷರತ್ತುಗಳ ಅನುಸಾರ ಕೇಂದ್ರ ಸರ್ಕಾರವು ನೀಡಿರುವ ಕಂಪನಿಗಳ (ಲೆಕ್ಕಪರಿಶೋಧಕರ ವರದಿ) ಆದೇಶ, 2016ರ ಅಗತ್ಯತೆಯಂತೆ, ಆದೇಶದ ಕಂಡಿಕೆಗಳು 3 ಮತ್ತು 4ರಲ್ಲಿ ನಿರ್ದಿಷ್ಟಪಡಿಸಿರುವಂತಹ ವಿಷಯಗಳ ಮೇಲೆ **,ಅನುಬಂಧ ಬಿ'** ಯಲ್ಲಿ ಒಂದು ತ:ಖ್ತೆಯನ್ನು ನಾವು ನೀಡಿರುವೆವು.

3. ಕಂಪನಿಗಳ ಅಧಿನಿಯಮ, 2013ರ ಪರಿಚ್ಛೇದ 143(5)ರ ಅಡಿಯಲ್ಲಿ ಅಗತ್ಯತೆಯಿರುವಂತೆ, ಮೇಲೆ ತಿಳಿಸಲಾಗಿರುವ ಕಂಪನಿಗೆ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು ನೀಡಿರುವ ನಿರ್ದೇಶನಗಳನ್ನು ನಾವು **'ಅನುಬಂಧ – ಸಿ'** ಯಲ್ಲಿ ನೀಡಿರುವೆವು.

ಆರ್ ಸಿಂಘ್ವಿ ಅಂಡ್ ಅಸೋಸಿಯೇಟ್ಸ್
ಚಾರ್ಟರ್ಡ್ ಅಕೌಂಟೆಂಟ್‌ಗಳು
(ಸಂಸ್ಥೆಯ ನೋಂದಣಿ ಸಂಖ್ಯೆ 003870ಎಸ್)

––ಸಹಿ ಮಾಡಲಾಗಿದೆ—
ಸಿಎ ಪ್ರದೀಪ್ ಹೆಗ್ಡೆ
ಪಾಲುದಾರರು
(ಸದಸ್ಯತ್ವ ಸಂಖ್ಯೆ 231733)
ಯುಡಿಐಎನ್ : 20231733ಎಎಎಎಇಎಫ್5179
ದಿನಾಂಕ 30.12.2020
ಸ್ಥಳ : ಬೆಂಗಳೂರು

ಆರ್ ಸಿಂಘ್ವಿ ಅಂಡ್ ಅಸೋಸಿಯೇಟ್ಸ್
ಚಾರ್ಟರ್ಡ್ ಅಕೌಂಟೆಂಟ್‌ಗಳು

ಸ್ವತಂತ್ರ ಲೆಕ್ಕಪರಿಶೋಧಕರ ವರದಿಗೆ 'ಅನುಬಂಧ ಎ'

(ನಮ್ಮ ಅದೇ ದಿನಾಂಕದ ಕರ್ನಾಟಕ ರಾಜ್ಯ ಪ್ರವಾಸೋಧ್ಯಮ ಅಭಿವೃದ್ಧಿ ನಿಗಮ ನಿಯಮಿತದ ಸದಸ್ಯರುಗಳಿಗೆ ನಮ್ಮ ವರದಿಯ 'ಇತರೆ ಕಾನೂನಾತ್ಮಕ ಮತ್ತು ನಿಯಂತ್ರಕ ಅಗತ್ಯತೆಗಳ' ಅಡಿಯಲ್ಲಿ ಉಲ್ಲೇಖಿಸಲ್ಪಟ್ಟಿರುವ ಕಂಡಿಕೆ 1 (ಎಫ್)

ಕಂಪನಿಗಳ ಅಧಿನಿಯಮ, 2013ರ ಪರಿಚ್ಛೇದ 143ರ ಉಪ–ಪರಿಚ್ಛೇದ 3ರ ಕಲಮು (i)ರ ಅಡಿಯಲ್ಲಿ ಆಂತರಿಕ ಹಣಕಾಸು ನಿಯಂತ್ರಣಗಳ ಮೇಲಿನ ವರದಿಗಳ ಮೇಲೆ ನೀಡಲಾಗಿರುವಂತಹ ಸ್ವತಂತ್ರ ಲೆಕ್ಕಪರಿಶೋಧಕರುಗಳ ವರದಿ.

ಕರ್ನಾಟಕ ಪ್ರವಾಸೋಧ್ಯಮ ಅಭಿವೃದ್ಧಿ ನಿಗಮ ನಿಯಮಿತದ 31 ಮಾರ್ಚ್ 2020ಕ್ಕೆ ಅಂತ್ಯಗೊಂಡಂತಹ ಸಾಲಿಗೆ ಅದೇ ದಿನಾಂಕಕ್ಕೆ ಅಂತ್ಯಗೊಂಡಂತಹ ಹಣಕಾಸು ಸಾಲಿಗೆ ಭಾರತೀಯ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಮಾನದಂಡಗಳ ಅನುಸಾರ ತಯಾರಿಸಲಾಗಿರುವಂತಹ ಕಂಪನಿಯ ಪ್ರತ್ಯೇಕ ಹಣಕಾಸು ತ:ಖ್ತೆಗಳ ನಮ್ಮ ಲೆಕ್ಕಪರಿಶೋಧನೆಯ ಒಂದು ಭಾಗವಾಗಿ ಹಣಕಾಸು ವರದಿಯ ಮೇಲೆ ನಾವು ಆಂತರಿಕ ಹಣಕಾಸು ನಿಯಂತ್ರಣಗಳ ಲೆಕ್ಕಪರಿಶೋಧನೆಯನ್ನು ಮಾಡಿದೆವು.

ಆಂತರಿಕ ಹಣಕಾಸು ನಿಯಂತ್ರಣಗಳಿಗಾಗಿ ಆಡಳಿತ ಮಂಡಳಿಯ ಜವಾಬ್ದಾರಿ

ಭಾರತೀಯ ಚಾರ್ಟರ್ಡ್ ಅಕೌಂಟೆಂಟ್‌ಗಳ ಸಂಸ್ಥೆಯು ಹಣಕಾಸು ವರದಿಯ ಮೇಲೆ ಆಂತರಿಕ ಹಣಕಾಸು ನಿಯಂತ್ರಣಗಳಿಗೆ ಸಂಬಂಧಿಸಿದಂತೆ ಮಾರ್ಗಸೂಚಿ ಟಿಪ್ಪಣಿಯಲ್ಲಿ ತಿಳಿಸಿರುವಂತಹ ಆಂತರಿಕ ನಿಯಂತ್ರಣದ ಅತ್ಯಗತ್ಯ ಭಾಗಗಳನ್ನು ಪರಿಗಣಿಸಿದಂತೆ ನಿಗಮದಿಂದ ಸ್ಥಾಪಿಸಲಾಗಿರುವಂತಹ ಹಣಕಾಸು ವರದಿಯ ಮಾನದಂಡವನ್ನು ಆಧರಿಸಿದಂತೆ ಆಂತರಿಕ ನಿಯಂತ್ರಣವನ್ನು ಸ್ಥಾಪಿಸುವುದು ಮತ್ತು ನಿರ್ವಹಿಸಿಕೊಂಡು ಹೋಗುವುದು ನಿಗಮದ ಆಡಳಿತ ಮಂಡಳಿಯ ಜವಾಬ್ದಾರಿಯಾಗಿರುತ್ತದೆ. ಈ ಜವಾಬ್ದಾರಿಗಳು, ಕಂಪನಿಯ ಕಾರ್ಯನೀತಿಗಳಿಗೆ ಬದ್ಧತೆಯಿಂದ ಕೂಡಿರುವುದನ್ನೂ ಒಳಗೊಂಡಂತೆ ತನ್ನ ವ್ಯವಹಾರಗಳನ್ನು ಕಂಪನಿಯ ನಿಯಮಗಳ ಅನುಸಾರ ಮತ್ತು ದಕ್ಷತೆಯಿಂದ ನಡೆಸುವುದನ್ನು ಖಚಿತಪಡಿಸಿಕೊಳ್ಳುವುದಕ್ಕಾಗಿ ಪರಿಣಾಮಕಾರಿತ್ವದಿಂದ ಕಾರ್ಯಚರಣೆಗೊಳ್ಳುತ್ತಿದ್ದ ಸಮರ್ಪಕವಾದಂತಹ ಆಂತರಿಕ ಹಣಕಾಸು ನಿಯಂತ್ರಣದ ವಿನ್ಯಾಸ, ಕಾರ್ಯಗತಗೊಳಿಸುವಿಕೆ ಮತ್ತು ನಿರ್ವಹಣೆ, ತನ್ನ ಆಸ್ತಿಗಳನ್ನು ಸಂರಕ್ಷಿಸುವುದು, ವಂಚನೆಗಳು ಮತ್ತು ತಪ್ಪುಗಳು ಸಂಭವಿಸುವುದನ್ನು ತಡೆಯುವುದು ಮತ್ತು ಅಂತಹ ಪ್ರಕರಣಗಳನ್ನು ಪತ್ತೆಹಚ್ಚುವುದು, ಲೆಕ್ಕವನ್ನಿಡುವಿಕೆಯ ದಾಖಲೆಗಳ ಯಥಾರ್ಥತೆ ಮತ್ತು ಪರಿಪೂರ್ಣತೆ ಹಾಗೂ ಕಂಪನಿಗಳ ಅಧಿನಿಯಮ, 2013ರ ಅಡಿಯಲ್ಲಿ ಅಗತ್ಯತೆಯಿರುವಂತೆ ವಿಶ್ವಸನೀಯತೆಯಿಂದ ಕೂಡಿದಂತಹ ಹಣಕಾಸಿಗೆ ಸಂಬಂಧಿತ ಮಾಹಿತಿಯನ್ನು ಸಮಯೋಚಿತವಾಗಿ ತಯಾರಿಸುವುದು ಇತ್ಯಾದಿಗಳನ್ನು ಒಳಗೊಂಡಿರುತ್ತವೆ.

ಲೆಕ್ಕಪರಿಶೋಧಕರ ಜವಾಬ್ದಾರಿ

ನಮ್ಮ ಲೆಕ್ಕಪರಿಶೋಧನೆಯ ಆಧಾರದ ಮೇರೆಗೆ ಕಂಪನಿಯ ಹಣಕಾಸು ವರದಿಗಳ ಮೇಲೆ ಆಂತರಿಕ ಹಣಕಾಸು ನಿಯಂತ್ರಣಗಳ ಮೇಲೆ ಒಂದು ಅಭಿಪ್ರಾಯವನ್ನು ವ್ಯಕ್ತಪಡಿಸುವುದು ನಮ್ಮ ಜವಾಬ್ದಾರಿಯಾಗಿರುತ್ತದೆ. ಕಂಪನಿಗಳ ಅಧಿನಿಯಮ 2013ರ ಪರಿಚ್ಛೇದ 143(10)ರ ಅಡಿಯಲ್ಲಿ ನಿರ್ದಿಷ್ಟಪಡಿಸಲಾಗಿರುವಂತಹ ಆಂತರಿಕ ಹಣಕಾಸು ನಿಯಂತ್ರಣಗಳಿಗೆ ಅನ್ವಯಗೊಳ್ಳುವಂತಹ ಮಾರ್ಗಸೂಚಿ ಟಿಪ್ಪಣಿ ಹಾಗೂ ಭಾರತೀಯ ಚಾರ್ಟರ್ಡ್ ಅಕೌಂಟೆಂಟ್‌ಗಳ ಸಂಸ್ಥೆಯಿಂದ ನೀಡಲ್ಪಟ್ಟಿರುವಂತಹ ಲೆಕ್ಕಪರಿಶೋಧನಾ ಮಾನದಂಡಗಳ ಅನುಸಾರ ಆಂತರಿಕ ಹಣಕಾಸು ನಿಯಂತ್ರಣಗಳ ಲೆಕ್ಕಪರಿಶೋಧನೆಗೆ ಅನ್ವಯಗೊಳ್ಳುವಷ್ಟರ ಮಟ್ಟಿಗೆ, ನಾವು ನಮ್ಮ ಲೆಕ್ಕಪರಿಶೋಧನೆಯನ್ನು ನಡೆಸಿರುವೆವು. ನೈತಿಕತೆಯ ಅಗತ್ಯತೆಗಳನ್ನು ಅನುಸರಿಸುವುದನ್ನು ಹಾಗೂ ಹಣಕಾಸು ತ:ಖ್ತೆಗಳು ವಿಷಯಕ ತಪ್ಪು ಹೇಳಿಕೆಗಳಿಂದ ಮುಕ್ತವಾಗಿವೆಯೇ ಎಂಬುದರ ಬಗ್ಗೆ ನ್ಯಾಯಸಮ್ಮತ ಭರವಸೆಯನ್ನು ಪಡೆಯುವುದಕ್ಕಾಗಿ ಲೆಕ್ಕಪರಿಶೋಧನಾ ವಿಧಾನವನ್ನು ಪೂರ್ವಭಾವಿಯಾಗಿ ಯೋಜಿಸುವುದು ಹಾಗೂ ಅದನ್ನು ಕಾರ್ಯಗತಗೊಳಿಸುವ ಅಗತ್ಯತೆಯನ್ನು ಆ ಮಾನದಂಡಗಳು ಹಾಗೂ ಮಾರ್ಗಸೂಚಿಗಳು ಹೊಂದಿರುತ್ತವೆ.

ಹಣಕಾಸು ವರದಿಯ ಮೇಲೆ ಆಂತರಿಕ ಹಣಕಾಸು ನಿಯಂತ್ರಣ ವ್ಯವಸ್ಥೆಯ ಸಮರ್ಪಕತೆಯ ಬಗ್ಗೆ ಲೆಕ್ಕಪರಿಶೋಧನಾ ಸಾಕ್ಷ್ಯಾಧಾರಗಳನ್ನು ಪಡೆದುಕೊಳ್ಳುವ ಸಲುವಾಗಿ ಕಾರ್ಯವಿಧಾನಗಳನ್ನು ನಡೆಸುವುದನ್ನು ನಮ್ಮ ಲೆಕ್ಕಪರಿಶೋಧನೆಯು ಒಳಗೊಂಡಿರುತ್ತದೆ. ಹಣಕಾಸು ವರದಿಯ ಮೇಲೆ ಆಂತರಿಕ ಹಣಕಾಸು ನಿಯಂತ್ರಣದ ನಮ್ಮ ಲೆಕ್ಕಪರಿಶೋಧನೆಯು, ಹಣಕಾಸು ವರದಿಯ ಮೇಲೆ ಆಂತರಿಕ ನಿಯಂತ್ರಣಗಳನ್ನು ಅರ್ಥ ಮಾಡಿಕೊಳ್ಳುವುದು, ವಂಚಿಸುವ ಉದ್ದೇಶದಿಂದಲೇ ಆಗಲಿ

ಅಥವಾ ತಪ್ಪುಗಳಿಂದಲೇ ಆಗಲಿ, ಇರಬಹುದಾದಂತಹ ವಿಷಯಕ ದುರ್ಬಲತೆಯ ಸಂಭಾವ್ಯ ಅಪಾಯವನ್ನು ನಿರ್ಧಾರಣೆ ಮಾಡುವುದು ಹಾಗೂ ನಿರ್ಧಾರಣೆ ಮಾಡಲಾದ ಸಂಭಾವ್ಯ ಅಪಾಯದ ಆಧಾರದ ಮೇರೆಗೆ ಆಂತರಿಕ ನಿಯಂತ್ರಣದ ವಿನ್ಯಾಸ ಮತ್ತು ಕಾರ್ಯಾಚರಣೆಯ ಪರಿಣಾಮಕಾರಿತ್ವವನ್ನು ಮೌಲ್ಯಮಾಪನ ಮಾಡುವುದನ್ನು ಒಳಗೊಂಡಿರುತ್ತದೆ. ಆಯ್ಕೆ ಮಾಡಿಕೊಳ್ಳಲಾದಂತಹ ಕಾರ್ಯವಿಧಾನವು ಕ್ರೋಡೀಕೃತ ಹಣಕಾಸು ತ:ಖ್ತೆಗಳಲ್ಲಿ ವಂಚಿಸುವ ಉದ್ದೇಶದಿಂದ ಅಥವಾ ಅಚಾತುರ್ಯದಿಂದ ಇರಬಹುದಾದಂತಹ ವಿಷಯಕ ತಪ್ಪು ಹೇಳಿಕೆಗಳ ಸಂಭಾವ್ಯ ಅಪಾಯಗಳನ್ನು ನಿರ್ಧಾರಣೆ ಮಾಡುವುದನ್ನೂ ಒಳಗೊಂಡಂತೆ ಲೆಕ್ಕಪರಿಶೋಧಕರ ತೀರ್ಮಾನವನ್ನು ಅವಲಂಭಿಸಿರುತ್ತದೆ,

ನಾವು ಪಡೆದುಕೊಂಡಂತಹ ಲೆಕ್ಕಪರಿಶೋಧನಾ ಸಾಕ್ಷ್ಯಾಧಾರಗಳು ಕಂಪನಿಯ ಆಂತರಿಕ ಹಣಕಾಸು ನಿಯಂತ್ರಣ ವ್ಯವಸ್ಥೆಯ ಮೇಲೆ ನಮ್ಮ ಲೆಕ್ಕಪರಿಶೋಧನಾ ಅಭಿಪ್ರಾಯಗಳನ್ನು ವ್ಯಕ್ತಪಡಿಸುವ ದೃಷ್ಟಿಯಿಂದ ಒಂದು ಆಧಾರವನ್ನು ಒದಗಿಸುವುದಕ್ಕಾಗಿ ಸಮರ್ಪಕವಾಗಿರುತ್ತವೆ ಹಾಗೂ ಸೂಕ್ತವಾಗಿರುತ್ತವೆ ಎಂಬ ವಿಶ್ವಾಸವು ನಮಗಿರುವುದು.

ಹಣಕಾಸು ವರದಿಯ ಮೇಲೆ ಆಂತರಿಕ ಹಣಕಾಸು ನಿಯಂತ್ರಣಗಳ ತಾತ್ಪರ್ಯ/ಪ್ರಾಮುಖ್ಯತೆ

ಒಂದು ನಿಗಮದ ಹಣಕಾಸು ವರದಿಯ ಮೇಲೆ ಒಂದು ನಿಗಮದ ಆಂತರಿಕ ಹಣಕಾಸು ನಿಯಂತ್ರಣವು, ಕ್ರೋಡೀಕೃತ ಹಣಕಾಸು ವರದಿಯ ವಿಶ್ವಸನೀಯತೆಯನ್ನು ಒಂದು ನ್ಯಾಯಸಮ್ಮತ ಭರವಸೆಯನ್ನು ಒದಗಿಸುವುದಕ್ಕಾಗಿ ವಿನ್ಯಾಸಗೊಳಿಸುವಂತಹ ಹಾಗೂ ಒಂದು ಸರ್ವೇಸಾಮಾನ್ಯವಾಗಿ ಒಪ್ಪಿಕೊಳ್ಳಲಾಗಿರುವಂತಹ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ತತ್ವಗಳ ಅನುಸಾರ ಬಾಹ್ಯ ಉದ್ದೇಶಗಳಿಗಾಗಿ ಹಣಕಾಸು ತ:ಖ್ತೆಗಳನ್ನು ತಯಾರಿಸುವ ಒಂದು ಪ್ರಕ್ರಿಯೆಯಾಗಿರುತ್ತದೆ. ಕಂಪನಿಯ ಹಣಕಾಸು ವರದಿಯ ಮೇಲಿನ ಆಂತರಿಕ ಹಣಕಾಸು ನಿಯಂತ್ರಣದ ಕಾರ್ಯನೀತಿಗಳು ಮತ್ತು ಕಾರ್ಯವಿಧಾನಗಳು ಈ ಮುಂದಿನ ಅಂಶಗಳನ್ನು ಒಳಗೊಂಡಿರುತ್ತವೆ : (1) ಕಂಪನಿಯ ಆಸ್ತಿಗಳ ವ್ಯವಹಾರಗಳು ಮತ್ತು ವಿಲೇವಾರಿ/ವಿನ್ಯಾಸ/ವ್ಯವಸ್ಥೆಯನ್ನು ನ್ಯಾಯಸಮ್ಮತವಾದಂತಹ ಮತ್ತು ಯಥಾರ್ಥತೆಯಿಂದ ಕೂಡಿದ ರೀತಿಯಲ್ಲಿ ತೋರಿಸುವುದು. (2) ಸರ್ವೇಸಾಮಾನ್ಯವಾಗಿ ಒಪ್ಪಿಕೊಳ್ಳಲಾಗಿರುವಂತಹ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ತತ್ವಗಳ ಅನುಸಾರ ಪ್ರತ್ಯೇಕ ಹಣಕಾಸು ತ:ಖ್ತೆಗಳನ್ನು ತಯಾರಿಸುವಲ್ಲಿ ಅನುಮತಿ ನೀಡುವ ಸಲುವಾಗಿ ಅಗತ್ಯವಿರುವಂತೆ ವ್ಯವಹಾರಗಳನ್ನು ದಾಖಲಿಸಲಾಗಿದೆ ಹಾಗೂ ಕಂಪನಿಯ ಸ್ವೀಕೃತಿಗಳು ಮತ್ತು ವೆಚ್ಚಗಳನ್ನು ಕಂಪನಿಯ ವ್ಯವಸ್ಥಾಪನೆ/ಆಡಳಿತ ಮಂಡಳಿಯ ಮತ್ತು ನಿರ್ದೇಶಕರುಗಳ ಅನುಮತಿಯ ಅನುಸಾರವೇ ಮಾಡಲಾಗಿದೆ ಎಂಬುದರ ಬಗ್ಗೆ ಒಂದು ನ್ಯಾಯಸಮ್ಮತ ಭರವಸೆಯನ್ನು ಒದಗಿಸುವುದು. (3) ಕ್ರೋಡೀಕೃತ ಹಣಕಾಸು ತ:ಖ್ತೆಗಳ ಮೇಲೆ ಒಂದು ವಿಷಯಕ ಪ್ರಭಾವವನ್ನು ಹೊಂದಿರುವಂತಹ ನಿಗಮದ ಆಸ್ತಿಗಳ ಅನಧಿಕೃತ ಸ್ವಾಧೀನತೆ, ಬಳಕೆ ಅಥವಾ ವಿಲೇವಾರಿಯನ್ನು ತಡೆಯುವುದು ಅಥವಾ ಸಮಯೋಚಿತವಾಗಿ ಪತ್ತೆಹಚ್ಚುವುದು

ಹಣಕಾಸು ವರದಿಯ ಮೇಲೆ ಆಂತರಿಕ ಹಣಕಾಸು ನಿಯಂತ್ರಣಗಳ ಅಂತರ್ಗತ ಇತಿಮಿತಿಗಳು

ವಂಚನೆ/ಒಳಸಂಚಿನ ಸಂಭಾವ್ಯತೆ ಅಥವಾ ಸಮರ್ಪಕ ಆಡಳಿತವು ನಿಯಂತ್ರಣಗಳನ್ನು ಕಡೆಗಣಿಸುವುದು, ಇವುಗಳನ್ನೂ ಒಳಗೊಂಡಂತೆ ಹಣಕಾಸು ವರದಿಯ ಮೇಲೆ ಆಂತರಿಕ ಹಣಕಾಸು ನಿಯಂತ್ರಣಗಳ ಅಂತರ್ಗತ ಇತಿಮಿತಿಗಳ ಕಾರಣ ವಿಷಯಕ ತಪ್ಪು ಹೇಳಿಕೆಗಳು ಅಥವಾ ವಂಚನೆಗಳು ಸಂಭವಿಸಬಹುದು ಹಾಗೂ ಅವುಗಳನ್ನು ಪತ್ತೆ ಹಚ್ಚಲು ಸಾಧ್ಯವಾಗದಿರಬಹುದು. ಅಲ್ಲದೆಯೇ, ಭವಿಷ್ಯದ ಅವಧಿಗಳಿಗೆ ಸಂಬಂಧಿತ ಹಣಕಾಸು ವರದಿಯ ಮೇಲೆ ಆಂತರಿಕ ಹಣಕಾಸು ನಿಯಂತ್ರಣಗಳ ಯಾವುದೇ ಮೌಲ್ಯಮಾಪನವನ್ನು ಪ್ರಕ್ಷೇಪಿಸುವುದು ಹಣಕಾಸು ವರದಿಯ ಮೇಲೆ ಆಂತರಿಕ ಹಣಕಾಸು ನಿಯಂತ್ರಣವು ಸ್ಥಿತಿಗತಿಗಳಲ್ಲಿನ ಬದಲಾವಣೆ ಅಥವಾ ಕಾರ್ಯನೀತಿಗಳು ಅಥವಾ ಕಾರ್ಯವಿಧಾನಗಳು ಹಾಳಾಗುವುದರ ಕಾರಣ ಅಸಮರ್ಪಕಗೊಳ್ಳುವ ಸಂಭಾವ್ಯ ಅಪಾಯದ ಷರತ್ತಿಗೆ ಒಳಪಟ್ಟಿರುತ್ತದೆ.

ನಮ್ಮ ಷರತ್ತುಬದ್ಧ ಅಭಿಪ್ರಾಯ

ನಮಗೆ ಒದಗಿಸಲಾದಂತಹ ಮಾಹಿತಿಯಂತೆ ಹಾಗೂ ನೀಡಲಾದಂತಹ ವಿವರಣೆಗಳಂತೆ ಹಾಗೂ ನಾವು ನಡೆಸಿದ ಲೆಕ್ಕಪರಿಶೋಧನೆಯ ಆಧಾರದ ಮೇರೆಗೆ, 31 ಮಾರ್ಚ್ 2020ರಲ್ಲಿದ್ದಂತೆ ಈ ಕೆಳಗಿನ ವಿಷಯಕ ದೌರ್ಬಲ್ಯತೆಗಳನ್ನು ಗಮನಿಸಲಾಯಿತು–

1. ಸ್ಥಿರಾಸ್ತಿಗಳ ರಿಜಿಸ್ಟರುಗಳ ನಿರ್ವಹಣೆ, ಸ್ಥಿರಾಸ್ತಿಗಳ ನಿಯತಕಾಲಿಕ ಭೌತಿಕ ಪರಿಶೀಲನೆ ಹಾಗೂ ಲೆಕ್ಕಪತ್ರಗಳಲ್ಲಿ ಪರಿಗಣಿಸುವ ಸಲುವಾಗಿ ದುರ್ಬಲಗೊಂಡಿರಬಹುದಾದಂತಹ ಆಸ್ತಿಗಳ ಬಗ್ಗೆ ಖಚಿತಪಡಿಸಿಕೊಳ್ಳುವಿಕೆ, ಇವುಗಳಿಗೆ ಸಂಬಂಧಿಸಿದಂತೆ ನಿಗಮವು ಸೂಕ್ತ ಆಂತರಿಕ ನಿಯಂತ್ರಣ ವ್ಯವಸ್ಥೆಗಳನ್ನು ಹೊಂದಿರುವುದಿಲ್ಲ.

2. ವ್ಯಾಪಾರವ್ಯವಹಾರಗಳಿಗೆ ಸಂಬಂಧಿಸಿದಂತೆ ಸ್ವೀಕರಿಸಬೇಕಾದವುಗಳಿಗೆ ಸಂಬಂಧಿಸಿದಂತೆ ಸಮಯೋಚಿತವಾಗಿ ಸಮನ್ವಯಗೊಳಿಸುವಿಕೆ ಹಾಗೂ ಶಿಲ್ಕುಗಳ ಖಚಿತಪಡಿಸಿಕೊಳ್ಳುವಿಕೆಗಾಗಿ ನಿಗಮವು ಸೂಕ್ತ ಆಂತರಿಕ ನಿಯಂತ್ರಣ ವ್ಯವಸ್ಥೆಗಳನ್ನು ಹೊಂದಿರುವುದಿಲ್ಲ, ಇದರಿಂದಾಗಿ ವಿವಾದಗಳ ಕಾರಣ ಹಾಗೂ ಲೆಕ್ಕವನ್ನಿಡುವಿಕೆಯಲ್ಲಿನ ಲೋಪದೋಷಗಳ ಕಾರಣ ವಸೂಲಾತಿ ಮಾಡಬೇಕಾದ ಮೊತ್ತದ ಮೇಲೆ ಸಂಭಾವ್ಯ ಪರಿಣಾಮವನ್ನು ಭೀರಬಹುದು.

3. ಕೇಂದ್ರೀಕೃತ ರಿಸರ್ವೇಶನ್ ಇಂಜಿನ್ (ಸಿಆರ್‌ಇ) ಇಆರ್‌ಪಿ ವ್ಯವಸ್ಥೆಯನ್ನು ಎಲ್ಲಾ ಘಟಕಗಳ ನಡುವೆ ಪರಿಣಾಮಕಾರಿತ್ವದಿಂದ ಕಾರ್ಯಗತಗೊಳಿಸಿರುವುದಿಲ್ಲ. ಸಮರ್ಪಕವಾದ ರೀತಿಯಲ್ಲಿ ವರದಿಯನ್ನು ಪಡೆದುಕೊಳ್ಳುವುದು ಮತ್ತು ಗ್ರಾಹಕರ ಕಾಯ್ದಿರಿಸಿರುವಿಕೆಯನ್ನು ಎಲ್ಲಾ ಘಟಕಗಳ ನಡುವೆ ಪರಿಣಾಮಕಾರಿತ್ವದಿಂದ ಮೇಲ್ವಿಚಾರಣೆ ಮಾಡಿರುವುದಿಲ್ಲ, ಇದು ವರಮಾನದ ಸೋರಿಕೆಗೆ ದಾರಿ ಮಾಡಿಕೊಡಬಹುದು.

4. ಆನ್‌ಲೈನ್ ಕಾಯ್ದಿರಿಸಿರುವಿಕೆಯ ವ್ಯವಸ್ಥೆಯು ಒಂದು ಕ್ರೋಡೀಕೃತ ಪ್ಯಾಕೇಜ್ ಆಗಿರುತ್ತದೆ ಹಾಗೂ ಅದನ್ನು ಲೆಕ್ಕವನ್ನಿಡುವಿಕೆಯ ತಂತ್ರಾಂಶ ಅನ್ವಯಕ್ಕೆ ಸಂಪರ್ಕಿಸಿರುವುದಿಲ್ಲ, ಇದು ವರಮಾನವನ್ನು ಸಮರ್ಪಕವಾಗಿ ಲೆಕ್ಕ ಇಡದಿರುವಿಕೆಯ ಸಾಧ್ಯತೆಗೆ ದಾರಿ ಮಾಡಿಕೊಡಬಹುದು.

5. ಖರೀದಿಗಳು, ಸಣ್ಣಪುಟ ನಗದು ನೀಡುವ ಮೂಲಕ ಮಾಡಲಾಗುವ ವೆಚ್ಚಗಳು ಹಾಗೂ ಅದೇ ರೀತಿಯ ಇತರೆ ವೆಚ್ಚಗಳಿಗೆ ಸಂಬಂಧಿಸಿದಂತೆ ವಿವಿಧ ಉದ್ಯೋಗಿಗಳು ಮಾಡುವಂತಹ ವ್ಯವಹಾರಗಳು ಪ್ರಾರಂಭಗೊಳ್ಳುವ ಮತ್ತು ಮುಕ್ತಾಯಗೊಳ್ಳುವ ಪ್ರಕ್ರಿಯೆಗಳ ವಿವೇಚನೆಯಿಂದ ಕೂಡಿದ ಒಂದು ವ್ಯವಸ್ಥೆಯನ್ನು ಅನುಸರಿಸಿರುವುದಿಲ್ಲ.

6. ನಿಗಮವು ಒಂದು ವೆಚ್ಚ/ಮೌಲ್ಯ ಲೆಕ್ಕಹಾಕುವ ವ್ಯವಸ್ಥೆಯನ್ನು ಹಾಗೂ ಲಾಭವು ಸೋರಿಕೆಯಾಗುತ್ತಿರುವುದು ಕಂಡು ಬಂದೆಡೆಗಳಲ್ಲಿ ಪರಿಹಾರಕ ಕ್ರಮಗಳನ್ನು ತೆಗೆದುಕೊಳ್ಳುವ ಸಲುವಾಗಿ, ವ್ಯತ್ಯಯಗಳು ಯಾವುದಾದರೂ ಇದ್ದಲ್ಲಿ ಅವುಗಳನ್ನು ವಿಶ್ಲೇಷಣೆ ಮಾಡುವ ವ್ಯವಸ್ಥೆಯನ್ನು ಹೊಂದಿರುವುದಿಲ್ಲ. ನಿಗಮವು ಆಯವ್ಯಯ ನಿಯಂತ್ರಣದ ಹಾಗೂ ವಾಸ್ತವಿಕ ಮತ್ತು ಆಯವ್ಯಯ ಅನುವುಗಳನ್ನು ಹೋಲಿಕೆ ಮಾಡುವ ಒಂದು ಔಪಚಾರಿಕ ವ್ಯವಸ್ಥೆಯನ್ನು ಹೊಂದಿರುವುದಿಲ್ಲ

7. ನಿಗಮವು ವಿವಿಧ ಆನ್‌ಲೈನ್ ಬುಕಿಂಗ್ ಪ್ರತಿನಿಧಿಗಳನ್ನು ನೇಮಕ ಮಾಡಿಕೊಂಡಿರುವುದು. ಅಂತಹ ಪ್ರತಿನಿಧಿಗಳು ಗ್ರಾಹಕರಿಂದ ಹಣಕಾಸನ್ನು ನೇರವಾಗಿ ಸಂಗ್ರಹಿಸುವರು ಹಾಗೂ ತಮ್ಮ ಕಮಿಷನ್ ಅನ್ನು ಹಿಡಿದುಕೊಂಡು ನಿವ್ವಳ ಮೊತ್ತವನ್ನು ನಿಗಮಕ್ಕೆ ಪಾವತಿಸುವರು. ಆದಾಗ್ಯೂ, ಗ್ರಾಹಕರಿಂದ ಸ್ವೀಕೃತಗೊಂಡಂತಹ ಹಣಕಾಸು ಹಾಗೂ ಪ್ರತಿನಿಧಿಗಳಿಂದ ಬರಬೇಕಾದ ಹಣಕಾಸಿನ ಜಾಡನ್ನು ಹಿಡಿಯುವ ಸಲುವಾಗಿ ಒಂದು ಪರಿಣಾಮಕಾರಿತ್ವದಿಂದ ಕೂಡಿದ ವ್ಯವಸ್ಥೆಯು ಇರುವುದಿಲ್ಲ. ಇದರಿಂದಾಗಿ ಪ್ರತಿನಿಧಿಗಳು ಮಾಡುವ ಹಣಕಾಸಿನ ಸಂಗ್ರಹಣೆಯಿಂದ ನಿಗಮಕ್ಕೆ ಬರಬೇಕಾದ ವರಮಾನದಲ್ಲಿ ಸೋರಿಕೆಯಾಗುವ ಸಂಭಾವ್ಯತೆಗಳಿರುತ್ತವೆ.

1. ನಿಗಮವು ಗ್ರಾಹಕರುಗಳಿಂದ ಡೆಬಿಟ್ ಅಥವಾ ಕ್ರೆಡಿಟ್ ಕಾರ್ಡುಗಳ ಮೂಲಕ ಮಾಡಲಾಗುವ ಪಾವತಿಗಳು ಹಾಗೂ ತನ್ನ ಶುಲ್ಕಗಳನ್ನು ಕಳೆದುಕೊಂಡನಂತರ ಬ್ಯಾಂಕು ನಿಗಮಕ್ಕೆ ಪಾವತಿಸುವ ವಾಸ್ತವಿಕ ಮೊತ್ತ, ಇವುಗಳನ್ನು ಸಮೀಕ್ಷಿಸುವ ಒಂದು ಪರಿಣಾಮಕಾರಿತ್ವದಿಂದ ಕೂಡಿದ ವ್ಯವಸ್ಥೆಯನ್ನು ಹೊಂದಿರುವುದಿಲ್ಲ.

ಒಂದು 'ವಿಷಯಕ ದೌರ್ಬಲ್ಯತೆಯು' ಹಣಕಾಸು ವರದಿಯ ಮೇಲೆ ಆಂತರಿಕ ಹಣಕಾಸು ನಿಯಂತ್ರಣದಲ್ಲಿ ಲೋಪದೋಷಗಳ ಒಂದು ಸಂಯೋಜನೆಯಾಗಿರುತ್ತದೆ, ಕಂಪನಿಯ ವಾರ್ಷಿಕ ಅಥವಾ ಮಧ್ಯಂತರ ಹಣಕಾಸು ತಃಖ್ತೆಗಳಲ್ಲಿ ವಿಷಯಕ ತಪ್ಪು ಹೇಳಿಕೆಗಳನ್ನು ನೀಡುವಂತಹ ಹಾಗೂ ಅವುಗಳನ್ನು ತಡೆಯದಿರುವ ಅಥವಾ ಸಮಯೋಚಿತ ಆಧಾರದ ಮೇರೆಗೆ ಪತ್ತೆಹಚ್ಚದಿರುವ ಸಾಧ್ಯತೆಯಿರುತ್ತದೆ.

ನಮ್ಮ ಅಭಿಪ್ರಾಯದಲ್ಲಿ, ನಿಯಂತ್ರಣ ಮಾನದಂಡಗಳ ಉದ್ದೇಶಗಳನ್ನು ಸಾಧಿಸುವುದಕ್ಕೆ ಸಂಬಂಧಿಸಿದಂತೆ ಮೇಲೆ ವಿವರಿಸಲಾಗಿರುವಂತಹ ವಿಷಯಕ ದೌರ್ಬಲ್ಯತೆಗಳ ಸಂಭಾವ್ಯ ಪರಿಣಾಮಗಳನ್ನು ಹೊರತುಪಡಿಸಿದಂತೆ, ಕಂಪನಿಯು ಎಲ್ಲಾ ವಿಷಯಕ ಅಂಶಗಳಿಗೆ ಸಂಬಂಧಿಸಿದಂತೆ ಹಣಕಾಸು ವರದಿಯ ಮೇಲೆ ಸಮರ್ಪಕ ಆಂತರಿಕ ಹಣಕಾಸು ನಿಯಂತ್ರಣಗಳನ್ನು ನಿರ್ವಹಿಸಿರುವುದು ಹಾಗೂ ಅಂತಹ ಹಣಕಾಸು ವರದಿಯ ಮೇಲೆ ಆಂತಹ ಹಣಕಾಸು ನಿಯಂತ್ರಣಗಳು ಭಾರತೀಯ

ಚಾರ್ಟರ್ಡ್ ಅಕೌಂಟೆಂಟ್‌ಗಳ ಸಂಸ್ಥೆಯು ನೀಡಿರುವಂತಹ ಹಣಕಾಸು ವರದಿಯ ಮೇಲೆ ಆಂತರಿಕ ಹಣಕಾಸು ನಿಯಂತ್ರಣಗಳ ಲೆಕ್ಕಪರಿಶೋಧನೆಯ ಮೇಲೆ ಮಾರ್ಗಸೂಚಿ ಟಿಪ್ಪಣಿಯಲ್ಲಿ ತಿಳಿಸಿರುವಂತಹ ಆಂತರಿಕ ನಿಯಂತ್ರಣಗಳ ಅತ್ಯಗತ್ಯ ಭಾಗಗಳನ್ನು ಪರಿಗಣಿಸಿದಂತೆ, 31 ಮಾರ್ಚ್ 2020ರಲ್ಲಿದ್ದಂತೆ ಪರಿಣಾಮಕಾರಿತ್ವದಿಂದ ಕಾರ್ಯನಿರ್ವಹಿಸುತ್ತಿದ್ದವು.

ಆರ್ ಸಿಂಘ್ವಿ ಅಂಡ್ ಅಸೋಸಿಯೇಟ್ಸ್
ಚಾರ್ಟರ್ಡ್ ಅಕೌಂಟೆಂಟ್‌ಗಳು
(ಸಂಸ್ಥೆಯ ನೋಂದಣಿ ಸಂಖ್ಯೆ 003870ಎಸ್)

--ಸಹಿ ಮಾಡಲಾಗಿದೆ—
ಸಿಎ ಪ್ರದೀಪ್ ಹೆಗ್ಡೆ
ಪಾಲುದಾರರು
(ಸದಸ್ಯತ್ವ ಸಂಖ್ಯೆ 231733)
ಯುಡಿಐಎನ್ : 20231733ಎಎಎಎಇಎಫ್5179
ದಿನಾಂಕ 30.12.2020
ಸ್ಥಳ : ಬೆಂಗಳೂರು

ಆರ್ ಸಿಂಘ್ವಿ ಅಂಡ್ ಅಸೋಸಿಯೇಟ್ಸ್
ಚಾರ್ಟರ್ಡ್ ಅಕೌಂಟೆಂಟ್‌ಗಳು

ಸ್ವತಂತ್ರ ಲೆಕ್ಕಪರಿಶೋಧಕರ ವರದಿಗೆ "ಅನುಬಂಧ ಬಿ"

(ನಮ್ಮ ಅದೇ ದಿನಾಂಕದ ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ ನಿಯಮಿತದ ಸದಸ್ಯರುಗಳಿಗೆ ನಮ್ಮ ವರದಿಯ 'ಇತರೆ ಕಾನೂನಾತ್ಮಕ ಮತ್ತು ನಿಯಂತ್ರಕ ಅಗತ್ಯತೆಗಳ' ಅಡಿಯಲ್ಲಿ ಉಲ್ಲೇಖಿಸಲ್ಪಟ್ಟಿರುವ ಕಂಡಿಕೆ 1 (ಎಫ್)

ನಿಗಮದ ಸ್ಥಿರಾಸ್ತಿಗಳಿಗೆ ಸಂಬಂಧಿಸಿದಂತೆ :

ಎ. ನಿಗಮವು ಪರಿಮಾಣಾತ್ಮಕ ವಿವರಗಳು ಮತ್ತು ಸ್ಥಿರಾಸ್ತಿಗಳು ಇರುವ ಸ್ಥಳ, ಇವೇ ಮುಂತಾದ ವಿವರಗಳನ್ನು ತೋರಿಸಿದಂತೆ ಸಂಪೂರ್ಣ ಮಾಹಿತಿಯನ್ನು ತೋರಿಸುವ ಸಮರ್ಪಕ ದಾಖಲೆಗಳನ್ನು ನಿರ್ವಹಿಸಿರುವುದಿಲ್ಲ.

ಬಿ. ನಮಗೆ ವಿವರಿಸಿರುವಂತೆ, ಕಂಪನಿಯ ಗಾತ್ರ ಹಾಗೂ ಆಸ್ತಿಗಳ ಸ್ವರೂಪವನ್ನು ಅವಲಂಭಿಸಿದಂತೆ ವ್ಯವಸ್ಥಾಪನೆಯು/ಆಡಳಿತ ಮಂಡಳಿಯು ಸ್ಥಿರಾಸ್ತಿಗಳನ್ನು ಒಂದು ನ್ಯಾಯಸಮ್ಮತ ಅಂತರಗಳಲ್ಲಿ ಭೌತಿಕವಾಗಿ ಪರಿಶೀಲಿಸಿರುವುದು. ನಿಗಮವು ಸ್ಥಿರಾಸ್ತಿಗಳ ರಿಜಿಸ್ಟರನ್ನು ನಿರ್ವಹಿಸಿಲ್ಲವಾದ್ದರಿಂದ, ಅವುಗಳನ್ನು ಲೆಕ್ಕಪತ್ರ ಪುಸ್ತಕಗಳಲ್ಲಿ ಸಮರ್ಪಕವಾಗಿ ವ್ಯವಹರಿಸಲಾಗಿರುವುದೇ ಎಂಬುದರ ಬಗ್ಗೆ ಟೀಕೆಟಿಪ್ಪಣಿ ಮಾಡಲಾಗಲಿಲ್ಲ.

ಸಿ. ನಮಗೆ ಒದಗಿಸಲಾದ ಮಾಹಿತಿಯಂತೆ ಮತ್ತು ನೀಡಲಾದ ವಿವರಣೆಗಳಂತೆ, ಕಂಪನಿಯು ಕಟ್ಟಡ/ಭೂಮಿ ಮುಂತಾದ ಆಸ್ತಿಗಳು, ಯಂತ್ರಗಳು/ಸ್ಥಾವರ ಮತ್ತು ಉಪಕರಣಗಳಿಗೆ ಸಂಬಂಧಿತ ಟಿಪ್ಪಣಿ ಸಂಖ್ಯೆ 11ರಲ್ಲಿ ಬಹಿರಂಗಪಡಿಸಿರುವಂತೆ ಆಸ್ತಿ–ಜವಾಬ್ದಾರಿ ತ:ಖ್ತೆಯಲ್ಲಿ ತೋರಿಸಿರುವಂತೆ ಗುತ್ತಿಗೆ ಆಧಾರದ ಮೇರೆಗೆ ರೂ.26,57,967/–ರಷ್ಟು ಮೌಲ್ಯದ ಭೂಮಿಯನ್ನು 4 ಕಡೆಗಳಲ್ಲಿ ಹೊಂದಿರುವುದು, ಇದಕ್ಕೆ ಸಂಬಂಧಿಸಿದಂತೆ ಕಂಪನಿಯ ಹೆಸರಿನಲ್ಲಿ ಸಮರ್ಪಕ ಹಕ್ಕು ಪತ್ರಗಳನ್ನು ನಮಗೆ ಒದಗಿಸಲಿಲ್ಲ. ಆದ್ದರಿಂದ ಈ ನಿಟ್ಟಿನಲ್ಲಿ ನಾವು ಪರಿಶೀಲಿಸಲಾಗಲಿಲ್ಲ ಮತ್ತು ಯಾವುದೇ ಟೀಕೆಟಿಪ್ಪಣಿಗಳನ್ನು ಮಾಡಲಾಗಲಿಲ್ಲ.

ಕಂಪನಿಯು ತಾನೇ ಸ್ವತ: ಅಥವಾ 'ನವೀಕರಿಸು, ಕಾರ್ಯಾಚರಣೆಗೊಳಿಸು, ನಿರ್ವಹಿಸು ಮತ್ತು ವರ್ಗಾಯಿಸು' ಆಧಾರದ ಮೇರೆಗೆ ಮೂರನೇ ತಂಡಗಳಿಗೆ ಪರವಾನಿಗೆ ನೀಡುವ ಮೂಲಕ ಹೋಟೆಲುಗಳ ಕಾರ್ಯಾಚರಣೆಗಾಗಿ ಕಟ್ಟಡಗಳನ್ನು ನಿರ್ಮಿಸಿರುವುದು. ನಮಗೆ ಒದಗಿಸಲಾದ ಮಾಹಿತಿಯಂತೆ ಹಾಗೂ ನೀಡಲಾದ ವಿವರಣೆಗಳಂತೆ, ಈ ರೀತಿ ಕಟ್ಟಲಾಗಿರುವ ಕಟ್ಟಡಗಳು ಇರುವಂತಹ ಭೂಮಿಯನ್ನು ಸರ್ಕಾರಿ ಆದೇಶದ ಕಾರಣ ಕಂಪನಿಯ ಹೆಸರಿಗೆ ವರ್ಗಾಯಿಸಲಾಗಿರುವುದು. ಆದಾಗ್ಯೂ, ಸಮರ್ಪಕ ಸರ್ಕಾರಿ ಆದೇಶಗಳನ್ನು ನಮಗೆ ಒದಗಿಸಲಿಲ್ಲ. ಆದ್ದರಿಂದ ಈ ನಿಟ್ಟಿನಲ್ಲಿ ನಾವು ಪರಿಶೀಲಿಸಲಾಗಲಿಲ್ಲ ಮತ್ತು ಯಾವುದೇ ಟೀಕೆಟಿಪ್ಪಣಿಗಳನ್ನು ಮಾಡಲಾಗಲಿಲ್ಲ.

ii. ನಿಗಮದ ಸರಕುಸಾಮಗ್ರಿಗಳಿಗೆ ಸಂಬಂಧಿಸಿದಂತೆ :

ಎ) ನಮಗೆ ಒದಗಿಸಲಾದ ಮಾಹಿತಿಯಂತೆ ಹಾಗೂ ನೀಡಲಾದ ವಿವರಣೆಗಳಂತೆ, ವ್ಯವಸ್ಥಾಪನೆಯು/ಆಡಳಿತ ಮಂಡಳಿಯು ವರ್ಷದ ಅಂತ್ಯದಲ್ಲಿ ದಾಸ್ತಾನುಗಳನ್ನು ಭೌತಿಕವಾಗಿ ಪರಿಶೀಲಿಸಿರುವುದು.

ಬಿ) ನಿಯತಕಾಲಿಕ ಭೌತಿಕ ಪರಿಶೀಲನೆಗಾಗಿ ಕಾರ್ಯವಿಧಾನಗಳ ದಾಖಲಾತಿಗಳ ಅನುಪಸ್ಥಿತಿಯಲ್ಲಿ ಹಾಗೂ ನಿಗಮದ ವಿವಿಧ ಘಟಕಗಳಲ್ಲಿ ನಿಯತಕಾಲಿಕ ಭೌತಿಕ ಪರಿಶೀಲನೆ ನಡೆಸಿದ್ದಕ್ಕಾಗಿ ಸಾಕ್ಷಾಧಾರ ದಾಖಲೆಗಳ ಅನುಪಸ್ಥಿತಿಯಲ್ಲಿ ವ್ಯವಸ್ಥಾಪನೆ/ಆಡಳಿತ ಮಂಡಳಿಯು ಅನುಸರಿಸಿರುವಂತಹ ಸರಕುಸಾಮಗ್ರಿಗಳ ಭೌತಿಕ ಪರಿಶೀಲನೆಯ ಕಾರ್ಯವಿಧಾನಗಳು ನಿಗಮದ ಗಾತ್ರಕ್ಕೆ ಹಾಗೂ ವ್ಯಾಪಾರವ್ಯವಹಾರಗಳ ಸ್ವರೂಪಕ್ಕೆ ಹೋಲಿಸಿದಂತೆ ನ್ಯಾಯಸಮ್ಮತವಾಗಿದ್ದವೆ ಹಾಗೂ ಸಮರ್ಪಕವಾಗಿದ್ದವೆ ಎಂಬುದರ ಬಗ್ಗೆ ನಾವು ಟೀಕೆಟಿಪ್ಪಣಿ ಮಾಡಲಾಗಲಿಲ್ಲ.

ಸಿ. ನಮಗೆ ಒದಗಿಸಲಾದ ಮಾಹಿತಿಯಂತೆ ಹಾಗೂ ನೀಡಲಾದ ವಿವರಣೆಗಳಂತೆ, ಭೌತಿಕ ಪರಿಶೀಲನೆ ಮಾಡಿದಂದು ಹಾಗೂ ಅವುಗಳನ್ನು ಲೆಕ್ಕಪತ್ರ ಪುಸ್ತಕಗಳಲ್ಲಿ ಲೆಕ್ಕಕ್ಕೆ ತೆಗೆದುಕೊಳ್ಳುವಲ್ಲಿ ಯಾವುದಾದರೂ ವಿಷಯಕ ಲೋಪದೋಷಗಳು ಇದ್ದಲ್ಲಿ, ಅವುಗಳ ಬಗ್ಗೆ ನಾವು ಖಚಿತಪಡಿಸಿಕೊಳ್ಳಲು ಸಾಧ್ಯವಿರುವುದಿಲ್ಲ.

iii. 'ನಮಗೆ ಒದಗಿಸಲಾದ ಮಾಹಿತಿಯಂತೆ ಹಾಗೂ ನೀಡಲಾದ ವಿವರಣೆಗಳಂತೆ, ಕಂಪನಿಗಳ ಅಧಿನಿಯಮ, 2013ರ ಪರಿಚ್ಛೇದ 189ರ ಅಡಿಯಲ್ಲಿ ವ್ಯಾಪಿಸಿರುವ ರೀತಿಯಲ್ಲಿ ನಿಗಮವು ಯಾವುದೇ ಕಂಪನಿಗಳಿಗೆ, ಸಂಸ್ಥೆಗಳಿಗೆ, ಎಲ್‌ಎಲ್‌ಪಿಗಳಿಗೆ ಅಥವಾ ಇತರೆ ತಂಡಗಳಿಗೆ ಯಾವುದೇ ಭದ್ರತೆಯಿಂದ ಕೂಡಿರುವ ಅಥವಾ ಭದ್ರತೆಯಿಂದ ಕೂಡಿರದ ಸಾಲಗಳನ್ನು ನೀಡಿರುವುದಿಲ್ಲ.

iv. ನಮಗೆ ಒದಗಿಸಲಾದ ಮಾಹಿತಿಯಂತೆ ಹಾಗೂ ನೀಡಲಾದ ವಿವರಣೆಗಳಂತೆ, ಕಂಪನಿಗಳ ಅಧಿನಿಯಮ, 2013ರ ಪರಿಚ್ಛೇದ 185 ಮತ್ತು 186ರ ಅಡಿಯಲ್ಲಿ ವ್ಯಾಪಿಸಿರುವ ರೀತಿಯಲ್ಲಿ ನಿಗಮವು ಯಾವುದೇ ಸಾಲಗಳು, ಹೂಡಿಕೆಗಳು, ಖಾತರಿಗಳು ಅಥವಾ ಭದ್ರತೆಗಳನ್ನು ನೀಡಿರುವುದಿಲ್ಲ. ಆದ್ದರಿಂದ, ಆದೇಶದ ಕಂಡಿಕೆ 3 (೨ತ)ರ ಅನುವುಗಳು ನಿಗಮಕ್ಕೆ ಅನ್ವಯಗೊಳ್ಳುವುದಿಲ್ಲ.

v. ನಮಗೆ ಒದಗಿಸಲಾದ ಮಾಹಿತಿಯಂತೆ ಹಾಗೂ ನೀಡಲಾದ ವಿವರಣೆಗಳಂತೆ, ನಿಗಮವು ಯಾವುದೇ ಠೇವಣಿಗಳನ್ನು ಸ್ವೀಕರಿಸಿರುವುದಿಲ್ಲ ಮತ್ತು ಆದ್ದರಿಂದ ಆದೇಶದ ಕಂಡಿಕೆ 3 (ತಿ)ರ ಅನುವುಗಳು ನಿಗಮಕ್ಕೆ ಅನ್ವಯಗೊಳ್ಳುವುದಿಲ್ಲ.

vi. ಭಾರತ ಸರ್ಕಾರವು ನಿಗಮದ ಯಾವುದೇ ಕಾರ್ಯಚಟುವಟಿಕೆಗಳಿಗಾಗಿ ಅಧಿನಿಯಮದ ಪರಿಚ್ಛೇದ 148ರ ಉಪ–ಪರಿಚ್ಛೇದ (1)ರ ಅಡಿಯಲ್ಲಿ ವೆಚ್ಚ/ಮೌಲ್ಯಗಳನ್ನು ಲೆಕ್ಕಹಾಕುವ ಸಲುವಾಗಿ ದಾಖಲೆಗಳ ನಿರ್ವಹಣೆಯನ್ನು ನಿರ್ದಿಷ್ಟಪಡಿಸಿರುವುದಿಲ್ಲ ಮತ್ತು ಆದ್ದರಿಂದ ಆದೇಶದ ಕಂಡಿಕೆ 3 (ತು) ನಿಗಮಕ್ಕೆ ಅನ್ವಯಗೊಳ್ಳುವುದಿಲ್ಲ.

vii. ನಮಗೆ ಒದಗಿಸಲಾದ ಮಾಹಿತಿಯಂತೆ ಹಾಗೂ ನೀಡಲಾದ ವಿವರಣೆಗಳಂತೆ, ಶಾಸನಬದ್ಧ ಬಾಕಿಗಳಿಗೆ ಸಂಬಂಧಿಸಿದಂತೆ :

ಎ. ನಮಗೆ ಒದಗಿಸಲಾದ ಮಾಹಿತಿಯಂತೆ ಹಾಗೂ ನೀಡಲಾದ ವಿವರಣೆಗಳಂತೆ ಹಾಗೂ ಕಂಪನಿಯ ದಾಖಲೆಗಳನ್ನು ನಾವು ಪರಿಶೀಲಿಸಿದಂತೆ, ಭವಿಷ್ಯ ನಿಧಿ, ಉದ್ಯೋಗಿಗಳ ರಾಜ್ಯ ವಿಮೆ, ಆದಾಯ ತೆರಿಗೆ, ಸರಕುಗಳು ಮತ್ತು ಸೇವೆಗಳ ಮೇಲಿನ ತೆರಿಗೆ, ಅಬಕಾರಿ ಸುಂಕ, ಸೆಸ್ಸುಗಳು ಮತ್ತು ಇತರೆ ವಿಷಯಕ ಶಾಸನಬದ್ಧ ಬಾಕಿಗಳನ್ನು ಒಳಗೊಂಡಂತೆ ಅವಿವಾಧಿತ ಶಾಸನಬದ್ಧ ಬಾಕಿಗಳಿಗೆ ಸಂಬಂಧಿಸಿದಂತೆ ಲೆಕ್ಕಪತ್ರ ಪುಸ್ತಕಗಳಲ್ಲಿ ಮೂಲದಲ್ಲಿಯೇ ಕಡಿದುಕೊಳ್ಳಲಾಗಿರುವ/ಸಂಚಿತಗೊಂಡಿರುವ ಮೊತ್ತಗಳನ್ನು ನಿಗಮವು ಪ್ರಸಕ್ತ ಸಾಲಿನಲ್ಲಿ ಸಾಮಾನ್ಯವಾಗಿ ನಿಯತವಾಗಿ ಸಂಬಂಧಿತ ಇಲಾಖೆಗಳಿಗೆ ಪಾವತಿಸಿರುವುದು.

ನಮಗೆ ಒದಗಿಸಲಾದ ಮಾಹಿತಿಯಂತೆ ಹಾಗೂ ನೀಡಲಾದ ವಿವರಣೆಗಳಂತೆ, ಭವಿಷ್ಯ ನಿಧಿ, ಉದ್ಯೋಗಿಗಳ ರಾಜ್ಯ ವಿಮೆ, ಆದಾಯ ತೆರಿಗೆ, ಸರಕುಗಳು ಮತ್ತು ಸೇವೆಗಳ ಮೇಲಿನ ತೆರಿಗೆ, ಅಬಕಾರಿ ಸುಂಕ, ಸೆಸ್ಸುಗಳು ಮತ್ತು ಇತರೆ ವಿಷಯಕ ಶಾಸನಬದ್ಧ ಬಾಕಿಗಳನ್ನು ಒಳಗೊಂಡಂತೆ ಪಾವತಿಸಬೇಕಿರುವ ಯಾವುದೇ ಅವಿವಾಧಿತ ಪಾವತಿಗಳು ಆರು ತಿಂಗಳುಗಳಿಗೂ ಮೀರಿದಂತೆ ಬಾಕಿಯಿರಲಿಲ್ಲ. ಈ ಕೆಳಗಿನವುಗಳನ್ನು ಹೊರತುಪಡಿಸಿದಂತೆ :

ಬಾಕಿಗಳ ಸ್ವರೂಪ	ಮೊತ್ತ ರೂಪಾಯಿಗಳಲ್ಲಿ
ಭವಿಷ್ಯ ನಿಧಿ	2,87,000
ಉದ್ಯೋಗಿಗಳ ರಾಜ್ಯ ವಿಮೆ	1,30,889
ಕಾರ್ಮಿಕರ ಕಲ್ಯಾಣ ನಿಧಿ	2,42,767
ಮೂಲದಲ್ಲಿಯೇ ಕಡಿದುಕೊಳ್ಳಲಾಗಿರುವ ತೆರಿಗೆ	31,43,400
ಸರಕುಗಳು ಮತ್ತು ಸೇವೆಗಳ ಮೇಲಿನ ತೆರಿಗೆ	17,91,768

11	ಆದಾಯ ತೆರಿಗೆಗೆ ಸಂಬಂಧಿಸಿದಂತೆ – ಕರನಿರ್ಧಾರಣಾ ಸಾಲು 2018–19	**295.16**	**–**
12	ತೋಟಗಾರಿಕೆ ಇಲಾಖೆ, ಕಬ್ಬನ್ ಪಾರ್ಕ್, ಇವರಿಗೆ ಪಾವತಿಸಬೇಕಾಗಿರುವುದು	**38.62**	**38.62**
13	ಐಸಿಎಫ್, ಚೆನ್ನೈ, ಇವರಿಗೆ ಅಬಕಾರಿ ಸುಂಕ	**358.00**	**358.00**
14	ಮುಜರಾಯಿ ಇಲಾಖೆಗೆ ಪಾವತಿಸಬೇಕಿರುವ ವಿದ್ಯುತ್ ಶುಲ್ಕಗಳು	**1.87**	**1.87**
15	ಸರ್ಕಾರಿ ಸಾಲದ ಮೇಲೆ ಸುಸ್ತಿ ಬಡ್ಡಿ	**32,50**	**32.50**
16	ಕೆಮ್ಮಣ್ಣಗುಂಡಿಯಲ್ಲಿ ಕಾಮಗಾರಿಗಾಗಿ ಗುತ್ತಿಗೆದಾರರಿಗೆ ಪಾವತಿಸಬೇಕಿರುವ ಬಾಕಿ ಮೊತ್ತ	**251.65**	**251.65**
	ಒಟ್ಟು		

ಆದಾಗ್ಯೂ, ನಿಗಮವು 31 ಮಾರ್ಚ್ 2020ರಲ್ಲಿದ್ದಂತೆ ರೂ.4,55,11,997/–ರಷ್ಟು ಮೊತ್ತದಾ ಮೂಲದಲ್ಲಿಯೇ ಕಡಿದುಕೊಳ್ಳಲಾದಂತಹ ತೆರಿಗೆಗಳನ್ನು ಸ್ವೀಕರಿಸಬೇಕಾದವುಗಳನ್ನು ಹೋಂದಿದ್ದಿತು ಹಾಗೂ 2017–18 ನಿರ್ಧಾರಣಾ ಸಾಲಿಗೆ ಮನವಿಯನ್ನು ಸಲ್ಲಿಸಿ ತಗಾದೆಯ ಮೊತ್ತದ ಪ್ರತಿಯಾಗಿ ರೂ.1,29,21,526/–ರಷ್ಟು ಮೊತ್ತವನ್ನು ಠೇವಣಿ ಇಟ್ಟಿರುವುದು.

30. ಬಡ್ಡಿಗೆ ಸಂಬಂಧಿಸಿದಂತೆ ನಿರ್ದಿಷ್ಟ ನಿರ್ದೇಶನಗಳು ಇಲ್ಲವಾದ್ದರಿಂದ, ಪ್ರವಾಸೋದ್ಯಮ ಇಲಾಖೆಯಿಂದ ಮತ್ತು ಕರ್ನಾಟಕ ಸರ್ಕಾರದಿಂದ ಪಡೆದುಕೊಳ್ಳಲಾದ ಒಟ್ಟಾರೆ ಸಾಲದ ಮೊತ್ತದ ಮೇಲೆ ಬಡ್ಡಿ ಪಾವತಿಗಾಗಿ ಅನುವು ಮಾಡಿರಲಿಲ್ಲ ಹಾಗೂ ಅದನ್ನು ಈಕ್ವಿಟಿಯನ್ನಾಗಿ ಪರಿವರ್ತಿಸುವಂತೆ ಕೋರಿರುವುದು, ಆ ಕೋರಿಕೆಯು ತೀರ್ಮಾನವನ್ನು ತೆಗೆದುಕೊಳ್ಳಲು ಬಾಕಿಯಿರುವುದು.

31 (ಎ) ಟಿಪ್ಪಣಿ ಸಂಖ್ಯೆ 11ರಲ್ಲಿ (ಸ್ಥಿರಾಸ್ತಿಗಳು) ನಮೂದಿಸಲಾಗಿರುವ ಕಟ್ಟಡಗಳನ್ನು ಒಳಗೊಂಡಂತೆ ಬಿಳಿಗಿರಿರಂಗನ ಬೆಟ್ಟಗಳಲ್ಲಿನ ಯಾತ್ರಿ ನಿವಾಸವನ್ನು ಕರ್ನಾಟಕ ಸರ್ಕಾರವು ನಿಗಮಕ್ಕೆ ವಹಿಸಿಕೊಟ್ಟಿತು, ಅದಕ್ಕಾಗಿ ಹಕ್ಕು ಪತ್ರಗಳನ್ನು ನಿಗಮದ ಪರವಾಗಿ ನೋಂದಣಿ ಮಾಡಿಸಿರಲಿಲ್ಲ.

31 (ಬಿ) ಸ್ಥಿರಾಸ್ತಿಗಳು, ಬೆಂಗಳೂರಿನ ಚಳ್ಳಘಟ್ಟ ಗ್ರಾಮದಲ್ಲಿ ಭೂ ಸ್ವಾಧೀನ ಪ್ರಕ್ರಿಯೆಯ ಮೂಲಕ ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ಪ್ರಾಧಿಕಾರವು ಕರ್ನಾಟಕ ಸರ್ಕಾರದ ಅಧಿಸೂಚನೆ ಸಂಖ್ಯೆ ಎಲ್‌ಎಕ್ಯು.ಎಸ್‌ಆರ್.256/81–82 ದಿನಾಂಕ 12.11.1987ರ ಮೂಲಕ ಸ್ವಾಧೀನಪಡಿಸಿಕೊಂಡಂತಹ ಹಾಗೂ ದಿನಾಂಕ: 06.04.1989 ರಂದು 5 ಎಕರೆಗಳು 9 ಗುಂಟೆಗಳಷ್ಟು ವಿಸ್ತೀರ್ಣದ ರೂ.26.16 ಲಕ್ಷ ಮೌಲ್ಯದ ಭೂಮಿಯನ್ನು ಒಳಗೊಂಡಿರುತ್ತದೆ, ಇದನ್ನು ಯೂನಿವರ್ಸಲ್ ರೆಸಾರ್ಟ್ಸ್ ಲಿಮಿಟೆಡ್‌ಗೆ ಗುತ್ತಿಗೆಗೆ ನೀಡಲಾಗಿದ್ದಿತು. ಈ ಪೈಕಿ 1 ಎಕರೆ 3 ಗುಂಟೆಗಳನ್ನು 2012ರಲ್ಲಿ ಮೂಲ ಭೂ ಮಾಲೀಕರಾದ ಶ್ರೀ ಜಯರಾಮ ರೆಡ್ಡಿಯವರಿಗೆ ಹಿಂತಿರುಗಿಸಲಾಯಿತು. ಸರ್ವೇ ಸಂಖ್ಯೆ 122ರ (ಮೇಲೆ ತಿಳಿಸಲಾದ ಭೂಮಿಯ ಒಂದು ಭಾಗ) ಭೂ ಮಾಲೀಕರುಗಳಾದಂತಹ ಶ್ರೀ ರಾಮಯ್ಯ ರೆಡ್ಡಿ ಹಾಗೂ ಶ್ರೀ ನಾಗರಾಜ ರೆಡ್ಡಿಯವರು ತಮ್ಮ ಜಮೀನನ್ನು ತಮಗೆ ಪುನರ್–ಕೊಡಿಸುವಂತೆ ಕರ್ನಾಟಕದ ಉಚ್ಚ ನ್ಯಾಯಾಲಯದಲ್ಲಿ ಮನವಿಯನ್ನು ಸಲ್ಲಿಸಿರುವರು. ಮನವಿಯು ವಿಲೇವಾರಿಗಾಗಿ ಬಾಕಿಯಿರುವುದು. ಯೂನಿವರ್ಸಲ್ ರೆಸಾರ್ಟ್ಸ್ ಲಿಮಿಟೆಡ್ 2 ಎಕರೆಗಳು 26 ಗುಂಟೆಗಳಿಗೆ ನಿರ್ದಿಷ್ಟ ದರಗಳಲ್ಲಿ ನಿಗಮಕ್ಕೆ ಗುತ್ತಿಗೆ ಬಾಡಿಗೆಯನ್ನು ಪಾವತಿಸುತ್ತಿರುವುದು.

31 (ಸಿ) ಕರ್ನಾಟಕ ಸರ್ಕಾರವು, ,ಸುವರ್ಣ ರಥ' (,ದಿ ಗೋಲ್ಡನ್ ಚಾರಿಯಟ್') ಎಂಬ ಹೆಸರಿನ ವಿಲಾಸಿ ಪ್ರವಾಸಿ ರೈಲನ್ನು ಕಾರ್ಯಾಗತಗೊಳಿಸುವ ಸಲುವಾಗಿ ಕರ್ನಾಟಕ ಪ್ರವಾಸೋದ್ಯಮ ಅಭಿವೃದ್ಧಿ ನಿಗಮವನ್ನು ಒಂದು ಸಂಪರ್ಕಸೇತು ಸಂಸ್ಥೆಯನ್ನಾಗಿ ನಾಮನಿರ್ದೇಶನ ಮಾಡಿತು, ಈ ರೈಲಿನ ಕಾರ್ಯಾಗತಗೊಳಿಸುವಿಕೆಯನ್ನು ಭಾರತೀಯ ರೈಲ್ವೇ ಜೊತೆಯಲ್ಲಿ ಜಂಟಿಯಾಗಿ ಕೈಗೆತ್ತಿಕೊಳ್ಳಲಾಗಿರುವುದು. ಈ ನಿಟ್ಟಿನಲ್ಲಿ ಪ್ರಾರಂಭಿಕವಾಗಿ 5 ವರ್ಷಗಳಿಗೆ ಪರಸ್ಪರ ತಿಳಿವಳಿಕೆ ಪತ್ರವನ್ನು 2002ರಲ್ಲಿ ಮಾಡಿಕೊಳ್ಳಲಾಗಿರುವುದು, ಒಂದು ಒಡಂಬಡಿಕೆಯನ್ನು ಮಾಡಿಕೊಳ್ಳುವುದನ್ನು ಈ ಪರಸ್ಪರ ತಿಳಿವಳಿಕೆ ಪತ್ರವು ಚಿಂತಿಸಿದ್ದಿತು. ಆದಾಗ್ಯೂ, ತದನಂತರದಲ್ಲಿ ಈ ನಿಟ್ಟಿನಲ್ಲಿ ಯಾವುದೇ ಒಡಂಬಡಿಕೆಯನ್ನೂ ಮಾಡಿಕೊಂಡಿರುವುದಿಲ್ಲ ಹಾಗೂ ಭಾರತೀಯ ರೈಲು ವೆಚ್ಚಗಳನ್ನು ಪಾವತಿಸುವಂತೆ ಕಾಲಾನುಕಾಲಕ್ಕೆ ಮಾಡುವ ಒತ್ತಾಯಗಳ ಆಧಾರದ ಮೇರೆಗೆ ಸಾಗಾಣಿಕೆ ವೆಚ್ಚಗಳನ್ನು ಪಾವತಿಸುವ ಮೂಲಕ ಸುವರ್ಣ ರಥ ವಿಲಾಸಿ ಟ್ರೈನನ್ನು ಕಾರ್ಯಾಚರಣೆಗೊಳಿಸುತ್ತಿರುವುದು.

31 (ಡಿ)(i) ಭಾರತ ಸರ್ಕಾರದಿಂದ ರೂ.7.66 ಕೋಟಿ ಹಾಗೂ ಕರ್ನಾಟಕ ಸರ್ಕಾರದಿಂದ ರೂ.16.38 ಕೋಟಿ, ಈ ರೀತಿಯಾಗಿ ಒಟ್ಟಾರೆ ರೂ.24.04 ಕೋಟಿ ಮೊತ್ತದಷ್ಟು ಅನುದಾನಗಳನ್ನು ಹಿಂದಿನ ಸಾಲುಗಳಲ್ಲಿ ಸ್ವೀಕರಿಸಲಾಗಿರುವುದು ಹಾಗೂ ಈ ಮೊತ್ತಗಳನ್ನು ವಿಲಾಸಿ ಟ್ರೈನಿನ ಕೋಚುಗಳ ಒಳ ಭಾಗವನ್ನು ಅಲಂಕರಿಸುವ ಉದ್ದೇಶಕ್ಕಾಗಿ ಬಳಸಿಕೊಳ್ಳಲಾಗಿರುವುದು. ಸ್ಥಿರಾಸ್ತಿಗಳ ಷೆಡ್ಯೂಲಿನಲ್ಲಿ ವಿಲಾಸಿ ಟ್ರೈನು – ಸುವರ್ಣ ರಥ, ಇದರ ಅಡಿಯಲ್ಲಿ ತೋರಿಸಲಾಗಿರುವಂತಹ ಮೊತ್ತವು ರೈಲ್ವೇ ಇಲಾಖೆಯು ಸರಬರಾಜು ಮಾಡಿದ ಖಾಲಿ ಕೋಚುಗಳನ್ನು ಸಿದ್ಧಗೊಳಿಸುವ ಸಲುವಾಗಿ ಹಾಗೂ ಪೀಠೋಪಕರಣ ಮತ್ತು ಅಲಂಕರಣ ಸಾಮಗ್ರಿಗಳನ್ನು ಅಳವಡಿಸುವ ಸಲುವಾಗಿ ಮೇಲೆ ತಿಳಿಸಲಾದಂತಹ ಮೊತ್ತವನ್ನು ಒಳಗೊಂಡಿರುತ್ತದೆ. ಆಸ್ತಿಗಳು ವಿದ್ಯುತ್ ಅಳವಡಿಕೆಗಳು, ಉಪಕರಣಗಳು, ಪೀಠೋಪಕರಣಗಳು, ಸಜ್ಜುಗೊಂಡಿರುವಂತಹ ಅಲಂಕರಣ ಸಾಧನಗಳು, ಕ್ರಾಕರಿ, ಕಟ್ಲರಿ, ಹಾಸುಹೊದಿಕೆಗಳು, ಜಿಮ್ ಮತ್ತು ಸ್ಪಾ ಉಪಕರಣಗಳು, ಇತ್ಯಾದಿಗಳನ್ನು ಒಳಗೊಂಡಿರುತ್ತವೆ ಹಾಗೂ ಇವುಗಳು ಕಂಪನಿಗಳ ಅಧಿನಿಯಮ, 2013ರ ಅಡಿಯಲ್ಲಿ ಬಳಸಬಹುದಾದಂತಹ ವಿವಿಧ ಅವಧಿಗಳನ್ನು ಹೊಂದಿರುತ್ತವೆ. ವೈಯಕ್ತಿಕ ಆಸ್ತಿಗಳ ವಿಭಜನೆ/ವಿಘಟನೆಯು ದಾಖಲೆಗಳಲ್ಲಿ ಲಭ್ಯವಿರುವುದಿಲ್ಲವಾದ್ದರಿಂದ, ಕಂಪನಿಯು ವೈಯಕ್ತಿಕ ಆಸ್ತಿಗಳ ಬಳಸಬಹುದಾದ ಅವಧಿಯನ್ನು ಪರಿಗಣಿಸದೆಯೇ ಒಟ್ಟಾರೆಯಾಗಿ 15 ವರ್ಷಗಳ ಒಂದು ಅವಧಿಯಾದ್ಯಂತ ಒಂದು ಕ್ರೋಢೀಕೃತ ಮೊತ್ತವನ್ನು ಸವಕಳಿಗೆ ಅನುವು ಮಾಡಿರುತ್ತದೆ.

(ii) ಸುವರ್ಣ ರಥಕ್ಕಾಗಿ ಕ್ರಾಕರಿ, ಕಟ್ಲರಿ, ಹಾಸುಹೊದಿಕೆ, ಇತ್ಯಾದಿಗಳ ತದನಂತರದ ಖರೀದಿಗಳನ್ನು ನಿಗಮದ ಹೋಟೆಲು ವ್ಯವಹಾರಗಳಿಗಾಗಿ ಖರೀದಿಸಲಾಗುವಂತಹ ಅಂತಹುದೇ ಬಾಬುಗಳಿಗೆ 5 ವರ್ಷಗಳ ಒಂದು ಅವಧಿಯಾದ್ಯಂತ ದಾಖಲೆಗಳಿಂದ ಕ್ರಮೇಣ ಮೌಲ್ಯವನ್ನು ತಗ್ಗಿಸುವ ಕಾರ್ಯನೀತಿಯ ಪ್ರತಿಯಾಗಿ ಖರೀದಿಸಲಾದಂತಹ ಸಾಲಿನ ಲಾಭ ಮತ್ತು ನಷ್ಟ ತ:ಖ್ತೆಯಲ್ಲಿ ಖರ್ಚಿಗೆ ಹಾಕಲಾಗುತ್ತಿದೆ.

(iii) ಪ್ರಸಕ್ತ ಸಾಲಿನಲ್ಲಿ ಟಿಜಿಸಿಯನ್ನು 15 ನವಂಬರ್ 2019ರ ಒಂದು ಒಡಂಬಡಿಕೆಯ ಮೂಲಕಐಆರ್‌ಸಿಟಿಸಿಗೆ ನವೀಕರಿಸು, ಕಾರ್ಯಾಚರಣೆಗೊಳಿಸು, ನಿರ್ವಹಿಸು ಮತ್ತು ವರ್ಗಾಯಿಸು ಆಧಾರದ ಮೇರೆಗೆ 10 ವರ್ಷಗಳ ಒಂದು ಅವಧಿಗೆ ವಹಿಸಿಕೊಡಲಾಗಿರುವುದು. ಒಡಂಬಡಿಕೆಯ ಅನುಸಾರ, ಐಆರ್‌ಸಿಟಿಸಿ ನಿಗದಿತ ವಾರ್ಷಿಕ ಪಾವತಿಗಳಿಗಿಂತ ಅಧಿಕ ಮೊತ್ತ ಅಥವಾ ಐಆರ್‌ಸಿಟಿಸಿಯ 31 ಮಾರ್ಚ್ 2020ರಲ್ಲಿದ್ದಂತೆ ನಿವ್ವಳ ವರಮಾನದ ಒಂದು ಶೇಕಡಾವಾರಿನ ಮೊತ್ತವನ್ನು ಪಾವತಿಸತಕ್ಕದ್ದು.

32 (i) ಕರ್ನಾಟಕ ಗಾಲ್ಫ್ ಅಸೋಸಿಯೇಷನ್‌ಗೆ ನೀಡಿರುವಂತಹ ರೂ.9.33 ಲಕ್ಷ ಮೊತ್ತವನ್ನು ಸಾಲಗಳು ಮತ್ತು ಮುಂಗಡಗಳು ಎಂಬುದಾಗಿ ತೋರಿಸಲಾಗಿರುವುದು. ಈ ಮೊತ್ತವನ್ನು ಹೊಂದಾಣಿಕೆ ಮಾಡುವ ಸಲುವಾಗಿ, ರೂ.10.00 ಲಕ್ಷ ಮೊತ್ತದಷ್ಟು ಅನುದಾನವನ್ನು ಮಂಜೂರು ಮಾಡುವಂತೆ ನಿಗಮವು ಸರ್ಕಾರವನ್ನು ಕೋರಿರುವುದು.

(ii) ಕರ್ನಾಟಕ ಸರ್ಕಾರವು ತನ್ನ 26–12–2000 ದಿನಾಂಕದ ಆದೇಶದ ಮೂಲಕ ಬೆಳಗಾವಿಯಲ್ಲಿ ಗಾಲ್ಫ್ ಕೋರ್ಸನ್ನು ಅಭಿವೃದ್ಧಿಪಡಿಸುವುದಕ್ಕಾಗಿ 167 ಎಕರೆಗಳು ಹಾಗೂ 35 ಗುಂಟೆಗಳಷ್ಟು ಭೂಮಿಯನ್ನು ವರ್ಗಾಯಿಸಿತು. ಅದನ್ನು ಮೆ. ಬೆಳಗಾವಿ ಗಾಲ್ಫ್ ಅಸೋಸಿಯೇಷನ್ನಿಗೆ 19–03–2001ರಿಂದ 30 ವರ್ಷಗಳ ಅವಧಿಗೆ ಬೆಂಗಳೂರಿನ ಕರ್ನಾಟಕ ಗಾಲ್ಫ್ ಅಸೋಸಿಯೇಷನ್ನಿಗೆ ವಿಧಿಸಿದ್ದಂತೆಯೇ ಷರತ್ತುಗಳು ಹಾಗೂ ನಿಬಂಧನೆಗಳ ಆಧಾರದ ಮೇರೆಗೆ ಅದನ್ನು ಲೆಕ್ಕಪತ್ರಗಳಲ್ಲಿ ಅನುವು ಮಾಡಿರುವುದಿಲ್ಲ. ನಿಗಮವು 167 ಎಕರೆಗಳು ಹಾಗೂ 35 ಗುಂಟೆಗಳಷ್ಟು ಭೂಮಿಯನ್ನು ರೂ.168/–ರಷ್ಟು ಅತ್ಯಲ್ಪ ಮೌಲ್ಯದಲ್ಲಿ ಸ್ಥಿರಾಸ್ತಿಗಳ ಅಡಿಯಲ್ಲಿ ತೋರಿಸಿರುವುದು ಹಾಗೂ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಮಾನದಂಡ 12ರ ಪ್ರಕಾರ ಅದರ ಅನುಗುಣವಾದ ಜಮೆಯನ್ನು ಬಂಡವಾಳ ಅನುದಾನಗಳಿಗೆ ಕೊಡಲಾಗಿರುವುದು. ವರ್ಷ ಒಂದಕ್ಕೆ ಎಕರೆ ಒಂದಕ್ಕೆ ರೂ.1ರ ಪರವಾನಿಗೆ ಶುಲ್ಕದೊಂದಿಗೆ ಗುತ್ತಿಗೆಗೆ ನೀಡಲಾಗಿರುವುದು. ಮುಂದುವರೆದು, ಗುತ್ತಿಗೆ ಒಡಂಬಡಿಕೆಯ ಕಾರ್ಯಗತಗೊಳಿಸುವಿಕೆಯ ಬಾಕಿಯಿರುವಂತೆ 20 ಎಕರೆಗಳಷ್ಟು ಭೂಮಿಯನ್ನು ಹಿಂಪಡೆದುಕೊಳ್ಳಲಾಯಿತು ಹಾಗೂ ಅದನ್ನು ಮೆ. ಜಂಗಲ್ ಲಾಡ್ಜಸ್ ಅಂಡ್ ರೆಸಾರ್ಟ್ಸ್, ಇವರಿಗೆ ನೀಡಲಾಗಿರುವುದು. ಗುತ್ತಿಗೆ ಒಡಂಬಡಿಕೆಯನ್ನು ಮಾಡಿಕೊಳ್ಳುವುದು ಬಾಕಿಯಿರುವಂತೆ, ಮೆ. ಬೆಳಗಾವಿ ಗಾಲ್ಫ್ ಅಸೋಸಿಯೇಷನ್ನಿನಿಂದಾಗಲೀ ಅಥವಾ ಮೆ. ಜಂಗಲ್ ಲಾಡ್ಜಸ್ ಅಂಡ್ ರೆಸಾರ್ಟ್ಸ್, ಇವರಿಂದಾಗಲೀ ಬರಬೇಕಾಗಿರುವ ಬಾಡಿಗೆ ವರಮಾನದ ಲೆಕ್ಕವನ್ನಿಟ್ಟಿರುವುದಿಲ್ಲ.

33. ಕಾರ್ಯಾಗಾರದಲ್ಲಿರುವ ಲೂಬ್ರಿಕೆಂಟುಗಳು, ಬಿಡಿಭಾಗಗಳು ಮತ್ತು ಘಟಕಗಳಲ್ಲಿರುವ ಸರಕುಸಾಮಗ್ರಿಗಳನ್ನು ವರ್ಷದ ಅಂತ್ಯದಲ್ಲಿ ಮೂಲ ಬೆಲೆಯಲ್ಲಿ ಮೌಲ್ಯಮಾಪನ ಮಾಡಲಾಗಿರುವುದು. ಮಾರಾಟ ಮಾಡಿದಲ್ಲಿ ಪಡೆಯಬಹುದಾದ ಮೌಲ್ಯವನ್ನು ಖಚಿತಪಡಿಸಿಕೊಳ್ಳುವ ಸಲುವಾಗಿ ಮಾರುಕಟ್ಟೆ ಮೌಲ್ಯವನ್ನು ಪರಿಗಣಿಸಿರುವುದಿಲ್ಲ.

34. ಚಿಲ್ಲರೆ ಸಾಲಗಾರರು, ಸಾಲಗಳು ಮತ್ತು ಮುಂಗಡಗಳು, ಭದ್ರತಾ ಠೇವಣಿಗಳು, ಮುನ್ನೆಚ್ಚರಿಗೆ ಹಣ ಠೇವಣಿಗಳು, ಚಿಲ್ಲರೆ ಸಾಲದಾತರು ಹಾಗೂ ಇತರೆ ಜವಾಬ್ದಾರಿಗಳನ್ನು ಖಚಿತಪಡಿಸಿಕೊಂಡಿರುವುದಿಲ್ಲ ಮತ್ತು ಸಮನ್ವಯಗೊಳಿಸಿರುವುದಿಲ್ಲ.

35. ಗುತ್ತಿಗೆಗಳು

ಹಣಕಾಸು ಸಂಬಂಧಿತ ಗುತ್ತಿಗೆ

ಕಂಪನಿಯು ,ಗುತ್ತಿಗೆಗಳನ್ನು ಲೆಕ್ಕವನ್ನಿಡುವಿಕೆ'ಗೆ ಸಂಬಂಧಿತ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಮಾನದಂಡ–19ರ ಪ್ರಕಾರ ಬಹಿರಂಗಪಡಿಸುವ ಅಗತ್ಯತೆಯನ್ನು ಹೊಂದಿರುವ ಯಾವುದೇ ಬಾಬುಗಳನ್ನೂ ಹೊಂದಿರುವುದಿಲ್ಲ.

ಕಾರ್ಯಾಚರಣೆಯ ಗುತ್ತಿಗೆ – ಕಂಪನಿಯು ಮಾಡಿಕೊಂಡಿರುವಂತಹ ಗಮನಾರ್ಹವಾದ ಗುತ್ತಿಗೆ ವ್ಯವಸ್ಥೆಗಳು ಈ ಕೆಳಗಿನವುಗಳನ್ನು ಒಳಗೊಂಡಿರುತ್ತವೆ :

- ಕಚೇರಿ ಕಟ್ಟಡ/ಸ್ಥಳಗಳಿಗಾಗಿ ಕಾರ್ಯಾಚರಣೆ ಗುತ್ತಿಗೆ ಆಧಾರದ ಮೇರೆಗೆ ತೆಗೆದುಕೊಳ್ಳಲಾಗಿರುವ ಕಟ್ಟಡಗಳಿಗೆ ಸಂಬಂಧಿಸಿದಂತೆ ಅಂತಹ ಒಡಂಬಡಿಕೆಯನ್ನು ಎರಡು ತಂಡಗಳ ಪೈಕಿ ಯಾರಾದರೊಬ್ಬರು ರದ್ದುಪಡಿಸಿಕೊಳ್ಳಬಹುದು.

- ಷೇರು ಲಾಭಾಂಶಗಳಿಗೆ ಸಂಬಂಧಿಸಿರುವುದು, ಇವೇ ಮುಂತಾದ ಗುತ್ತಿಗೆ ವ್ಯವಸ್ಥೆಗಳು ವಿಧಿಸಿರುವ ಯಾವುದೇ ನಿರ್ಬಂಧನೆಗಳಿರುವುದಿಲ್ಲ,

- ಕಾರ್ಯಾಚರಣೆ ಗುತ್ತಿಗೆ ಪಾವತಿಗಳನ್ನು ಪ್ರಸಕ್ತ ಸಾಲಿನ ಲಾಭ ಮತ್ತು ನಷ್ಟ ತ:ಖ್ತೆಯಲ್ಲಿ ಬಾಡಿಗೆ ವೆಚ್ಚಗಳು ಎಂಬುದಾಗಿ ಪರಿಗಣಿಸಲಾಗುವುದು:

ವಿವರಗಳು	2019–20	2018–19
ಕೇಂದ್ರ ಕಚೇರಿಯ ಬಾಡಿಗೆ ವೆಚ್ಚಗಳು	1,91,45,107	1,74,41,124/–

- ಆಸ್ತಿ–ಜವಾಬ್ದಾರಿ ತ:ಖ್ತೆಯ ದಿನಾಂಕದಲ್ಲಿದ್ದಂತೆ ರದ್ದುಗೊಳಿಸಲು ಸಾಧ್ಯವಿಲ್ಲದ ಗುತ್ತಿಗೆಗಳಿಗೆ ಸಂಬಂಧಿಸಿದಂತೆ ಪಾವತಿಸಬೇಕಿರುವ ಭವಿಷ್ಯದ ಕನಿಷ್ಠ ಗುತ್ತಿಗೆ ಬಾಡಿಗೆಗಳು – ––ಯಾವುದೂ ಇರುವುದಿಲ್ಲ.
- ನಿಗಮವು ಕೆಲವು ಹೋಟೆಲು ಆಸ್ತಿಗಳನ್ನು ಕಾರ್ಯಾಚರಣೆ ಗುತ್ತಿಗೆ ಆಧಾರದ ಮೇರೆಗೆ ಬಾಡಿಗೆಗೆ ನೀಡಿರುವುದು. ಸ್ವೀಕರಿಸಲಾಗಿರುವ ಬಾಡಿಗೆ ಮೊತ್ತಗಳನ್ನು ಆರ್‌ಒಎಂಟಿ ವರಮಾನದ ಅಡಿಯಲ್ಲಿ ಲಾಭ ಮತ್ತು ನಷ್ಟ ತ:ಖ್ತೆಯಲ್ಲಿ ಪರಿಗಣಿಸಲಾಗಿರುವುದು.

ವಿವರಗಳು	2019–20	2018–19
ಆರ್‌ಒಎಂಟಿ ಅಡಿಯಲ್ಲಿ ಪರಿಗಣಿಸಲಾಗಿರುವ ಬಾಡಿಗೆ ವರಮಾನ	ರೂ.16,99,926/–	18,10,859/–

36 ನಿಗಮವು ತನ್ನ ಉದ್ಯೋಗಿಗಳಿಗಾಗಿ ಗ್ರಾಚುಯಿಟಿ ಯೋಜನೆಯ ಕಡೆಗೆ ಜೀವವಿಮಾ ನಿಗಮದಿಂದ ಒಂದು ಮಾಸ್ಟರ್ ಪಾಲಿಸಿಯನ್ನು ತೆಗೆದುಕೊಂಡಿರುವುದು ಹಾಗೂ ಪ್ರೀಮಿಯಂಗಳನ್ನು ತಾತ್ಪೂರ್ತಿಕ ಆಧಾರದ ಮೇರೆಗೆ ಪಾವತಿಸುತ್ತಿರುವುದು. ಜೀವವಿಮಾ ನಿಗಮವು ಒದಗಿಸಿರುವ ಮೌಲ್ಯಮಾಪನದ ಅನುಸಾರ ಗ್ರಾಚುಯಿಟಿಗಾಗಿನ ಜವಾಬ್ದಾರಿಯನ್ನು ಲೆಕ್ಕಪತ್ರಗಳ ಪುಸ್ತಕಗಳಲ್ಲಿ ಅನುವು ಮಾಡಲಾಗಿರುವುದು. ಜೀವವಿಮಾ ನಿಗಮವು ಅನುಸರಿಸುತ್ತಿರುವಂತಹ ಮೌಲ್ಯಮಾಪನ ಪದ್ಧತಿ ಎಂದರೆ ,ಪ್ರಕ್ಷೇಪಿಸಲ್ಪಟ್ಟಿರುವಂತಹ ಯೂನಿಟ್ಟು ಜಮೆ ಪದ್ಧತಿ'. ಜೀವವಿಮಾ ನಿಗಮವು ಉಪಯೋಗಿಸುತ್ತಿರುವ ಊಹೆಗಳು/ಕಲ್ಪನೆಗಳನ್ನು ಈ ಕೆಳಗೆ ನೀಡಲಾಗಿರುವುದು:

ವಿವರಗಳು	2019–20	2018–19
ಮರಣ ದರ	ಜೀವ ವಿಮಾ ನಿಗಮ (2006–08) ಅತ್ಯಂತ ಹೆಚ್ಚಿನ ಪ್ರಮಾಣದಲ್ಲಿ	ಜೀವ ವಿಮಾ ನಿಗಮ (2006–08) ಅತ್ಯಂತ ಹೆಚ್ಚಿನ ಪ್ರಮಾಣದಲ್ಲಿ
ಹಿಂಪಡೆಯಬಹುದಾದ ದರ	ವಯಸ್ಸಿನ ಆಧಾರದ ಮೇರೆಗೆ ಶೇಕಡಾ 1ರಿಂದ ಶೇಕಡಾ 3	ವಯಸ್ಸಿನ ಆಧಾರದ ಮೇರೆಗೆ ಶೇಕಡಾ 1ರಿಂದ ಶೇಕಡಾ 3
ರಿಯಾಯಿತಿ ದರ	ವರ್ಷ ಒಂದಕ್ಕೆ ಶೇಕಡಾ 7.5	ವರ್ಷ ಒಂದಕ್ಕೆ ಶೇಕಡಾ 7.5
ವೇತನ ಹೆಚ್ಚಳ ದರ	ಶೇಕಡಾ 7	ಶೇಕಡಾ 7

37. ನಿಗಮವು, ಕಂಪನಿಯ ಉದ್ಯೋಗಿಗಳ ನಿವೃತ್ತಿ/ಪ್ರತ್ಯೇಕತೆ, ಇಂತಹ ಸಂದರ್ಭಗಳಲ್ಲಿ ರಜೆ ನಗದೀಕರಣಕ್ಕಾಗಿ ಲೆಕ್ಕಪುಸ್ತಕಗಳಲ್ಲಿ ಅನುವು ಮಾಡಿರುವುದಿಲ್ಲ ಆದರೆ, ರಜೆ ನಗದೀಕರಣ ಅನುಕೂಲತೆಯನ್ನು ಕಾಲಾನುಕಾಲಕ್ಕೆ ನೀಡಲಾಗುವ ಸರ್ಕಾರಿ ಆದೇಶದ ಅನುಸಾರ ಕಾಲಾನುಕಾಲಕ್ಕೆ ಪಾವತಿಸಲಾಗುತ್ತಿದೆ.

38 (ಎ) ಲಾಭ ಮತ್ತು ನಷ್ಟ ತ:ಖ್ತೆಯು ಈ ಕೆಳಗಿನವುಗಳನ್ನು ಒಳಗೊಂಡಿರುತ್ತದೆ :

ವಿವರಗಳು	2019–20	2018–19
ಪೂರ್ವಾವಧಿ ವೆಚ್ಚಗಳು	ರೂ.38,71,303/–	ರೂ.27,44,000/–
ಪೂರ್ವಾವಧಿ ವರಮಾನಗಳು	ರೂ.8,72,087	––ಯಾವುದೂ ಇರುವುದಿಲ್ಲ.

38 (ಬಿ) ಅಧ್ಯಕ್ಷರು ಮತ್ತು ವ್ಯವಸ್ಥಾಪಕ ನಿರ್ದೇಶಕರವರು ಭರಿಸಿರುವ ವೆಚ್ಚವು ಈ ಕೆಳಗಿನಂತಿರುತ್ತದೆ :

ವಿವರಗಳು	**2019–20**	**2018–19**
ಎ ಸ್ಥಳೀಯ ಪ್ರವಾಸ ಮತ್ತು ಸಾರಿಗೆ ವೆಚ್ಚ		
ಅಧ್ಯಕ್ಷರು	–	3,489
ವ್ಯವಸ್ಥಾಪಕ ನಿರ್ದೇಶಕರು	6,70,478/–	1,69,909
ಬಿ) ವಿದೇಶ ಪ್ರವಾಸ		
ಅಧ್ಯಕ್ಷರು	ಯಾವುದೂ ಇರುವುದಿಲ್ಲ	ಯಾವುದೂ ಇರುವುದಿಲ್ಲ
ವ್ಯವಸ್ಥಾಪಕ ನಿರ್ದೇಶಕರು	25,19,638/–	4,66,958
ಸಿ) ಅತಿಥಿ ಸತ್ಕಾರ		
ಅಧ್ಯಕ್ಷರು	ಯಾವುದೂ ಇರುವುದಿಲ್ಲ	ಯಾವುದೂ ಇರುವುದಿಲ್ಲ
ವ್ಯವಸ್ಥಾಪಕ ನಿರ್ದೇಶಕರು	4,50,395/–	2,94,445/–

39. ಲೆಕ್ಕಪರಿಶೋಧಕರುಗಳಿಗೆ ಪಾವತಿ

ವಿವರಗಳು	2019–20	2018–19
ಶಾಸನಬದ್ಧ ಲೆಕ್ಕಪರಿಶೋಧನೆ	2,00,000/–	2,00,000
ತೆರಿಗೆ ಲೆಕ್ಕಪರಿಶೋಧನೆ	90,000/–	90,000
ಮೇಲಿನವುಗಳ ಮೇಲೆ ಸರಕುಗಳು ಮತ್ತು ಸೇವೆಗಳ ಮೇಲಿನ ತೆರಿಗೆ	52,200/–	52,200
ಸ್ವಂತ ಜೇಬಿನಿಂದ (ಔಟ್ ಆಫ್ ಪಾಕೇಟ್) ವೆಚ್ಚಗಳು	–	–
ಒಟ್ಟು	**3,42,200**	**3,42,200**

40. ರೂ.1,00,00,000/–ಮೊತ್ತದಷ್ಟು ಅವಧಿ ಮೀರಿರುವ ಅಭಿವೃದ್ಧಿ ಸಾಲದ ಮೇಲಿನ ವರ್ಷ ಒಂದಕ್ಕೆ ಶೇಕಡಾ 12.50 ಬಡ್ಡಿಯು ಪ್ರಸಕ್ತ ಸಾಲಿಗೆ ರೂ.12,50,000/– ಆಗಿದ್ದು, ಈ ಸಾಲದ ಮೊತ್ತವನ್ನು ಅನುದಾನ/ಈಕ್ವಿಟಿಯನ್ನಾಗಿ ಪರಿವರ್ತಿಸುವಂತೆ ನಿಗಮವು ಮಾಡಿರುವ ಮನವಿಗೆ ಪ್ರತಿಯಾಗಿ ಕರ್ನಾಟಕ ಸರ್ಕಾರದ ಪರಿಗಣನೆಯು ಬಾಕಿಯಿರುವಂತೆ ಅನುವು ಮಾಡಲಾಗಿರುವುದು.

41. ವಿದೇಶಿ ಕರೆನ್ಸಿಯಲ್ಲಿ ವ್ಯವಹಾರಗಳು

ಪ್ರಸಕ್ತ ಸಾಲಿನಲ್ಲಿ ವಿದೇಶಿ ಕರೆನ್ಸಿಯಲ್ಲಿ ಯಾವುದೇ ವ್ಯವಹಾರಗಳನ್ನೂ ಮಾಡಲಾಗಿರುವುದಿಲ್ಲ. (ಹಿಂದಿನ ಸಾಲಿನಲ್ಲಿ – ಯಾವುದೂ ಇರುವುದಿಲ್ಲ––).

42. ಷೇರುವೊಂದರ ಗಳಿಕೆ :–.

ವಿವರಗಳು	**31–03–2020ರಲ್ಲಿದ್ದಂತೆ (ರೂಪಾಯಿಗಳು ಲಕ್ಷದಲ್ಲಿ)**	**31–03–2019ರಲ್ಲಿದ್ದಂತೆ (ರೂಪಾಯಿಗಳು ಲಕ್ಷದಲ್ಲಿ)**
ಪ್ರಸಕ್ತ ವರ್ಷಕ್ಕೆ ನಿವ್ವಳ ಲಾಭ/(ನಷ್ಟ)	452.67	147.44
ಈಕ್ವಿಟಿ ಷೇರುದಾರರುಗಳಿಗೆ ಲಭ್ಯವಿರುವ ಮೊತ್ತ	452.67	147.44
ಷೇರುಗಳ ಒತ್ತು ನೀಡಲ್ಪಟ್ಟ/ತೂಗಲ್ಪಟ್ಟ ಸರಾಸರಿ ಸಂಖ್ಯೆ	1,28,272	1,28,272
ಷೇರು ಒಂದಕ್ಕೆ ಗಳಿಕೆ ಮೂಲ ಹಾಗೂ ದುರ್ಬಲಗೊಳಿಸಲ್ಪಟ್ಟ (ರೂ)	352.90	114.95
ಈಕ್ವಿಟಿ ಷೇರು ಒಂದರ ಮುಖ ಬೆಲೆ (ರೂ)	500	500

43. ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಮಾನದಂಡ 18ರ ಅನುಸರಣೆಯಂತೆ ಸಂಬಂಧಿತ ತಂಡಗಳಿಗೆ ಸಂಬಂಧಿಸಿದಂತೆ ಬಹಿರಂಗಪಡಿಸುವಿಕೆಗಳು :

ಎ) ಪ್ರಮುಖ ವ್ಯವಸ್ಥಾಪನಾ ಅಧಿಕಾರಿಗಳು

- ಶ್ರೀಮತಿ ಶ್ರುತಿ ಕೃಷ್ಣ – ಅಧ್ಯಕ್ಷರು – 20.01.2020ರಿಂದ ಈ ದಿನಾಂಕದವರೆಗೆ
- ಶ್ರೀ ಟಿ.ಕೆ. ಅನಿಲ್ ಕುಮಾರ್ – ಅಧ್ಯಕ್ಷರು – 29.07.2019ರಿಂದ 20.01.2020
- ಶ್ರೀ ವಿಜಯ್ ಶರ್ಮ – ವ್ಯವಸ್ಥಾಪಕ ನಿರ್ದೇಶಕರು – 18.11.2020ರಿಂದ ಈ ದಿನಾಂಕದವರೆಗೆ
- ಶ್ರೀ ಕುಮಾರ್ ಪುಷ್ಕರ್ – ವ್ಯವಸ್ಥಾಪಕ ನಿರ್ದೇಶಕರು – 16.07.2016ರಿಂದ 18.11.2020

ಬಿ) ನಿಗಮವು ಗಮನಾರ್ಹ ಪ್ರಭಾವವನ್ನು ಹೊಂದಿರುವ ಉದ್ದಿಮೆಗಳು
ಮೆ. ಜಂಗಲ್ ಲಾಡ್ಜಸ್ ಅಂಡ್ ರೆಸಾರ್ಟ್ಸ್ ಲಿಮಿಟೆಡ್

ಸಂಬಂಧಿತ ತಂಡಗಳೊಂದಿಗೆ ವ್ಯಾಪಾರವ್ಯವಹಾರಗಳ ಒಂದು ಸಾಮಾನ್ಯ ಸಂದರ್ಭದಲ್ಲಿ ನಡೆಸಿಕೊಂಡು ಹೋಗಲಾದಂತಹ ವ್ಯಾಪಾರವ್ಯವಹಾರಗಳ ವಿವರಗಳು ಹಾಗೂ ಬಾಕಿಯಿರುವ ಶಿಲ್ಕುಗಳು :

ಕ್ರಮ ಸಂಖ್ಯೆ	ವ್ಯವಹಾರ	ನಿಗಮವು ಗಮನಾರ್ಹ ಪ್ರಭಾವವನ್ನು ಹೊಂದಿರುವಂತಹ ಉದ್ದಿಮೆಗಳು		ಪ್ರಮುಖ ವ್ಯವಸ್ಥಾಪನಾ ಅಧಿಕಾರಿಗಳು	
	1.	22019–20	2018–19	2019–20	2018–19
1	ಸಂಬಳ/ಸಂಭಾವನೆ :				
ಎ	ರಾಜ ವೆಂಕಟಪ್ಪ ನಾಯಕ್			9,31,613/–	–
	ಶ್ರುತಿ ಕೃಷ್ಣ			1,53,064/–	
	ಕುಮಾರ್ ಪುಷ್ಕರ್			33,76,059/–	29,09,544/–
ಬಿ	ಬಿ) ನಿರ್ದೇಶಕರುಗಳ ಮಂಡಳಿಯ ಸಭೆಗೆ ಹಾಜರಾದುದಕ್ಕಾಗಿ ಶುಲ್ಕ			45,000/–	48,000/–
2	ಜಂಗಲ್ ಲಾಡ್ಜಸ್ ಅಂಡ್ ರೆಸಾರ್ಟ್ಸ್ :				
ಎ	ಷೇರು ಲಾಭಾಂಶ	8,41,200/–	8,41,200/–		
ಬಿ	ಬಾಡಿಗೆ ವರಮಾನ	11,80,000/–	10,00,000/–		
ಸಿ	ಸಿ) ಬಾಕಿಯಿರುವ ಶಿಲ್ಕುಗಳು	52,63,042/–	52,63,042/–		
I	ವ್ಯಾಪಾರವ್ಯವಹಾರಗಳಿಗೆ ಸಂಬಂಧಿಸಿದಂತೆ ಸ್ವೀಕರಿಸಬೇಕಾದವುಗಳು	10,57,042/–	10,57,042/–		
II	ಹೂಡಿಕೆಗಳು	42,06,000/–	42,06,000		

44. ಪ್ರಸಕ್ತ ಸಾಲಿನ ಅಂಕಿಸಂಖ್ಯೆಗಳ ಜೊತೆಯಲ್ಲಿ ಹೋಲಿಕೆ ಮಾಡಬಹುದಾದಂತಹ ರೀತಿಯಲ್ಲಿ ಅಗತ್ಯವಿರುವಂತಹ ಕಡೆಗಳಲ್ಲಿ ಹಿಂದಿನ ಸಾಲುಗಳ ಅಂಕಿಸಂಖ್ಯೆಗಳನ್ನು ಪುನರ್–ಗುಂಪು ಮಾಡಲಾಗಿರುವುದು ಹಾಗೂ ಪುನರ್–ವರ್ಗೀಕರಿಸಲಾಗಿರುವುದು.

45. ಕೋವಿಡ್ – 19ರ ಪ್ರಭಾವ

ಏಪ್ರಿಲ್ 2020ರಿಂದ ಅಕ್ಟೋಬರ್ 2020ರ ಅವಧಿಯಲ್ಲಿ, ಹಿಂದಿನ ಸಾಲಿನ ಅದೇ ಅವಧಿಗೆ ಹೋಲಿಸಿದಂತೆ ವರಮಾನವು ಶೇಕಡಾ 84ರಷ್ಟು ಇಳಿಮುಖಗೊಂಡಿರುವುದು. ಮುಂದುವರೆದು, ಈ ಅವಧಿಯ ನಂತರ ನಿಗಮದ ವ್ಯಾಪಾರವ್ಯವಹಾರವು ನಿಧಾನವಾಗಿ ಉತ್ತಮಗೊಳ್ಳುತ್ತಿರುವುದು. ನಿಗಮದ ಯಾವುದೇ ಸ್ಥಿರಾಸ್ತಿಗಳು ಕ್ರಮೇಣ ದುರ್ಬಲಗೊಂಡಿರುವುದಿಲ್ಲ (ಇಂಪೈರ್‌ಮೆಂಟ್) ಹಾಗೂ ನಿಗಮದ ಸ್ವೀಕರಿಸಬೇಕಾಗಿರುವವುಗಳು ಮತ್ತು ಇತರೆ ಆಸ್ತಿಗಳ ಮೇಲೆ ಯಾವುದೇ ಗಮನಾರ್ಹ ಪ್ರಭಾವವು ಉಂಟಾಗಿರುವುದಿಲ್ಲ. ಆದ್ದರಿಂದ ಈ ಪಾಂಡಮಿಕ್ ಘಟನೆಯ ಕಾರಣ ನಿಗಮದ ವ್ಯಾಪಾರವ್ಯವಹಾರಗಳು ಮುಂದುವರೆದುಕೊಂಡು ಹೋಗುತ್ತಿರುವ ಸಂಸ್ಥೆಯ ಸ್ಥಾನಮಾನದ ಮೇಲೆ ಯಾವುದೇ ಪ್ರಭಾವವು ಉಂಟಾಗಿರುವುದಿಲ್ಲ.

45. ಪ್ರಸಕ್ತ ಸಾಲಿನ ಅಂಕಿಸಂಖ್ಯೆಗಳ ಜೊತೆಯಲ್ಲಿ ಹೋಲಿಕೆ ಮಾಡಬಹುದಾದಂತಹ ರೀತಿಯಲ್ಲಿ ಅಗತ್ಯವಿರುವಂತಹ ಕಡೆಗಳಲ್ಲಿ ಹಿಂದಿನ ಸಾಲುಗಳ ಅಂಕಿಸಂಖ್ಯೆಗಳನ್ನು ಪುನರ್–ಗುಂಪು ಮಾಡಲಾಗಿರುವುದು ಹಾಗೂ ಪುನರ್–ವರ್ಗೀಕರಿಸಲಾಗಿರುವುದು.

ಟಿಪ್ಪಣಿಗಳು ,1' ರಿಂದ ,45' ರವರೆಗೆ ಸಹಿ ಮಾಡಲಾಗಿದೆ.

ಆರ್.ಸಿಂಘ್ವಿ ಅಂಡ್ ಅಸೋಸಿಯೇಟ್ಸ್‌ಗಾಗಿ
ಚಾರ್ಟರ್ಡ್ ಅಕೌಂಟೆಂಟ್‌ಗಳು

ಮಂಡಳಿಯ ನಿರ್ದೇಶಕರುಗಳಿಗಾಗಿ ಹಾಗೂ ಅವರುಗಳ ಪರವಾಗಿ
ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ ನಿಯಮಿತ

ಸಿ.ಎ. ಪ್ರದೀಪ್ ಹೆಗ್ಡೆ			
ಪಾಲುದಾರರು	ಶ್ರೀಮತಿ ಶ್ರುತಿ ಕೃಷ್ಣ	ವಿಜಯ ಶರ್ಮ, ಭಾಅಸೇ	ಕುಮಾರ್ ಪುಷ್ಕರ್, ಭಾಅಸೇ
ಸದಸ್ಯತ್ವ ಸಂಖ್ಯೆ 231733	ಅಧ್ಯಕ್ಷರು	ವ್ಯವಸ್ಥಾಪಕ ನಿರ್ದೇಶಕರು	ನಿರ್ದೇಶಕರು
ರಿಜಿಸ್ಟ್ರೇಶನ್ ಸಂ: 03870S	ಡಿಐಎನ್ ಸಂಖ್ಯೆ 08719381	ಡಿಐಎನ್ ಸಂಖ್ಯೆ 07096296	ಡಿಐಎನ್ ಸಂಖ್ಯೆ: 07606517

ದಿನಾಂಕ: 23.11.2020
ಸ್ಥಳ : ಬೆಂಗಳೂರು

ಕರ್ನಾಟಕ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು, ಇದರ 31 ಮಾರ್ಚ್ 2020ಕ್ಕೆ ಅಂತ್ಯಗೊಂಡ ಸಾಲಿನ ಲೆಕ್ಕಪತ್ರಗಳ ಮೇಲೆ ಪರಿಚ್ಛೇದ 129 (4)ರ ಜೊತೆಯಲ್ಲಿ ಓದಲ್ಪಡುವ ಕಂಪನಿಗಳ ಅಧಿನಿಯಮ 2013ರ ಪರಿಚ್ಛೇದ 143 (6) (ಬಿ) ಅಡಿಯಲ್ಲಿ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ಟೀಕೆಟಿಪ್ಪಣಿಗಳು.

ಕಂಪನಿಗಳ ಅಧಿನಿಯಮ, 2013ರ ಅಡಿಯಲ್ಲಿ ನಿರ್ದಿಷ್ಟಪಡಿಸಲಾಗಿರುವ ಹಣಕಾಸಿನ ವರದಿಯ ಚೌಕಟ್ಟಿನ ಪ್ರಕಾರ **31 ಮಾರ್ಚ್ 2020ಕ್ಕೆ** ಅಂತ್ಯಗೊಂಡಂತಹ ಸಾಲಿಗೆ ಕರ್ನಾಟಕ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು, ಇದರ ಹಣಕಾಸಿನ ತ:ಖ್ತೆಗಳನ್ನು ತಯಾರಿಸುವುದು ಕಂಪನಿಯ ಆಡಳಿತ ಮಂಡಳಿಯ ಜವಾಬ್ದಾರಿಯಾಗಿರುತ್ತದೆ. ಅಧಿನಿಯಮದ ಪರಿಚ್ಛೇದ 129 (4)ರ ಜೊತೆಯಲ್ಲಿ ಓದಲ್ಪಡುವಂತಹ ಅಧಿನಿಯಮದ ಪರಿಚ್ಛೇದ 139 (5)ರ ಅಡಿಯಲ್ಲಿ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು ನೇಮಕ ಮಾಡುವಂತಹ ಶಾಸನಬದ್ಧ ಲೆಕ್ಕಪರಿಶೋಧಕರು, ಧಿನಿಯಮದ ಪರಿಚ್ಛೇದ 129 (4)ರ ಜೊತೆಯಲ್ಲಿ ಓದಲ್ಪಡುವಂತಹ ಅಧಿನಿಯಮದ ಪರಿಚ್ಛೇದ 143 (10)ರ ಅಡಿಯಲ್ಲಿ ಲೆಕ್ಕಪರಿಶೋಧನೆಗಾಗಿ ನಿರ್ದಿಷ್ಟಪಡಿಸಲಾಗಿರುವಂತಹ ಮಾನದಂಡಗಳ ಅನುಸಾರ ನಡೆಸಲಾದಂತಹ ಸ್ವತಂತ್ರ ಲೆಕ್ಕಪರಿಶೋಧನೆಯ ಆಧಾರದ ಮೇರೆಗೆ ಹಣಕಾಸು ತ:ಖ್ತೆಗಳ ಮೇಲೆ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುವಲ್ಲಿ ಜವಾಬ್ದಾರರಾಗಿರುತ್ತಾರೆ. ಇದನ್ನು ಮಾಡಲಾಗಿದೆ ಎಂಬುದಾಗಿ ಅವರು ತಮ್ಮ **30 ಡಿಸೆಂಬರ್ 2020** ದಿನಾಂಕದ ಪರಿಷ್ಕೃತ ಲೆಕ್ಕಪರಿಶೋಧನಾ ವರದಿಯಲ್ಲಿ ತಿಳಿಸಿರುತ್ತಾರೆ, ಈ ಪರಿಷ್ಕೃತ ಲೆಕ್ಕಪರಿಶೋಧನಾ ವರದಿಯು ಈ ಹಿಂದಿನ 18 ಡಿಸೆಂಬರ್ 2020 ದಿನಾಂಕದ ಲೆಕ್ಕಪರಿಶೋಧನಾ ವರದಿಯನ್ನು ರದ್ದುಗೊಳಿಸುತ್ತದೆ.

ನಾವು, ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ಪರವಾಗಿ, ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು, ಇದರ **31 ಮಾರ್ಚ್ 2020ಕ್ಕೆ** ಅಂತ್ಯಗೊಂಡಂತಹ ಹಣಕಾಸು ಸಾಲಿಗೆ ಅಧಿನಿಯಮದ ಪರಿಚ್ಛೇದ 129 (4)ರ ಜೊತೆಯಲ್ಲಿ ಓದಲ್ಪಡುವಂತಹ ಅಧಿನಿಯಮದ ಪರಿಚ್ಛೇದ 143 (6) (ಎ) ಅಡಿಯಲ್ಲಿ ಕ್ರೋಡೀಕೃತ ಹಣಕಾಸು ತ:ಖ್ತೆಗಳ ಒಂದು ಪೂರಕ ಲೆಕ್ಕಪರಿಶೋಧನೆಯನ್ನು ನಡೆಸಿದೆವು. ನಾವು ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು ಹಾಗೂ ಜಂಗಲ್ ಲಾಡ್ಜಸ್ ಅಂಡ್ ರೆಸಾರ್ಟ್ಸ್ ಲಿಮಿಟೆಡ್, ಬೆಂಗಳೂರು (ಜಂಟಿಯಾಗಿ ನಿಯಂತ್ರಿಸಲ್ಪಡುತ್ತಿರುವ ಸಂಸ್ಥೆ), ಇವುಗಳ **31 ಮಾರ್ಚ್ 2020ಕ್ಕೆ** ಅಂತ್ಯಗೊಂಡ ಹಣಕಾಸು ಸಾಲಿಗೆ ಒಂದು ಪೂರಕ ಲೆಕ್ಕಪರಿಶೋಧನೆಯನ್ನು ನೆಡೆಸಿದೆವು. ಪೂರಕ ಲೆಕ್ಕಪರಿಶೋಧನೆಯನ್ನು ಶಾಸನಬದ್ಧ ಲೆಕ್ಕಪರಿಶೋಧಕರುಗಳ ಲೆಕ್ಕಪರಿಶೋಧನೆಗೆ ಸಂಬಂಧಿತ ಕಾಗದ ಪತ್ರಗಳನ್ನು ಪರಿಶೀಲಿಸದೆಯೇ ಸ್ವತಂತ್ರವಾಗಿ ನಡೆಸಲಾಯಿತು ಹಾಗೂ ಪ್ರಾಥಮಿಕವಾಗಿ ಶಾಸನಬದ್ಧ ಲೆಕ್ಕಪರಿಶೋಧಕರುಗಳು ಹಾಗೂ ಕಂಪನಿಯ ಸಿಬ್ಬಂದಿ/ಅಧಿಕಾರಿಗಳೊಂದಿಗೆ ಸಮಾಲೋಚನೆ ಹಾಗೂ ಕೆಲವು ಲೆಕ್ಕಪತ್ರಗಳಿಗೆ ಸಂಬಂಧಿತ ದಾಖಲೆಗಳ ಆಯ್ಕೆ ಮಾಡಿಕೊಳ್ಳಲಾದ ಪರಿಶೀಲನೆಗೆ ಸೀಮಿತಗೊಳಿಸಿಕೊಳ್ಳಲಾಯಿತು.

ನಮ್ಮ ಪೂರಕ ಲೆಕ್ಕಪರಿಶೋಧನೆಯ ಸಮಯದಲ್ಲಿ ನಾವು ಗಮನಿಸಲಾದ ಅಂಶಗಳನ್ನು ಶಾಸನಬದ್ಧ ಲೆಕ್ಕಪರಿಶೋಧಕರುಗಳು ತಮ್ಮ ವರದಿಯಲ್ಲಿ ಜಾರಿಗೊಳಿಸುವ ಸಲುವಾಗಿ ತಮ್ಮ ಲೆಕ್ಕಪರಿಶೋಧನಾ ವರದಿಯನ್ನು ಪರಿಷ್ಕರಿಸಿದ್ದರಿಂದ, ಅಧಿನಿಯಮದ ಪರಿಚ್ಛೇದ 129 (4)ರ ಜೊತೆಯಲ್ಲಿ ಓದಲ್ಪಡುವಂತಹ ಪರಿಚ್ಛೇದ 143 (6) (ಬಿ) ಅಡಿಯಲ್ಲಿ ಇನ್ನೂ ಹೆಚ್ಚಿನ ಟೀಕೆಟಿಪ್ಪಣಿ ಮಾಡಲು ಅಥವಾ ಶಾಸನಬದ್ಧ ಲೆಕ್ಕಪರಿಶೋಧಕರುಗಳ ವರದಿಗೆ ಪೂರಕವಾಗಿ ಹೆಚ್ಚಿನ ಟೀಕೆಟಿಪ್ಪಣಿ ಮಾಡುವ ಸಲುವಾಗಿ ಯಾವುದೇ ಹೆಚ್ಚುವರಿ ಅಂಶಗಳು ಇರುವುದಿಲ್ಲ.

ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರಿಗಾಗಿ ಮತ್ತು ಅವರ ಪರವಾಗಿ

–ಸಹಿ ಮಾಡಲಾಗಿದೆ–
(ಅನುಪ್ ಫ್ರಾನ್ಸಿಸ್ ಡಂಗ್‌ಡಂಗ್)
ಮಹಾಲೇಖಾಪಾಲರು
(ಆರ್ಥಿಕ ಮತ್ತು ರಾಜಸ್ವ ವಲಯ ಲೆಕ್ಕಪರಿಶೋಧನೆ)
ಕರ್ನಾಟಕ, ಬೆಂಗಳೂರು

ಬೆಂಗಳೂರು
ದಿನಾಂಕ : 31.12. 2020

ಆರ್. ಸಿಂಘ್ವಿ ಅಂಡ್ ಅಸೋಸಿಯೇಟ್ಸ್
ಚಾರ್ಟರ್ಡ್ ಅಕೌಂಟೆಂಟ್ಸ್

ಸ್ವತಂತ್ರ ಲೆಕ್ಕಪರಿಶೋಧಕರುಗಳ ವರದಿ

ಎಲ್ಲಾ ಸದಸ್ಯರುಗಳಿಗೆ.
ಕರ್ನಾಟಕ ರಾಜ್ಯ ಪ್ರವಾಸೋಧ್ಯಮ ಅಭಿವೃದ್ಧಿ ನಿಗಮ ನಿಯಮಿತ
ಸಿಐಎನ್ : ಯು63040ಕೆಎ1971ಎಸ್‌ಜಿಸಿ002003
ಬೆಂಗಳೂರು

ಕ್ರೋಡೀಕೃತ ಹಣಕಾಸು ತ:ಖ್ತೆಗಳ ಮೇಲಿನ ವರದಿ

ನಮ್ಮ ಷರತ್ತುಬದ್ಧ ಅಭಿಪ್ರಾಯ

ಈ ವರದಿಯ ಜೊತೆಯಲ್ಲಿರುವ ಕರ್ನಾಟಕ ರಾಜ್ಯ ಪ್ರವಾಸೋಧ್ಯಮ ಅಭಿವೃದ್ಧಿ ನಿಗಮ ನಿಯಮಿತ (ನಿಯಮಿತ) ಹಾಗೂ ಅದರ ಸಹಭಾಗಿ ಕಂಪನಿ ಜಂಗಲ್ ಲಾಡ್ಜಸ್ ಅಂಡ್ ರೆಸಾರ್ಟ್ ಲಿಮಿಟೆಡ್ (ಹಿಡುವಳಿ ಕಂಪನಿ, ಅದರ ಉಪ–ಕಂಪನಿ ಹಾಗೂ ಅದರ ಸಹಭಾಗಿ ಕಂಪನಿ, ಇವುಗಳನ್ನು ಒಟ್ಟಾರೆಯಾಗಿ ಗುಂಪು ಎಂಬುದಾಗಿ ಉಲ್ಲೇಖಿಸಲಾಗಿರುವಂತಹ), ಇವುಗಳ "31 ಮಾರ್ಚ್ 2020ರಲ್ಲಿದ್ದಂತೆ ಕ್ರೋಡೀಕೃತ ಆಸ್ತಿ–ಜವಾಬ್ದಾರಿ ತ:ಖ್ತೆ, ಅದೇ ದಿನಾಂಕಕ್ಕೆ ಅಂತ್ಯಗೊಂಡಂತಹ ಸಾಲಿಗೆ ಕ್ರೋಡೀಕೃತ ಲಾಭ ಮತ್ತು ನಷ್ಟ ತ:ಖ್ತೆ, ಕ್ರೋಡೀಕೃತ ನಗದು/ಹಣಕಾಸು ಹರಿವಿನ ತ:ಖ್ತೆ ಹಾಗೂ ಗಮನಾರ್ಹ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಕಾರ್ಯನೀತಿಗಳ ಒಂದು ಸಂಕ್ಷಿಪ್ತ ವರದಿ ಹಾಗೂ ಇತರೆ ವಿವರಣಾತ್ಮಕ ಮಾಹಿತಿಗಳನ್ನು ಒಳಗೊಂಡಂತೆ ಪ್ರತ್ಯೇಕ ಹಣಕಾಸು ತ:ಖ್ತೆಗಳನ್ನು ನಾವು ಲೆಕ್ಕಪರಿಶೋಧನೆ ಮಾಡಿರುವೆವು.

ನಮ್ಮ ಅಭಿಪ್ರಾಯದಲ್ಲಿ ಹಾಗೂ ನಮ್ಮ ಅತ್ಯುತ್ತಮ ಅರಿವಿನಂತೆ ಹಾಗೂ ನಮಗೆ ನೀಡಲಾಗಿರುವಂತಹ ವಿವರಣೆಗಳಂತೆ, ನಮ್ಮ ವರದಿಯ ಷರತ್ತುಬದ್ಧ ಅಭಿಪ್ರಾಯಗಳಿಗೆ ಆಧಾರಕ್ಕೆ ಸಂಬಂಧಿತ ಕಂಡಿಕೆಯಲ್ಲಿ ವಿವರಿಸಿರುವಂತಹ ವಿಷಯಗಳ ಸಂಭಾವ್ಯ ಪರಿಣಾಮಗಳನ್ನು ಹೊರತುಪಡಿಸಿದಂತೆ, "ಭಾರತೀಯ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಮಾನದಂಡಗಳ ಅನುಸಾರ ತಯಾರಿಸಲಾಗಿರುವಂತಹ ಪ್ರತ್ಯೇಕ ಹಣಕಾಸು ತ:ಖ್ತೆಗಳು" ಅಧಿನಿಯಮದ ಅಗತ್ಯತೆಯ ರೀತಿಯಲ್ಲಿ ಮಾಹಿತಿಯನ್ನು ನೀಡುತ್ತವೆ ಹಾಗೂ ಭಾರತದಲ್ಲಿ ಸರ್ವೆಸಾಮಾನ್ಯವಾಗಿ ಒಪ್ಪಿಕೊಳ್ಳಲಾಗಿರುವಂತಹ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ತತ್ವಗಳ ಅನುಸಾರ ಹಾಗೂ ಅಧಿನಿಯಮದ ಅಗತ್ಯತೆಯಂತೆ 31 ಮಾರ್ಚ್ 2020ರಲ್ಲಿದ್ದಂತೆ ಕಂಪನಿಯ ವ್ಯವಹಾರಗಳ ಸ್ಥಿತಿಗತಿಗಳನ್ನು, ಹಾಗೂ ಅದೇ ದಿನಾಂಕಕ್ಕೆ ಅಂತ್ಯಗೊಂಡಂತಹ ಸಾಲಿಗೆ ನಷ್ಟ ಹಾಗೂ ಸಮಗ್ರ ವರಮಾನ, ಈಕ್ವಿಟಿಯಲ್ಲಿನ ಬದಲಾವಣೆಗಳು ಹಾಗೂ ಕಂಪನಿಯ ನಗದು/ಹಣಕಾಸಿನ ಹರಿವುಗಳ ಒಂದು ಸತ್ಯಾಸತ್ಯತೆಯಿಂದ ಕೂಡಿದ ಹಾಗೂ ನ್ಯಾಯಸಮ್ಮತವಾದಂತಹ ಅಭಿಪ್ರಾಯಗಳನ್ನು ನೀಡುತ್ತವೆ.
ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮದ 31ನೇ ಮಾರ್ಚ್ 2020ಕ್ಕೆ ಅಂತ್ಯಗೊಂಡಂತಹ ಸಾಲಿಗೆ ಲೆಕ್ಕಪತ್ರಗಳ ಲೆಕ್ಕಪರಿಶೋಧನೆಯನ್ನು ಪೂರ್ಣಗೊಳಿಸಿದ ನಂತರ, ನಾವು ನಮ್ಮ ವರದಿಯನ್ನು 22.11.2020 ರಂದು ಸಲ್ಲಿಸಿರುತ್ತೇವೆ. ನಮ್ಮ ವರದಿಯನ್ನು ಪರಿಶೀಲಿಸಿದ ನಂತರ ಕಂಪನಿ ಕಯ್ದೆ 2013ರ ಸೆಕ್ಷನ್ 143 (6)(ಎ) ಅಡಿಯಲ್ಲಿ ಭಾರತದ ನಿಯಂತ್ರಕ ಮತ್ತು ಲೆಕ್ಕಪರಿಶೋಧಕ ಜನರಲ್ ರವರ ವೀಕ್ಷಣೆಗೆ ಅನುಸಾರವಾಗಿ ನಮ್ಮ ಮೂಲ ವರದಿಯನ್ನು ಪರಿಷ್ಕರಿಸಿ, ಪರಿಷ್ಕರಿಸಿದ ವರದಿಯನ್ನು 18.12.2020 ರಂದು ಸಲ್ಲಿಸಲಾಗಿರುತ್ತದೆ.

ನಮ್ಮ ಷರತ್ತುಬದ್ಧ ಅಭಿಪ್ರಾಯಗಳಿಗೆ ಆಧಾರ :

1. ಹಣಕಾಸು ತ;ಖ್ತೆಗಳ ಟಿಪ್ಪಣಿ ಸಂಖ್ಯೆ 4ರಲ್ಲಿ ತಿಳಿಸಿರುವಂತೆ, ಸ್ವೀಕರಿಸಲಾಗಿರುವಂತಹ ಅಭಿವೃದ್ಧಿ ಅನುದಾನಗಳನ್ನು ಮೀಸಲಿರಿಸಿರುವಿಕೆಗಳು ಮತ್ತು ಮಿಗುತಾಯಗಳ ಅಡಿಯಲ್ಲಿ ತೋರಿಸಲಾಗಿರುವುದು, ಕರ್ನಾಟಕ ಸರ್ಕಾರ/ಭಾರತ ಸರ್ಕಾರದ ನಿರ್ದೇಶನಗಳ ಅನುಸಾರ ಅಂತಹ ಅನುದಾನಗಳಿಂದ ಮೊತ್ತಗಳನ್ನು ವೆಚ್ಚ ಮಾಡಬೇಕಿರುವುದರಿಂದ ಚಾಲ್ತಿ ಜವಾಬ್ದಾರಿಗಳ ಅಡಿಯಲ್ಲಿ ತೋರಿಸುವ ಅಗತ್ಯತೆಯಿರುತ್ತದೆ. ಖರ್ಚು ಮಾಡದೇ ಉಳಿದಿರುವಂತಹ ಅಭಿವೃದ್ಧಿ ಅನುದಾನಗಳ ಮೊತ್ತಗಳನ್ನು ಹಾಗೂ ಅನುದಾನ ಲೆಕ್ಕಗಳ ಸಂಬಂಧಿತ ಅಂತಿಮ ಬ್ಯಾಂಕು ಶಿಲ್ಕುಗಳನ್ನು ಸಮರ್ಪಕವಾಗಿ ಸಮನ್ವಯಗೊಳಿಸುವಲ್ಲಿನ ಅನುಪಸ್ಥಿತಿಯ ಕಾರಣ ಅಭಿವೃದ್ಧಿ ಅನುದಾನಗಳನ್ನು ಪರಿಗಣಿಸಿರುವುದರ ಬಗ್ಗೆ ಯಾವುದೇ ಟೀಕೆಟಿಪ್ಪಣಿಗಳನ್ನು ಮಾಡಲು ನಮಗೆ ಸಾಧ್ಯವಾಗುವುದಿಲ್ಲ. ಮುಂದುವರೆದು, ಕಂಪನಿಯು ಸರ್ಕಾರದ ಅನುದಾನಗಳಿಗಾಗಿ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಮಾನದಂಡ – 12ರ ಅನುಸಾರ ಲೆಕ್ಕವನ್ನಿಡುವ ಮತ್ತು ಬಹಿರಂಗ ಪಡಿಸುವಿಕೆ ಅಗತ್ಯತೆಗಳನ್ನು ಕಂಪನಿಯು ಅನುಸರಿಸಿರುವುದಿಲ್ಲ.

2. ಹಣಕಾಸು ತ:ಖ್ತೆಗಳ ಟಿಪ್ಪಣಿ ಸಂಖ್ಯೆ 8ರಲ್ಲಿ ತಿಳಿಸಿರುವಂತೆ ಕಂಪನಿಯು ಅತಿ ಸಣ್ಣ ಮತ್ತು ಸಣ್ಣ ಉದ್ಯಮಗಳಿಗೆ ಇರುವಂತಹ ಬಾಕಿಗಳನ್ನು ವಿಭಜಿಸಿರುವುದಿಲ್ಲ ಹಾಗೂ ಎಲ್ಲಾ ಮಾರಾಟಗಾರರುಗಳಿಂದ ಮತ್ತು ಸೇವೆಗಳನ್ನು ಒದಗಿಸುವವರುಗಳಿಂದ ಅವರುಗಳ ನೋಂದಣಿ ವಿವರಗಳನ್ನು ಕಂಪನಿಯು ಪಡೆದುಕೊಂಡಿರುವುದಿಲ್ಲ. ಮುಂದುವರೆದು, ಆಸ್ತಿ–ಜವಾಬ್ದಾರಿ ತ:ಖ್ತೆಯ ದಿನಾಂಕದಲ್ಲಿದ್ದಂತೆ ಬಾಕಿಯಿದ್ದಂತಹ ರೂ.38,65,665/–ರಷ್ಟು (ಟಿಪ್ಪಣಿ 8ರಲ್ಲಿ ಬಹಿರಂಗಪಡಿಸಿರುವ ಶಿಲ್ಕಿನ ಪೈಕಿ) ಹಾಗೂ ಬಹಳ ದೀರ್ಘಕಾಲದವರೆಗೆ ಬಾಕಿಯಿದ್ದಂತಹ ರೂ.9,66,603/–ರಷ್ಟು (ಟಿಪ್ಪಣಿ ಸಂಖ್ಯೆ 20ರಲ್ಲಿ ಬಹಿರಂಗಪಡಿಸಿರುವ ಶಿಲ್ಕಿನ ಪೈಕಿ) ಮೊತ್ತಗಳಿಗೆ ಸಂಬಂಧಿಸಿದಂತೆ ಸಂಬಂದಿತ ತಂಡಗಳಿಂದ ಖಚಿತಪಡಿಸಿಕೊಂಡಿರುವುದಿಲ್ಲ.

3. ಇತರೆ ಚಾಲ್ತಿ ಜವಾಬ್ದಾರಿಗಳಿಗೆ ಸಂಬಂಧಿತ ಟಿಪ್ಪಣಿ ಸಂಖ್ಯೆ 9ರಲ್ಲಿ ಬಹಿರಂಗಪಡಿಸಿರುವಂತೆಲೆಕ್ಕಪತ್ರಗಳ ಪುಸ್ತಕಗಳಲ್ಲಿ ದೀರ್ಘಕಾಲದವರೆಗೆ ಬಾಕಿಯಿರುವಂತಹ ರೂ.23,47,65,666/–ರಷ್ಟು (ಟಿಪ್ಪಣಿ ಸಂಖ್ಯೆ 9ರಲ್ಲಿ ಬಹಿರಂಗಪಡಿಸಿರುವ ಒಟ್ಟು ಮೊತ್ತದ ಪೈಕಿ) ಮೊತ್ತಕ್ಕೆ ಸಂಬಂಧಿಸಿದಂತೆ ಖಚಿತಪಡಿಸಿಕೊಂಡಿರುವಿಕೆಯು ಲಭ್ಯವಿರುವುದಿಲ್ಲ. ಒಂದು ವರ್ಷಕ್ಕೂ ಮೀರಿದ ಅವಧಿಗೆ ಪಾವತಿಸಬೇಕಿರುವ ಜವಾಬ್ದಾರಿಗಳನ್ನು ಪ್ರತ್ಯೇಕಿಸಿರುವುದಿಲ್ಲ ಮತ್ತು ದೀರ್ಘಾವಧಿ ಜವಾಬ್ದಾರಿಗಳ ಅಡಿಯಲ್ಲಿ ತೋರಿಸಿರುವುದಿಲ್ಲ.

4. ಇತರೆ ಚಾಲ್ತಿ ಜವಾಬ್ದಾರಿಗಳಿಗೆ ಸಂಬಂಧಿತ ಟಿಪ್ಪಣಿ ಸಂಖ್ಯೆ 14ರಲ್ಲಿ ಬಹಿರಂಗಪಡಿಸಿರುವಂತೆ ಲೆಕ್ಕಪತ್ರಗಳ ಪುಸ್ತಕಗಳಲ್ಲಿ ದೀರ್ಘಕಾಲದವರೆಗೆ ಬಾಕಿಯಿರುವಂತಹ ಚಾಲ್ತಿಯೇತರ ರೂ.5,08,66,657/–ರಷ್ಟು ಮೊತ್ತದಷ್ಟು ಈ ಹಿಂದಿನ ಸಾಲುಗಳಿಗೆ ಸಂಬಂಧಿತ ಆದಾಯ ತೆರಿಗೆ ಮರುಪಾವತಿಗಾಗಿ ಲೆಕ್ಕಪತ್ರ ಪುಸ್ತಕಗಳಲ್ಲಿ ಅನುವನ್ನು ಮಾಡಿರುವುದಿಲ್ಲ. ಮುಂದುವರೆದು, ಕಂಪನಿಯು ಆದಾಯ ತೆರಿಗೆ ಪಾವತಿಗಳಿಗಾಗಿನ ತಗಾದೆಗಳಿಗೆ ಸಮರ್ಪಕ ಅನುವು ಮಾಡಿರುವುದಿಲ್ಲ. ಆದಾಯ ತೆರಿಗೆ ಪೋರ್ಟಲಿನ ಅನುಸಾರ, ವಿವಿಧ ಆದಾಯ ತೆರಿಗೆ ಅಧಿಕಾರಿಗಳು ಪಾವತಿಗಾಗಿ ಸೃಷ್ಟಿಸಿರುವ ತಗಾದೆಗಳ ಮೊತ್ತವು ರೂ.13,59,08,016/–ರಷ್ಟು ಆಗಿದ್ದು, ಈ ನಿಟ್ಟಿನಲ್ಲಿ ಆಕಸ್ಮಿಕ ಜಾವಾಬ್ದಾರಿಗಳಿಗಾಗಿ "ಅನುವುಗಳು, ಆಕಸ್ಮಿಕ ಜವಾಬ್ದಾರಿಗಳೂ ಮತ್ತು ಆಕಸ್ಮಿಕ ಆಸ್ತಿಗಳಿಗೆ" ಸಂಬಂಧಿತ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಮಾನದಂಡ 29ರ ಅನುಸಾರ ಲೆಕ್ಕಪತ್ರ ಪುಸ್ತಕಗಳಲ್ಲಿ ಯಾವುದೇ ಅನುವನ್ನೂ ಮಾಡಿರುವುದಿಲ್ಲ ಅಥವಾ ಬಹಿರಂಗಪಡಿಸಿರುವುದಿಲ್ಲ.

5. ಟಿಪ್ಪಣಿ ಸಂಖ್ಯೆ 17ರಲ್ಲಿ ಬಹಿರಂಗಪಡಿಸಿರುವಂತೆ ವ್ಯಾಪಾರವ್ಯವಹಾರಗಳಿಗೆ ಸಂಬಂಧಿಸಿದಂತೆ ಸ್ವೀಕರಿಸಬೇಕಾದವುಗಳು ಆಸ್ತಿ–ಜವಾಬ್ದಾರಿ ತ:ಖ್ತೆಯ ದಿನಾಂಕದಲ್ಲಿದ್ದಂತೆ ರೂ.2,24,40,972/–ರಷ್ಟು ಬಾಕಿಯಿದ್ದವು, ಸಂಬಂಧಿತ ತಂಡಗಳಿಂದ ಇದರ ಬಗ್ಗೆ ಖಚಿತಪಡಿಸಿಕೊಂಡಿರಲಿಲ್ಲ ಹಾಗೂ ಈ ನಿಟ್ಟಿನಲ್ಲಿ ಆಸ್ತಿ–ಜವಾಬ್ದಾರಿ ತ:ಖ್ತೆಯ ದಿನಾಂಕ ದಲ್ಲಿದ್ದಂತೆ ಸ್ವೀಕರಿಸಬೇಕಾದವುಗಳು ಅನುಮಾನಾಸ್ಪದವಾಗಿರುವುದಕ್ಕೆ ಸಂಬಂಧಿಸಿದಂತೆ ಅನುವು ಮಾಡಿರಲಿಲ್ಲ.

6. ಚಾಲ್ತಿ ಆಸ್ತಿಗಳು – ಅಲ್ಪಾವಧಿ ಸಾಲಗಳು ಮತ್ತು ಮುಂಗಡಗಳು ಆಸ್ತಿ–ಜವಾಬ್ದಾರಿ ತ:ಖ್ತೆಯ ದಿನಾಂಕದಲ್ಲಿದ್ದಂತೆ ರೂ.40,39,510ರಷ್ಟು ಇನ್ನೂ ಬಾಕಿಯಿದ್ದವು ಹಾಗೂ ವಸೂಲಾತಿಯು ಅನುಮಾನಾಸ್ಪದವಾಗಿರುವ ಮುಂಗಡಗಳಿಗೆ ಮಾಡಲಾಗಿದ್ದ ಅನುವು ರೂ.25,17,592 ಆಗಿದ್ದಿತು. ಉಳಿಕೆ ಮುಂಗಡಗಳ ಮೊತ್ತವು ರೂ.15,21,918 ಆಗಿದ್ದಿತು, ಈ ನಿಟ್ಟಿನಲ್ಲಿ ಶಿಲ್ಕುಗಳ ಬಗ್ಗೆ ಖಚಿತಪಡಿಸಿಕೊಂಡಿರಲಿಲ್ಲ ಹಾಗೂ ಆಸ್ತಿ–ಜವಾಬ್ದಾರಿ ತ:ಖ್ತೆಯ ದಿನಾಂಕದಲ್ಲಿದ್ದಂತೆ ಉದ್ಯೋಗಿವಾರು ತೆಗೆದುಕೊಳ್ಳಲಾಗಿರುವ ವಸೂಲಾತಿ ಕ್ರಮಗಳ ಬಗ್ಗೆ ವಿವರಗಳು ಲಭ್ಯವಿರಲಿಲ್ಲ.

7. ಟಿಪ್ಪಣಿ ಸಂಖ್ಯೆ 20ರಲ್ಲಿ ಬಹಿರಂಗಪಡಿಸಲಾಗಿರುವ ಇತರೆ ಚಾಲ್ತಿ ಜವಾಬ್ದಾರಿಗಳು ರೂ.24,99,973 ಮೊತ್ತದಷ್ಟು ದೀರ್ಘಕಾಲದವರೆಗೆ ಬಾಕಿಯಿದ್ದಂತಹ ಮೊತ್ತವನ್ನು ಒಳಗೊಂಡಿರುತ್ತದೆ. ಆದಾಗ್ಯೂ, ಸಂಬಂಧಿತ ತಂಡಗಳಿಂದ ಇದರ ಬಗ್ಗೆ ಖಚಿತಪಡಿಸಿಕೊಂಡಿರಲಿಲ್ಲ ಹಾಗೂ ಅನುಮಾನಾಸ್ಪದವಾಗಿರುವ ವಸೂಲಾತಿಗಳಿಗೆ ಸಂಬಂಧಿಸಿದಂತೆ ಅನುವು ಮಾಡಿರಲಿಲ್ಲ.

8. ಟಿಪ್ಪಣಿ ಸಂಖ್ಯೆ 20ರಲ್ಲಿ ಬಹಿರಂಗಪಡಿಸಲಾಗಿರುವ ಇತರೆ ಚಾಲ್ತಿ ಆಸ್ತಿಗಳು ಟ್ಯಾಕ್ಸಿ ಚಾಲಕರುಗಳಿಂದ ಸ್ವೀಕರಿಸಬೇಕಿರುವ ನಿಗದಿತ ಶುಲ್ಕಗಳು ರೂ.9,59,496/– ಆಗಿದ್ದು ಒಂದು ಸುದೀರ್ಘ ಕಾಲದಿಂದ ಬಾಕಿ ಉಳಿದಿರುತ್ತದೆ. ಈ ವಾಹನಗಳ ಪರವಾನಿಗೆ ಮತ್ತು ರಸ್ತೆ ಅನುಮತಿಯನ್ನು ರದ್ದುಗೊಳಿಸುವಂತೆ ನಿಗಮವು ಪ್ರಾದೇಶಿಕ ಸಾರಿಗೆ ಅಧಿಕಾರಿಯವರಿಗೆ ಪತ್ರವನ್ನು ಬರೆದಿರುವುದು. ಆದಾಗ್ಯೂ, ಈ ನಿಟ್ಟಿನಲ್ಲಿ ಅನುಮಾನಾಸ್ಪದವಾಗಿರುವ ವಸೂಲಾತಿಗೆ ಅನುವು ಮಾಡಿರುವುದಿಲ್ಲ.

9. ಆಸ್ತಿ–ಜವಾಬ್ದಾರಿ ತ:ಖ್ತೆಯ ದಿನಾಂಕದಲ್ಲಿದ್ದಂತೆ, ವಿವಿಧ ನ್ಯಾಯಾಲಯಗಳಲ್ಲಿ 40 ನ್ಯಾಯಿಕ ವಿವಾದಗಳು ಬಾಕಿಯಿರುವವು. ಬಾಕಿಯಿರುವಂತಹ ಪ್ರಕರಣಗಳಿಂದ ಉದ್ಭವಿಸಬಹುದಾದ ಜವಾಬ್ದಾರಿಯ ಸಂಭಾವ್ಯ ಮೊತ್ತವನ್ನು ನಿಗಮವು ಅಂದಾಜು ಮಾಡಿರುವುದಿಲ್ಲ. ಆದ್ದರಿಂದ, ಅನುವುಗಳು, ಸಾದಿಲ್ವಾರು ಜವಾಬ್ದಾರಿಗಳು ಮತ್ತು ಸಾದಿಲ್ವಾರು ಆಸ್ತಿಗಳಿಗೆ ಸಂಬಂಧಿತ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಮಾನದಂಡ–29ರ ಅಗತ್ಯತೆಯನ್ನು ಪೂರೈಸಿರುವುದಿಲ್ಲ. ಈ ವಿವರಗಳ ಅನುಪಸ್ಥಿತಿಯಲ್ಲಿ, ಸಾದಿಲ್ವಾರು ಜವಾಬ್ದಾರಿಗಳನ್ನು ನಾವು ಪರಿಮಾಣೀಕರಿಸಲಾಗಲಿಲ್ಲ.

10. ಹೋಟೆಲು ಆಸ್ತಿಗಳನ್ನು ನವೀಕರಿಸು, ಕಾರ್ಯಾಚರಣೆಗೊಳಿಸು, ನಿರ್ವಹಿಸು ಹಾಗೂ ವರ್ಗಾಯಿಸು (ಆರ್ಒಎಂಟಿ) ಆಧರದ ಮೇರೆಗೆ ನೀಡಲಾಗಿರುವ ಘಟಕಗಳಿಂದ ಬರುವ ವರಮಾನವನ್ನು ಪರಿಗಣಿಸುವುದಕ್ಕೆ ಸಂಬಂಧಿಸಿದಂತೆ ಅಂತಹ ಹೋಟೆಲು ಆಸ್ತಿಗಳಿಗಾಗಿನ ಒಡಂಬಡಿಕೆಯಲ್ಲಿನ ಷರತ್ತುಗಳ ಆಧಾರದ ಮೇರೆಗೆ ಸಂಚಿತ ಅಧಾರದ ಮೇರೆಗೆ ಪರಿಗಣಿಸತಕ್ಕದ್ದು. ಲೆಕ್ಕಪತ್ರ ಪುಸ್ತಕಗಳಲ್ಲಿ ಅದನ್ನು ಸಂಬಂಧಿತ ಹಣಕಾಸು ಸಾಲಿನಲ್ಲಿ ಸ್ವೀಕರಿಸಲಾದಂತಹ ಮೊತ್ತ ಹಾಗೂ ನೀಡಲಾದಂತಹ ಇನ್ವಾಯ್ಸುಗಳ ಆಧಾರದ ಮೇರೆಗೆ ಪರಿಗಣಿಸಲಾಗಿರುವುದು. ಒಡಂಬಡಿಕೆಗಳಲ್ಲಿನ ಷರತ್ತುಗಳನ್ನು ನಾವು ಮಾಡಿದ ಸಮೀಕ್ಷೆಯ ಅಧಾರದ ಮೇರೆಗೆ, 2019–20 ಹಣಕಾಸು ಸಾಲಿಗೆ ಸಂಬಂಧಿತ ರೂ.49,46,948/–ರಷ್ಟು ಮೊತ್ತದ ವರಮಾನವನ್ನು 2018–19 ಹಣಕಾಸು ಸಾಲಿನಲ್ಲಿ ಪರಿಗಣಿಸಲಾಗಿದ್ದಿತು, 2020–21 ಹಣಕಾಸು ಸಾಲಿಗೆ ಸಂಬಂಧಿತ ರೂ.59,50,005/–ರಷ್ಟು ಮೊತ್ತದ ವರಮಾನವನ್ನು 2019–20 ಹಣಕಾಸು ಸಾಲಿಗೆ ಲೆಕ್ಕಕ್ಕೆ ತೆಗೆದುಕೊಳ್ಳಲಾಗಿದ್ದಿತು ಹಾಗೂ ರೂ.27,000/–ದಷ್ಟು ಮೊತ್ತದ ಹಿಂದಿನ ಸಾಲಿಗೆ ಸಂಬಂಧಿತ ವರಮಾನವನ್ನು 2019–20 ಹಣಕಾಸು ಸಾಲಿಗೆ (ಪೂರ್ವಾವಧಿ ವರಮಾನ) ಲೆಕ್ಕಕ್ಕೆ ತೆಗೆದುಕೊಳ್ಳಲಾಗಿದ್ದಿತು ಎಂಬುದನ್ನು ನಾವು ಗಮನಿಸಿದೆವು.

11. ನಿಗಮವು ಹೋಟೆಲು ಕೊಠಡಿಗಳ ಕಾಯ್ದಿರಿಸಿರುವಿಕೆಗಾಗಿ ವಿವಿಧ ಆನ್‌ಲೈನ್ ಬುಕಿಂಗ್ ಪ್ರತಿನಿಧಿಗಳನ್ನು ನೇಮಕ ಮಾಡಿಕೊಂಡಿರುವುದು. ಈ ಪ್ರತಿನಿಧಿಗಳು ಗ್ರಾಹಕರುಗಳಿಂದ ವರಮಾನವನ್ನು ಸಂಗ್ರಹಿಸುವರು ಹಾಗೂ ತಮ್ಮ ಕಮಿಷನ್ ಮೊತ್ತವನ್ನು ಕಳೆದುಕೊಂಡು ನಿವ್ವಳ ಮೊತ್ತವನ್ನು ನಿಗಮಕ್ಕೆ ಪಾವತಿಸುವರು. ಆದಾಗ್ಯೂ, ಅಂತಹ ಪ್ರತಿನಿಧಿಗಳು ಗ್ರಾಹಕರಿಗೆ ನೀಡುವಂತಹ ರಸೀದಿ ಮತ್ತು ನಿಗಮಕ್ಕೆ ಬರಬೇಕಾದಂತಹ ಮೊತ್ತದ ಜಾಡನ್ನು/ಯಥಾರ್ಥತೆಯನ್ನು ಖಚಿತಪಡಿಸಿಕೊಳ್ಳುವ ಸಲುವಾಗಿ ಪರಿಣಾಮಕಾರಿತ್ವದಿಂದ ಕೂಡಿದ ಒಂದು ವ್ಯವಸ್ಥೆಯನ್ನು ನಿಗಮವು ಹೊಂದಿರುವುದಿಲ್ಲ. ಆಸ್ತಿ–ಜವಾಬ್ದಾರಿ ತ:ಖ್ತೆಯ ದಿನಾಂಕದಲ್ಲಿದ್ದಂತೆ ಆನ್‌ಲೈನ್ ಪ್ರತಿನಿಧಿಗಳ ಪೈಕಿ ಓರ್ವ ಪ್ರತಿನಿಧಿಗೆ ಸಂಬಂಧಿಸಿದಂತೆ ರೂ.8,98,906/–ರಷ್ಟು ಮೊತ್ತದ ಋಣಾತ್ಮಕ ಶಿಲ್ಕನ್ನು ಹಾಗೂ ರೂ.36,90,365/–ರಷ್ಟು ಮೊತ್ತದ ಜಮೆ ಶಿಲ್ಕನ್ನು ನಿಗಮವು ಹೊಂದಿದ್ದಿತು, ಈ ಶಿಲ್ಕುಗಳನ್ನು ಸಮನ್ವಯಗೊಳಿಸಿರಲಿಲಲ್.

12. ನಿಗಮವು ರಜೆ ನಗದೀಕರಣ ಮತ್ತು ಗ್ರಾಚುಯಿಟಿಗಾಗಿ ವಿಮಾಗಣಿತ ಮೌಲ್ಯಮಾಪನದ ಆಧಾರದ ಮೇರೆಗೆ ಅನುವನ್ನು ಮಾಡಿರುವುದಿಲ್ಲ, ಇದರಿಂದಾಗಿ, ಲೆಕ್ಕವನ್ನಿಡುವಿಕೆಗೆ ಸಂಬಂಧಿತ ಮಾನದಂಡ –15ರ (ಪರಿಷ್ಕೃತ) ಉಲ್ಲಂಘನೆಯಾಗಿರುತ್ತದೆ. ವಿಮಾಗಣಿತ ಮೌಲ್ಯಮಾಪನದ ಅನುಪಸ್ಥಿತಿಯಲ್ಲಿ, ಅಂತಹ ಅನುವು ಸಮರ್ಪಕವಾಗಿರುವುದೇ ಅಥವಾ ಇಲ್ಲವೇ ಎಂಬುದರ ಬಗ್ಗೆ ನಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಲು ಸಾಧ್ಯವಾಗುವುದಿಲ್ಲ. ಮುಂದುವರೆದು, ನಿಗಮವು ಭಾರತೀಯ ಜೀವ ವಿಮಾ ನಿಗಮದಿಂದ ಗುಂಪು ಗ್ರಾಚುಯಿಟಿ ಯೋಜನೆಯನ್ನು ಹೊಂದಿರುವುದು ಹಾಗೂ ಭಾರತೀಯ ಜೀವ ವಿಮಾ ನಿಗಮವು, ನಿಗಮದ ಉದ್ಯೋಗಿಗಳ ಗುಂಪು ಗ್ರಾಚುಯಿತಿ ಯೋಜನೆಯ ಕಡೆಗೆ ಪಾವತಿಸಬೇಕಾದ ಮೊತ್ತವು ರೂ.8,27,13,270 ಎಂಬುದಾಗಿ ತಿಳಿಸಿದ್ದಿತು. ಆದಾಗ್ಯೂ, ಟಿಪ್ಪಣಿ ಸಂಖ್ಯೆ – 17ರ (ದೀರ್ಘಾವಧಿ ಅನುವುಗಳು), ಅನುಸಾರ ಗ್ರಾಚುಯಿಟಿಗಾಗಿ ಉದ್ಯೋಗಿಗಳ ಪ್ರಯೋಜನಗಳಿಗಾಗಿ ಮಾಡಲಾಗಿರುವ ಅನುವು ರೂ.5,57,32,070. ಆದ್ದರಿಂದ ಗ್ರಾಚುಯಿಟಿಗಾಗಿ ಉದ್ಯೋಗಿಗಳ ಪ್ರಯೋಜನಗಳನ್ನು ರೂ.827.13 ಲಕ್ಷ ಮೊತ್ತದಷ್ಟು ಕಡಿಮೆ ಪ್ರಮಾಣದಲ್ಲಿ ತಿಳಿಸಲಾಗಿರುವುದು.

13. ನಿಗಮವು ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಮಾನದಂಡ 22ರ ಅಗತ್ಯತೆಯಂತೆ ಮುಂದೂಡಲ್ಪಟ್ಟಿರುವ ತೆರಿಗೆಗಳನ್ನು ಪರಿಗಣಿಸಿರುವುದಿಲ್ಲ. ಅದರ ಬಗ್ಗೆ ನಿಗಮವು ಖಚಿತಪಡಿಸಿಕೊಂಡಿರುವುದಿಲ್ಲವಾದ್ದರಿಂದ ಕ್ರೋಡೀಕೃತ ಹಣಕಾಸು ತ:ಖ್ತೆಗಳ ಮೇಲೆ ಅದರ ಪ್ರಭಾವವನ್ನು ಪರಿಮಾಣೀಕರಿಸಲು ಸಾಧ್ಯವಾಗುವುದಿಲ್ಲ.

14. ಘಟಕಗಳ ವರದಿ ಸಲ್ಲಿಕೆಗೆ ಸಂಬಂಧಿಸಿದಂತೆ ನಿಗಮವು ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಮಾನದಂಡ – 17ರ ಅಗತ್ಯತೆಯನ್ನು ಪೂರೈಸಿರುವುದಿಲ್ಲ ಹಾಗೂ ತನ್ನ ಹಣಕಾಸು ತ:ಖ್ತೆಯಲ್ಲಿ ಪ್ರಾಥಮಿಕ ವ್ಯಾಪಾರವ್ಯವಹಾರ ಘಟಕಗಳನ್ನು ಬಹಿರಂಗಪಡಿಸಿರುವುದಿಲ್ಲ.

15. ನಮಗೆ ಒದಗಿಸಲಾಗಿರುವ ಮಾಹಿತಿಯಂತೆ ಹಾಗೂ ನೀಡಲಾಗಿರುವ ವಿವರಣೆಗಳಂತೆ, ನಿಗಮವು ಪ್ರಸಕ್ತ ಸಾಲಿಗೆ ಬೋನಸ್ಸು ಅಧಿನಿಯಮ, 1965ರ ಅನುವುಗಳ ಅನ್ವುಆರ ಉದ್ಯೋಗಿಗಳಿಗೆ ಬೋನಸ್ಸು ಪಾವತಿಗಾಗಿ ಸಮರ್ಪಕ ಅನುವು ಮಾಡಿರುವುದಿಲ್ಲ. ಸಮರ್ಪಕ ವಿವರಗಳ ಅನುಪಸ್ಥಿತಿಯಲ್ಲಿ ಹಾಗೂ ಕಡಿಮೆ ಪ್ರಮಾಣದಲ್ಲಿ ಮಾಡಲಾಗಿರುವ ಅನುವಿನ ಕಾರಣ ಪ್ರಸಕ್ತ ಸಾಲಿಗೆ ಹಣಕಾಸು ತ:ಖ್ತೆಗಳ ಮೇಲೆ ಭೀರಬಹುದಾದ ಪರಿಣಾಮ ಹಾಗೂ ದಂಡನಾ ಅನುವನ್ನು ಖಚಿತಪಡಿಸಿಕೊಳ್ಳಲು ಸಾಧ್ಯವಾಗಲಿಲ್ಲ.

16. ಸರ್ಕಾರಿ ಅನುದಾನದ ಪರಿಗಣನೆಗೆ ಸಂಬಂಧಿಸಿದಂತೆ ಗಮನಾರ್ಹವಾದಂತಹ ಲೆಕ್ಕವನ್ನಿಡುವಿಕೆಗೆ ಸಂಬಂಧಿತ ಕಾರ್ಯನೀತಿಗಳ ಕಂಡಿಕೆ ಸಂಖ್ಯೆ IXರ ಕಡೆಗೆ ಗಮನವನ್ನು ಸೆಳೆಯಲಾಗುತ್ತಿದೆ – ,"ಸರ್ಕಾರದಿಂದ

ಸ್ವೀಕರಿಸಲಾದಂತಹ ಅನುದಾನಗಳನ್ನು ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಮಾನದಂಡ – 12ರ ಅಡಿಯಲ್ಲಿನ ಮಾರ್ಗಸೂಚಿಗಳ ಅನುಸಾರ ಲೆಕ್ಕವನ್ನಿಡಲಾಗಿರುವುದು. ಅದರಂತೆಯೇ, ಬಳಕೆಯಾಗುವುದು ಬಾಕಿಯಿದ್ದಂತೆ ಹೂಡಿಕೆ ಮಾಡಲಾಗುವ ಅನುದಾನಗಳ ಹಣಕಾಸಿನ ಮೇಲೆ ಗಳಿಸಲಾಗುವ ಬಡ್ಡಿಯನ್ನು ಅನುದಾನಕ್ಕೆ ಸೇರಿಸಲಾಗುವುದು." ನಿಗಮವು 2019–20 ಹಣಕಾಸು ಸಾಲಿನಲ್ಲಿ ಅನುದಾನಗಳ ಹಣಕಾಸಿನ ಮೇಲೆ ರೂ.2,13,85,732/–ರಷ್ಟು ಮೊತ್ತದ ಬಡ್ಡಿಯನ್ನು ಗಳಿಸಿತು ಹಾಗೂ ಅದನ್ನು ಆಸ್ತಿ–ಜವಾಬ್ದಾರಿ ತ:ಖ್ತೆಯಲ್ಲಿ ಮೀಸಲಿರಿಸಿರುವವುಗಳು ಮತ್ತು ಮಿಗುತಾಯಗಳ ಅಡಿಯಲ್ಲಿ ಅಭಿವೃದ್ಧಿ ಅನುದಾನಗಳಿಗೆ ಸೇರಿಸುವ ಬದಲು ಲಾಭ ಮತ್ತು ನಷ್ಟ ತ:ಖ್ತೆಯಲ್ಲಿ ಇತರೆ ವರಮಾನ ಎಂಬುದಾಗಿ ತೋರಿಸಲಾಗಿರುವುದು. ಇದು ಮೀಸಲಿರಿಸಿರುವವುಗಳು ಮತ್ತು ಮಿಗುತಾಯಗಳನ್ನು ರೂ.2,13,85,732/–ರಷ್ಟು ಕಡಿಮೆ ಪ್ರಮಾಣದಲ್ಲಿ ತಿಳಿಸುವಲ್ಲಿ ಹಾಗೂ ಇತರೆ ವರಮಾನವನ್ನು ಅಷ್ಟರಮಟ್ಟಿಗೆ ಅಧಿಕ ಪ್ರಮಾಣದಲ್ಲಿ ತಿಳಿಸುವಲ್ಲಿ ಪರಿಣಮಿಸಿತು. ತತ್ಪರಿಣಾಮವಾಗಿ, ಪ್ರಸಕ್ತ ಸಾಲಿನ ಲಾಭವನ್ನು ರೂ.2,13,85,732/–ರಷ್ಟು ಮೊತ್ತದಿಂದ ಅಧಿಕ ಪ್ರಮಾಣದಲ್ಲಿ ತಿಳಿಸಲಾಗಿರುವುದು.

17. ಸುವರ್ಣ ರಥ (ಟಿಜಿಸಿ) ವಿಲಾಸಿ ಟ್ರೈನಿಗಾಗಿ ಸಾಗಾಣಿಕೆ ಶುಲ್ಕ/ವೆಚ್ಚಗಳ ಕಡೆಗೆ ನೈಋತ್ಯ ರೈಲ್ವೇಗೆ ಪಾವತಿಸಲಾಯಿತು. ನೈಋತ್ಯ ರೈಲ್ವೇ ಹಾಗೂ ನಿಗಮದ ನಡುವೆ ಮಾಡಿಕೊಳ್ಳಲಾಗಿರುವ ಒಡಂಬಡಿಕೆಯಲ್ಲಿನ ಷರತ್ತುಗಳು ಮತ್ತು ನಿಬಂಧನೆಗಳ ಅನುಸಾರ ಸಾಗಾಣಿಕೆ ಶುಲ್ಕ/ವೆಚ್ಚಗಳನ್ನು ಪಾವತಿಸಲಾಗುತ್ತಿರುವುದು. ಪ್ರಸಕ್ತ ಸಾಲಿನ ಸಾಗಾಣಿಕೆ ವೆಚ್ಚ/ಶುಲ್ಕಗಳ ಪಾವತಿಯನ್ನು ಪರಿಶೀಲಿಸಲಾಗಿ, ನೈಋತ್ಯ ರೈಲ್ವೇಯು ರೂ.3.81 ಲಕ್ಷ ಮೊತ್ತದಷ್ಟು ಮನ್ನಾ ಶುಲ್ಕಗಳನ್ನು ಅನುವು ಮಾಡಿದನಂತರ್ರ ಹಾಗೂ ರೂ.5.39 ಲಕ್ಷ ಮೊತ್ತದಷ್ಟು ಬಡ್ಡಿಯನ್ನು ವಿಧಿಸಿದನಂತರ 2019–20 ಹಣಕಾಸು ಸಾಲಿಗೆ ರೂ.95,24,429/–ರಷ್ಟು ಮೊತ್ತದ ಪಾವತಿಗಾಗಿ ತಗಾದೆಯನ್ನು ನಿಗಮಕ್ಕೆ ನೀಡಿದ್ದಿತು ಎಂಬುದನ್ನು ಗಮನಿಸಲಾಯಿತು, ನಿಗಮವು ಈ ವೆಚ್ಚವನ್ನು ಸಾಗಾಣಿಕೆ ಶುಲ್ಕ/ವೆಚ್ಚಗಳ ಅಡಿಯಲ್ಲಿ ಲೆಕ್ಕಕ್ಕೆ ತೆಗೆದುಕೊಳ್ಳಬೇಕಿದ್ದಿತು, ಇದಕ್ಕೆ ಬದಲಾಗಿ ನಿಗಮವು ಕರ್ನಾಟಕ ಸರ್ಕಾರದ ಅನುದಾನದಿಂದ ರೂ.66.43 ಲಕ್ಷ ಮೊತ್ತವನ್ನು ಹಾಗೂ ಐಆರ್‌ಸಿಟಿಸಿಯಿಂದ (ಜನವರಿ 2020ರಿಂದ ಮಾರ್ಚ್ 2020ರವರೆಗೆ ಗುತ್ತಿಗೆದಾರರು) ಸ್ವೀಕರಿಸಲಾದ ರೂ.23.41 ಲಕ್ಷ ಮೊತ್ತವನ್ನು, ಈ ಹಿಂದಿನ ಅವಧಿಗೆ ರೈಲ್ವೇಯಿಂದ ಸ್ವೀಕರಿಸಲಾದಂತಹ ರೂ.18.57 ಲಕ್ಷ ಮೊತ್ತದಷ್ಟು ಮರುಪಾವತಿಯನ್ನು ವೆಚ್ಚಕ್ಕೆ ಹೊಂದಾಣಿಕೆ ಮಾಡಿದನಂತರ ರೂ.18.66 ಲಕ್ಷ ಮೊತ್ತವನ್ನು ಲೆಕ್ಕಕ್ಕೆ ತೆಗೆದುಕೊಂಡಿತು. ಈ ನಿಟ್ಟಿನಲ್ಲಿ ಅನುದಾನದ ಪ್ರತಿಯಾಗಿ ಹಾಗೂ ಇತರೆ ಸ್ವೀಕರಿಸಬೇಕಾಗಿರುವವುಗಳ ಪ್ರತಿಯಾಗಿ ವೆಚ್ಚಗಳನ್ನು ನಿವ್ವಳಗೊಳಿಸಿದ್ದು ರೂ.104.25 ಲಕ್ಷ (ರೂ.122.91 ಲಕ್ಷ – ರೂ.18.66 ಲಕ್ಷ) ಮೊತ್ತದಷ್ಟು ವೆಚ್ಚವನ್ನು ಕಡಿಮೆ ಪ್ರಮಾಣದಲ್ಲಿ ತಿಳಿಸುವಲ್ಲಿ ಹಾಗೂ ಲಾಭವನ್ನು ಅಷ್ಟರಮಟ್ಟಿಗೆ ಅಧಿಕ ಪ್ರಮಾಣದಲ್ಲಿ ತಿಳಿಸುವಲ್ಲಿ ಪರಿಣಮಿಸಿದ್ದಿತು ಎಂಬುದನ್ನು ಗಮನಿಸಲಾಯಿತು.

18. 2019–20 ಹಣಕಾಸು ಸಾಲಿನಲ್ಲಿ ವಿಲಾಸಿ ಟ್ರೈನು ಕಾರ್ಯಾಚರಣೆಗೊಂಡಿರಲಿಲ್ಲವಾದ್ದರಿಂದ ವಿಲಾಸಿ ಸುವರ್ಣ ರಥದಿಂದ (nf[1]) ವರಮಾನವು ಬಂದಿರಲಿಲ್ಲವಾದ್ದರಿಂದ ಸಾಗಾಣಿಕೆ ವೆಚ್ಚಗಳಿಗಾಗಿ ಅನುದಾನವನ್ನು ಬಿಡುಗಡೆಗೊಳಿಸುವಂತೆ ನಿಗಮವು ಕರ್ನಾಟಕ ಸರ್ಕಾರವನ್ನು ಕೋರಿತು, ನಿಗಮದ ಕೋರಿಕೆಯ ಅಧಾರದ ಮೇರೆಗೆ ಕರ್ನಾಟಕ ಸರ್ಕಾರವು ಸಾಗಾಣಿಕೆ ವೆಚ್ಚದ ಕಡೆಗೆ ರೂ.1,12,40,541/–ರಷ್ಟು ಮೊತ್ತವನ್ನು ಬಿಡುಗಡೆಗೊಳಿಸಿತು ಹಾಗೂ ವರಮಾನ ಅನುದಾನದ ರೂಪದಲ್ಲಿದ್ದಿತು. ಈ ನಿಟ್ಟಿನಲ್ಲಿ ಕರ್ನಾಟಕ ಸರ್ಕಾರವು ಅನುದಾನವನ್ನು ಸಾಗಾಣಿಕೆ ವೆಚ್ಚಗಳ ಕಡೆಗೆ ಬಿಡುಗಡೆಗೊಳಿಸಿದ್ದಿತಾದ್ದರಿಂದ ಹಾಗೂ ಅದನ್ನು ಲಾಭ ಮತ್ತು ನಷ್ಟ ತ:ಖ್ತೆಯ ಮೂಲಕ ಪರಿಗಣಿಸಬೇಕಿದ್ದಿತು, ಆದರೆ, ಇದರ ಬದಲಾಗಿ ನಿಗಮವು ಈ ಮೊತ್ತವನ್ನು ಬಂಡವಾಳ ಅನುದಾನ ಎಂಬುದಾಗಿ ಲೆಕ್ಕವನ್ನಿಟ್ಟಿದ್ದಿತು ಎಂಬುದನ್ನು ಗಮನಿಸಲಾಯಿತು. ಇದು ಐಆರ್‌ಸಿಟಿಸಿಯಿಂದ ಸ್ವೀಕರಿಸಬೇಕಿರುವ (ಜನವರಿ 2020ರಿಂಸ ಮಾರ್ಚ್ 2020) ಸಾಗಾಣಿಕೆ ವೆಚ್ಚಗಳ ಕಡೆಗೆ ಇತರೆ ವರಮಾನವನ್ನು ಹಾಗೂ ಪ್ರಸಕ್ತ ಸಾಲಿನ ಲಾಭವನ್ನು ರೂ.104.25 ಲಕ್ಷದಷ್ಟು (ರೂ.122.91 ಲಕ್ಷ – ರೂ.18.66 ಲಕ್ಷ) ಕಡಿಮೆ ಪ್ರಮಾಣದಲ್ಲಿ ತೋರಿಸುವಲ್ಲಿ ಪರಿಣಮಿಸಿದ್ದಿತು.

19. ಕಟ್ಟಡ/ಭೂಮಿ ಮುಂತಾದ ಆಸ್ತಿಗಳು, ಯಂತ್ರಗಳು/ಸ್ಥಾವರ ಮತ್ತು ಉಪಕರಣಗಳು ನಿಗಮದ ಎಲ್ಲಾ 19 ಆಸ್ತಿಗಳಿಗೆ ಸೋಲಾರ್ ದೀಪದ ಅನುಕೂಲತೆ ಒದಗಿಸುವ ಸಲುವಾಗಿ ಭರಿಸಲಾಗಿದ್ದ ರೂ.236.21 ಲಕ್ಷ ಮೊತ್ತವನ್ನು ಒಳಗೊಂಡಿರುತ್ತದೆ. ಈ ಮೊತ್ತವು ಸಾಮಗ್ರಿ/ಉಪಕರಣಗಳ ಸರಬರಾಜಿಗಾಗಿ ಬಿಡುಗಡೆಗೊಳಿಸಲಾಗಿದ್ದ 65% ಮೊತ್ತಕ್ಕೆ ಸಂಬಂಧಿಸಿರುತ್ತದೆ. ಈ ಯೋಜನೆಯನ್ನು ಇನ್ನೂ ಕಾರ್ಯೋದ್ಯುಕ್ತಗೊಳಿಸುವುದು ಬಾಕಿಯಿರುವುದರಿಂದ, ಅದನ್ನು ಬಂಡವಾಳೀಕರಿಸಿರುವುದು ಸರಿಯಾಗಿರುವುದಿಲ್ಲ. ಇದು ಕಟ್ಟಡ/ಭೂಮಿ ಮುಂತಾದ ಆಸ್ತಿಗಳು, ಯಂತ್ರಗಳು/ಸ್ಥಾವರ ಮತ್ತು ಉಪಕರಣಗಳನ್ನು ರೂ.236.21 ಲಕ್ಷ ಮೊತ್ತದಷ್ಟು ಅಧಿಕ ಪ್ರಮಾಣದಲ್ಲಿ ತಿಳಿಸುವಲ್ಲಿ ಹಾಗೂ ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿಗಳನ್ನು ಅಷ್ಟರಮಟ್ಟಿಗೆ ಕಡಿಮೆ ಪ್ರಮಾಣದಲ್ಲಿ ತಿಳಿಸುವಲ್ಲಿ ಪರಿಣಮಿಸಿದ್ದಿತು. ಮೇಲೆ ತಿಳಿಸಲಾದಂತಹ ಆಸ್ತಿಯ ಮೇಲೆ ರೂ.14.16 ಲಕ್ಷ ಮೊತ್ತದಷ್ಟು ಸವಕಳಿಯನ್ನೂ ಸಹ ಅನುವು ಮಾಡಲಾಗಿರುವುದು ಹಾಗೂ ಅದನ್ನು ಅನುದಾನ ಖಾತೆಗೆ ಖರ್ಚಿಗೆ ಹಾಕಲಾಗಿರುವುದು. ಆದ್ದರಿಂದ ಅಭಿವೃದ್ಧಿ ಅನುದಾನವನ್ನು ಅಷ್ಟರಮಟ್ಟಿಗೆ ಕಡಿಮೆ ಪ್ರಮಾಣದಲ್ಲಿ ತಿಳಿಸಲಾಗಿರುವುದು.

20. ನಿಗಮವು 31 ಮಾರ್ಚ್ 2014ರವರೆಗೆ ಬಂಡವಾಳೀಕರಿಸಲಾದಂತಹ ಆಸ್ತಿಗಳಿಗೆ ಸಂಬಂಧಿಸಿದಂತೆ ಕಂಪನಿಗಳ ಅಧಿನಿಯಮ, 2013ರ ಷೆಡ್ಯೂಲು IIರ ಅನುಸಾರ ಸವಕಳಿ ಕಾರ್ಯವಿಧಾನವನ್ನು ಅನುಸರಿಸುತ್ತಿರುವುದಿಲ್ಲ. ಲೆಕ್ಕಪತ್ರಗಳ ಮೇಲೆ ಇದರ ಪ್ರಭಾವವನ್ನು ಪರಿಮಾಣೀಕರಿಸಲು ಸಾಧ್ಯವಿರುವುದಿಲ್ಲ.

21. ಸರ್ಕಾರಿ ಸಾಲಗಳು, ವ್ಯಾಪಾರವ್ಯವಹಾರಗಳಿಗೆ ಸಂಬಂಧಿಸಿದಂತೆ ಪಾವತಿಸಬೇಕಿರುವವುಗಳು, ಇತರೆ ಚಾಲ್ತಿ ಜವಾಬ್ದಾರಿಗಳು, ವ್ಯಾಪಾರವ್ಯವಹಾರಗಳಿಗೆ ಸಂಬಂಧಿಸಿದಂತೆ ಸ್ವೀಕರಿಸಬೇಕಿರುವವುಗಳು ಹಾಗೂ ಇತರೆ ಚಾಲ್ತಿ ಆಸ್ತಿಗಳಿಗೆ ಸಂಬಂಧಿಸಿದಂತೆ ಶಿಲ್ಕುಗಳನ್ನು ಖಚಿತಪಡಿಸಿಕೊಳ್ಳದಿರುವುದು ಹಾಗೂ ಅವುಗಳ ಸಮನ್ವಯಗೊಳಿಸುವಿಕೆಯಿಂದ ಲಾಭ/ನಷ್ಟ ಮತ್ತು ಆಸ್ತಿಗಳು/ಜವಾಬ್ದಾರಿಗಳ ಮೇಲೆ ಸಂಭವಿಸಬಹುದಾದ ಪ್ರಭಾವಗಳು, ಯಾವುದಾದರೂ ಇದ್ದಲ್ಲಿ ಖಚಿತಪಡಿಸಿಕೊಳ್ಳಲು ಸಾಧ್ಯವಿರುವುದಿಲ್ಲ.

22. ನಮಗೆ ನೀಡಲಾದಂತಹ ವಿವರಣೆಗಳಂತೆ, ನಿಗಮವು ಕರ್ನಾಟಕ ಸರ್ಕಾರದಿಂದ ಈ ಹಿಂದೆ ರೂ.4,00,00,000 ಮೊತ್ತದಷ್ಟು ಭದ್ರತೆಯಿಂದ ಕೂಡಿರದ ಸಾಲವನ್ನು ಪಡೆದುಕೊಂಡಿದ್ದಿತು ಹಾಗೂ ಅದು ಸಾಲದ ಮೂಲ ಷರತ್ತುಗಳ ಅನುಸಾರ ಮರುಪಾವತಿಸಲು ನಿಗದಿತ ದಿನಾಂಕವನ್ನು ಮಿತಿಮೀರಿದ್ದಿತು. ಮುಂದುವರೆದು, ಇತರೆ ಚಾಲ್ತಿ ಜವಾಬ್ದಾರಿಗಳಿಗೆ ಸಂಬಂಧಿತ ಟಿಪ್ಪಣಿ ಸಂಖ್ಯೆ 9ರಲ್ಲಿ ಬಹಿರಂಗಪಡಿಸಿರುವಂತೆ ಆಸ್ತಿ–ಜವಾಬ್ದಾರಿ ತ:ಖೆಯ ದಿನಾಂಕದಲ್ಲಿದ್ದಂತೆ 'ರೂ.5,55,49,397/–ರಷ್ಟು ಮೊತ್ತದ ಬಡ್ಡಿ ಪಾವತಿಯು ಬಾಕಿಯಿದ್ದಿತು. ಈ ನಿಟ್ಟಿನಲ್ಲಿ ಪ್ರಸಕ್ತ ಸಾಲಿನ ಅಂತ್ಯದಲ್ಲಿದ್ದಂತೆ ಉಳಿದಿರುವ ಶಿಲ್ಕಿಗೆ ಸಂಬಂಧಿಸಿದಂತೆ ಸಂಬಂಧಿತ ಇಲಾಖೆಯಿಂದ ಖಚಿತಪಡಿಸಿಕೊಂಡಿರುವಿಕೆಗೆ ಸಂಬಂಧಿಸಿದಂತೆ ಅಥವಾ ಸರ್ಕಾರಕ್ಕೆ ಪಾವತಿಸಲು ಬಾಕಿ ಉಳಿದಿರುವ ಅಂತಿಮ ಶಿಲ್ಕಿಗೆ ಸಂಬಂಧಿಸಿದಂತೆ ಖಚಿತಪಡಿಸಿಕೊಂಡಿರುವುದಕ್ಕೆ ಸಂಬಂಧಿತ ದಾಖಲೆಗಳನ್ನು ನಮಗೆ ಒದಗಿಸಲಿಲ್ಲ.

23. ಕ್ರೋಡೀಕೃತ ಹಣಕಾಸು ತ:ಖ್ತೆಗಳನ್ನು ಸಮೀಕ್ಷಿಸಲಾಗಿ, ಷೆಡ್ಯೂಲು ಖಖಖರ ನಿರ್ದೇಶನಗಳನ್ನು ಅಳವಡಿಸಿಕೊಳ್ಳಲಾಗಿದ್ದಿತಾದರೂ, ಷೆಡ್ಯೂಲು ಖಖಖರ ಅಗತ್ಯತೆಗಳನ್ನು ಸಂಪೂರ್ಣವಾಗಿ ಅನುಸರಿಸಿರಲಿಲ್ಲ ಎಂಬುದನ್ನು ಗಮನಿಸಲಾಯಿತು. ಈ ನಿಟ್ಟಿನಲ್ಲಿ ಗಮನಿಸಲಾದಂತಹ ಕೆಲವು ನಿರ್ದಿಷ್ಟ ಅಂಶಗಳನ್ನು ಈ ಕೆಳಗೆ ವಿವರಿಸಲಾಗಿದೆ :

I. ಟಿಪ್ಪಣಿ ಸಂಖ್ಯೆ 5ರಲ್ಲಿ ಬಹಿರಂಗಪಡಿಸಲಾಗಿರುವ ದೀರ್ಘಾವಧಿ ಸಾಲಗಳು ಕರ್ನಾಟಕ ಸರ್ಕಾರದ ವಿವಿಧ ಸಂಸ್ಥೆಗಳಿಂದ ಪಡೆದುಕೊಳ್ಳಲಾಗಿರುವ ರೂ.4.00 ಕೋಟಿ ಮೊತ್ತದಷ್ಟು ಸಾಲವನ್ನು ಒಳಗೊಂಡಿರುತ್ತದೆ ಹಾಗೂ ಈ ಶಿಲ್ಕು ಹಿಂದಿನ ಸಾಲಿನಿಂದ ಮುಂದುವರೆದುಕೊಂಡು ಬಂದಿರುತ್ತದೆ. ಈ ಸಾಲಗಳಿಗೆ ಸಂಬಂಧಿತ ಷರತ್ತುಗಳು ಈ ಸಾಲಗಳು ಮರುಪಾವತಿಗಾಗಿನ ದಿನಾಂಕಗಳನ್ನು ಮಿತಿಮೀರಿರುತ್ತವೆ ಎಂಬುದನ್ನು ತೋರಿಸಿಕೊಟ್ಟವು ಮತ್ತು ಆದ್ದರಿಂದ ಈ ಸಾಲಗಳನ್ನು ಅಲ್ಪಾವಧಿ ಸಾಲಗಳು ಎಂಬುದಾಗಿ ವರ್ಗೀಕರಿಸಬೇಕಿದ್ದಿತು.

II. ರೂ.4,59,40,890 ಮೊತ್ತದಷ್ಟು ಇತರೆ ದೀರ್ಘಾವಧಿ ಜವಾಬ್ದಾರಿಗಳು ಪ್ರತಿನಿಧಿಗಳು, ಗುತ್ತಿಗೆದಾರರುಗಳಿಂದ ವಿವಿಧ ಭದ್ರತಾ ಠೇವಣಿಗಳು ಹಾಗೂ ಸಂಗ್ರಹಿಸಲಾಗಿದ್ದ ಇತರೆ ಬಾಡಿಗೆ ಠೇವಣಿಗಳನ್ನು ಒಳಗೊಂಡಿರುವುದು. ಈ ನಿಟ್ಟಿನಲ್ಲಿ ವಾಯಿದೆ ದಿನಾಂಕದೊಂದಿಗೆ ವೈಯಕ್ತಿಕ ವ್ಯಕ್ತಿವಾರು ಐಟಂವಾರು ವಿವರಗಳನ್ನು ಒದಗಿಸಲಿಲ್ಲ ಹಾಗೂ ಈ ಜವಾಬ್ದಾರಿಗಳನ್ನು ಚಾಲ್ತಿ ಮತ್ತು ಚಾಲ್ತಿಯೇತರವುಗಳನ್ನಾಗಿ ವರ್ಗೀಕರಿಸಿರುವುದಿಲ್ಲ.

III. ಟಿಪ್ಪಣಿ ಸಂಖ್ಯೆ 17ರಲ್ಲಿ ರೂ.4,98,49,654/–ರಷ್ಟು ವ್ಯಾಪಾರವ್ಯವಹಾರಗಳಿಗೆ ಸಂಬಂಧಿಸಿದಂತೆ ಸ್ವೀಕರಿಸಬೇಕಾದವುಗಳನ್ನು ಬಹಿರಂಗಪಡಿಸಲಾಗಿರುವುದು. ಈ ನಿಟ್ಟಿನಲ್ಲಿ ನಿಗಮವು ಬಿಲ್ಲುವಾರು/ತಂಡವಾರು ಬಾಕಿಯಿರುವ ವಿವರಗಳನ್ನು ಸಮರ್ಪಕವಾಗಿ ನಿರ್ವಹಿಸಿರುವುದಿಲ್ಲ ಹಾಗೂ ಹಣಕಾಸು ತ:ಖ್ತೆಗಳಲ್ಲಿ 31 ಮಾರ್ಚ್ 2020ರ ಅಂತ್ಯದಲ್ಲಿದ್ದಂತೆ 6 ತಿಂಗಳುಗಳಿಗೂ ಮೀರಿದಂತೆ ಇರುವ ಬಾಕಿಗಳಿಗೆ ಸಂಬಂಧಿಸಿದಂತೆ ಸಮರ್ಪಕ ವರ್ಗೀಕರಣವನ್ನು ಮಾಡಿರುವುದಿಲ್ಲ. ಮೇಲೆ ತಿಳಿಸಿರುವಂತೆ, ವ್ಯಾಪಾರವ್ಯವಹಾರಗಳಿಗೆ ಸಂಬಂಧಿಸಿದಂತೆ ಸ್ವೀಕರಿಸಬೇಕಾಗಿರುವವುಗಳ ಅಡಿಯಲ್ಲಿ ಆಸ್ತಿ–ಜವಾಬ್ದಾರಿ ದಿನಾಂಕದಲ್ಲಿದ್ದಂತೆ ರೂ.2,24,40,972/–ರಷ್ಟು ಮೊತ್ತವು ಬಾಕಿಯಿದ್ದಿತು.

ಸಹಭಾಗಿ ಕಂಪನಿ ಜಂಗಲ್ ಲಾಡ್ಜಸ್ ಅಂಡ್ ರೆಸಾರ್ಟ್ಸ್ ಲಿಮಿಟೆಡ್‌ನ ಲೆಕ್ಕಪರಿಶೋಧಕರು ತಮ್ಮ 2 ಡಿಸೆಂಬರ್ 2020ರ ವರದಿಯ ಮೂಲಕ ನೀಡಿರುವಂತಹ ಈ ಕೆಳಗಿನ ಷರತ್ತುಬದ್ಧ ಅಭಿಪ್ರಾಯಗಳ ಕಡೆಗೂ ಸಹ ಗಮನವನ್ನು ಸೆಳೆಯಲಾಗುತ್ತಿದೆ :

1. ಸಂಸ್ಥೆಯ ಹಣಕಾಸು ಸ್ಥಿತಿಗತಿಯ ಮೇಲೆ ಕೋವಿಡ್ – 19ರ ಪ್ರಭಾವಕ್ಕೆ ಸಂಬಂಧಿಸಿದಂತೆ ನಾವು ಈ ಕೆಳಗಿನ ಅಂಶಗಳನ್ನು ವರದಿ ಮಾಡುತ್ತಿರುವೆವು :

ಎ. 23 ಮಾರ್ಚ್‌ನಿಂದ 31 ಮಾರ್ಚ್ 2020ರ ಅವಧಿಯಲ್ಲಿ ಸಂಸ್ಥೆಯ ಕಾರ್ಯಚಟುವಟಿಕೆಗಳನ್ನು ಸ್ಥಗಿತಗೊಳಿಸಲಾಗಿದ್ದಿತಾದ್ದರಿಂದ ಇದಕ್ಕೆ ಸಂಬಂಧಿಸಿದಂತೆ ಪ್ರಸಕ್ತ ಸಾಲಿನ ವ್ಯಾಪಾರವ್ಯವಹಾರ ಕಾರ್ಯಾಚರಣೆಗಳು, ವರಮಾನ, ನಗದು ಹರಿವು, ಇತ್ಯಾದಿಗಳನ್ನು ಆಡಳಿತ ಮಂಡಳಿಯು ಸೂಕ್ತವಾಗಿ ನಿರ್ಧಾರಣೆ ಮಾಡಿತು ಹಾಗೂ ಈ ಅವಧಿಯಲ್ಲಿ ಪ್ರವಾಸಿಗರಿಗೆ ರೆಸಾರ್ಟುಗಳನ್ನು ಕಾಯ್ದಿರಿಸುವಿಕೆಯನ್ನು ರದ್ದುಗೊಳಿಸಲಾಗಿದ್ದಿತಾದ್ದರಿಂದ ರೂ.3,22,55,703.00ರಷ್ಟು ಮೊತ್ತವನ್ನು ಮರುಪಾವತಿಸಲಾಯಿತು ಹಾಗೂ ಈ ನಿಟ್ಟಿನಲ್ಲಿ ಹಿಂದಿನ ಸಾಲಿನ ಮಾರ್ಚ್ 2019ರ ನಷ್ಟದ ಮೊತ್ತ ರೂ.2,23,60,623.00ಕ್ಕೆ ಹೋಲಿಸಿದಂತೆ ಕೋವಿಡ್ – 19ರ ಕಾರಣ ಸಂಭವಿಸಿದ ನಷ್ಟವು ಗಮನಾರ್ಹವಾಗಿರಲಿಲ್ಲ ಹಾಗೂ 23 ಮಾರ್ಚ್ 2020ರಲ್ಲಿದ್ದಂತೆ ಹೊಂದಲಾಗಿದ್ದ ಹಾಳಾಗುವಂತಹ ಸರಕುಸಾಮಗ್ರಿಗಳ ದಾಸ್ತಾನು ನಷ್ಟದ ಪರಿಮಾಣವನ್ನು ಅಂದಾಜು ಮಾಡಲು ಒಂದು ವಿಷಯಕ ಅಂಶವಾಗಿರಲಿಲ್ಲ.

ಬಿ. ವರ್ಷಾಂತ್ಯದನಂತರದಲ್ಲಿ ಹಾಗೂ ನಮ್ಮ ವರದಿಯನ್ನು ಸಲ್ಲಿಸುವುದಕ್ಕೆ ಮೊದಲಿನ ಘಟನೆಗಳೆಂದರೆ ರೆಸಾರ್ಟುಗಳು 8 ಜೂನ್ 2020ರಂದು ಪ್ರಾರಂಭಗೊಂಡಿದ್ದವು ಹಾಗೂ ಆಡಳಿತ ಮಂಡಳಿಯು ಹಿಂದಿನ ಸಾಲಿನ ಏಪ್ರಿಲ್‌ನಿಂದ ಜೂನ್ 2020ರ ಅವಧಿಗೆ ಹೋಲಿಸಿದಂತೆ ಕೋವಿಡ್ –19ರ ಕಾರಣ ಕಾರ್ಯಚಟುವಟಿಕೆಗಳು ಸ್ಥಗಿತಗೊಂಡಿದ್ದ ಅವಧಿಯಲ್ಲಿ ರೆಸಾರ್ಟುಗಳ ಕಾಯ್ದಿರಿಸಿರುವಿಕೆಗಳನ್ನು ರದ್ದುಗೊಳಿಸಿದ ಕಾರಣ ಸಂಭವಿಸಿದ ನಷ್ಟವನ್ನು ರೂ.15,18,47,277.00ರಷ್ಟು ಎಂಬುದಾಗಿ ನಿರ್ಧಾರಣೆ ಮಾಡಿತು ಮತ್ತು ಅಂದಾಜು ಮಾಡಿತು ಹಾಗೂ ರೂ.28,49,673/–ರಷ್ಟು ಮೊತ್ತವನ್ನು ಪ್ರವಾಸಿಗರಿಗೆ ಮರುಪಾವತಿಸಲಾಗಿದ್ದಿತು.

ಸಿ. ಕಾರ್ಯಾಚರಣೆಗಳನ್ನು 8 ಜೂನ್ 2020ರಿಂದ ಪ್ರಾರಂಭಿಸಲಾಯಿತು ಹಾಗೂ ಲೆಕ್ಕಪರಿಶೋಧನಾ ವರದಿಯ ದಿನಾಂಕದವರೆಗು, ಅಂದರೆ ಅಕ್ಟೋಬರ್‌ವರೆವಿಗೂ ರೆಸಾರ್ಟುಗಳ ಕಾಯ್ದಿರಿಸಿರುವಿಕೆಗಳನ್ನು ರದ್ದುಗೊಳಿಸಲಾಗಿದ್ದಿತು ಹಾಗೂ ರೂ.40,03,817/–ರಷ್ಟು ಮೊತ್ತವನ್ನು ಮರುಪಾವತಿಸಲಾಗಿದ್ದಿತು. ಸೆಪ್ಟಂಬರ್ ಮತ್ತು ಅಕ್ಟೋಬರ್ ವಹಿವಾಟನ್ನು ವಹಿವಾಟು ಹೆಚ್ಚಳಗೊಂಡಿದ್ದ ಹಿಂದಿನ ಸಾಲಿನ ಅದೇ ಅವಧಿಯೊಂದಿಗೆ ಹೋಲಿಕೆ ಮಾಡಲಾಗಿ ರೂ.42,98,171/–ರಷ್ಟು ಹೆಚ್ಚಳಗೊಂಡಿದ್ದಿತು. ಅದು, ಕಂಪನಿಯು ಕೋವಿಡ್ – 19ರ ಕಾರಣ ವ್ಯಾಪಾರವ್ಯವಹಾರವನ್ನು ಸ್ಥಗಿತಗೊಳಿಸಿದ್ದ ಕಾರಣ ನಷ್ಟವನ್ನು ಅನುಭವಿಸಲಿಲ್ಲ ಎಂಬುದನ್ನು ಸೂಚಿಸುತ್ತಿದ್ದಿತು ಮತ್ತು ಆದ್ದರಿಂದ ವ್ಯಾಪಾರವ್ಯವಹಾರದ ಸ್ವರೂಪ ಹಾಗೂ ಕೋವಿಡ್ – 19ರ ಕಾರಣ ಅಂದಾಜು ಮಾಡಲಾದಂತಹ ಹಣಕಾಸಿನ ನಷ್ಟವನ್ನು ಬಹಿರಂಗಪಡಿಸಲಾಗಿರುವುದು, ಆದರೆ ಹಣಕಾಸು ತ:ಖ್ತೆಗಳಲ್ಲಿ ಯಾವುದೇ ಹೊಂದಾಣಿಕೆಗಳನ್ನು ಮಾಡಿರುವುದಿಲ್ಲ.

ಡಿ. ಕೋವಿಡ್ – 19ರ ಕಾರಣ ಸಂಭವಿಸಿದ ಅಂದಾಜು ಹಣಕಾಸು ನಷ್ಟಗಳನ್ನು ಬಹಿರಂಗಪಡಿಸಲಾಗಿರುವುದು, ಆದರೆ ಹಣಕಾಸು ತ:ಖ್ತೆಗಳಲ್ಲಿ ಯಾವುದೇ ಹೊಂದಾಣಿಕೆಗಳನ್ನು ಮಾಡಿರುವುದಿಲ್ಲ.

ಇ. ನಾವು ಪಡೆದುಕೊಂಡಂತಹ ಮಾಹಿತಿಯಂತೆ, ನಮಗೆ ನೀಡಲಾದಂತಹ ವಿವರಣೆಗಳಂತೆ ಹಾಗೂ ನಮ್ಮ ಅರಿವಿಗೆ ಬಂದಂತೆ ಹಾಗೂ ನಾವು ಹೊಂದಿರುವ ವಿಶ್ವಾಸದಂತೆ, ಕೋವಿಡ್ – 19ರ ಕಾರಣ ವ್ಯಾಪಾರವ್ಯವಹಾರವನ್ನು ಮುಚ್ಚಿದ್ದರ ಕಾರಣ ಕಂಪನಿಯ ಯಾವುದೇ ಆಸ್ತಿಯೂ ದುರ್ಬಲಗೊಂಡಿರುವುದಿಲ್ಲ.

ಎಫ್. ಕೋವಿಡ್ – 19ರ ಪ್ರಭಾವವನ್ನು ಹಾಗೂ ವ್ಯಾಪಾರವ್ಯವಹಾರಗಳು ಮುಂದುವರೆದುಕೊಂಡು ಹೋಗುತ್ತಿರುವ ಸಂಸ್ಥೆಯಾಗಿ ಲೆಕ್ಕವನ್ನಿಡುವಿಕೆಯೂ ಸೇರಿದಂತೆ ಆಡಳಿತ ಮಂಡಳಿಯ ನಿರ್ಧಾರಣೆಯನ್ನು ಸಂಬಂಧಿಸಿದಂತೆ ಹಣಕಾಸು ತ:ಖ್ತೆಗಳಲ್ಲಿ ಲೆಕ್ಕಪತ್ರಗಳ ಅವಿಭಾಜ್ಯ ಭಾಗವಾಗಿರುವಂತಹ ಟಿಪ್ಪಣಿಗಳ ಅಡಿಯಲ್ಲಿ ಸೂಕ್ತ ರೀತಿಯಲ್ಲಿ ಬಹಿರಂಗಪಡಿಸಲಾಗಿರುವುದು.

2. ಟಿಪ್ಪಣಿ ಸಂಖ್ಯೆ 2 ಸರ್ಕಾರದಿಂದ ಸ್ವೀಕರಿಸಲಾದಂತಹ ಅನುದಾನಗಳನ್ನು ನಿರ್ವಹಿಸಿದ್ದು ಮತ್ತು ಪರಿಗಣಿಸಿದ್ದು ಹಾಗೂ ಅಂತಹ ಅನುದಾನಗಳಿಂದ ಆಸ್ತಿಯನ್ನು ಸೃಷ್ಟಿಸಿದ್ದರ ಬಗ್ಗೆ ಹೇಳುವುದಾದರೆ, ಅವುಗಳು – ಸರ್ಕಾರದ ಅನುದಾನಗಳನ್ನು ಲೆಕ್ಕ ಇಡುವುದಕ್ಕೆ ಸಂಬಂಧಿತ ಮಾನದಂಡ ಎಎಸ್–12ರ ಅನುಸಾರ ಇರುವುದಿಲ್ಲ.

2.1 31 ಮಾರ್ಚ್ 1998ಕ್ಕೆ ಮುಂಚಿನ ಅವಧಿಯಲ್ಲಿ ಸರ್ಕಾರದಿಂದ ಸ್ವೀಕರಿಸಲಾದಂತಹ ಅನುದಾನಗಳನ್ನು ಬಂಡವಾಳ ಹಾಗೂ ವರಮಾನ ಅನುದಾನಗಳೆಂಬುದಾಗಿ ವರ್ಗೀಕರಿಸಿರಲಿಲ್ಲ/ಪ್ರತ್ಯೇಕಿಸಿರಲಿಲ್ಲ ಹಾಗೂ ರೂ.2,97,20,876/–ರಷ್ಟು ಮೊತ್ತವನ್ನು ಬಂಡವಾಳ ಅನುದಾನಗಳು ಎಂಬುದಾಗಿ ಪರಿಗಣಿಸಲಾಗಿದ್ದಿತು. ಅವುಗಳಿಗೆ ಸಂಬಂಧಿಸಿದಂತೆ, 31 ಮಾರ್ಚ್ 1998ಕ್ಕೆ ಮುಂಚಿನ ಅವಧಿಗಾಗಿ ಯೋಜನೆವಾರು ಅನುದಾನಗಳ ಸ್ವೀಕೃತಿ ಹಾಗೂ ವೆಚ್ಚಗಳ ವಿವರಗಳನ್ನು ನಮಗೆ ಒದಗಿಸಲಿಲ್ಲ, ಆದ್ದರಿಂದ ಬಂಡವಾಳ ಮತ್ತು ವರಮಾನ ಅನುದಾನಗಳ ಹಂಚಿಕೆಯ ಬಗ್ಗೆ ನಾವು ಟೀಕೆಟಿಪ್ಪಣಿ ಮಾಡಲು ಸಾಧ್ಯವಾಗಲಿಲ್ಲ.

2.2 ರೂ.2,97,20,876/–ರಷ್ಟು ಮೊತ್ತದ ಬಂಡವಾಳ ಅನುದಾನವನ್ನು ಪರಿಗಣಿಸಿರುವುದು, 31 ಮಾರ್ಚ್ 1998ರವರೆಗೆ ಸ್ವೀಕರಿಸಲಾದ ಬಂಡವಾಳ ಅನುದಾನದಿಂದ ಸೃಷ್ಟಿಸಲಾದ ಆಸ್ತಿಗಳ ಮೇಲೆ ಕೋರಲಾಗಿರುವ ರೂ.39,12,277/–ರಷ್ಟು ಮೊತ್ತವನ್ನು ಪೂರ್ವಾವಧಿಯ ವರಮಾನ ಎಂಬುದಾಗಿ ಪರಿಗಣಿಸಲಾಗಿರುವುದು. ಅದೇ ರೀತಿಯಲ್ಲಿ, ರೂ.1,72,50,000/–ರಷ್ಟು ಮೊತ್ತದ ಬಂಡವಾಳ ಅನುದಾನ, 31 ಮಾರ್ಚ್ 1998ರವರೆಗೆ ಸ್ವೀಕರಿಸಲಾದ ಬಂಡವಾಳ ಅನುದಾನದಿಂದ ಸೃಷ್ಟಿಸಲಾದ ಆಸ್ತಿಗಳ ಮೇಲೆ ಕೋರಲಾಗಿರುವ ಸವಕಳಿಯ ಮೊತ್ತ ರೂ.22,70,686/–ರಷ್ಟನ್ನು ಪೂರ್ವಾವಧಿಯ ವರಮಾನ ಎಂಬುದಾಗಿ ಪರಿಗಣಿಸಲಾಗಿರುವುದು.

ಪ್ರಸಕ್ತ ಸಾಲಿನಲ್ಲಿ ಲಾಭ ಮತ್ತು ನಷ್ಟ ತ:ಖ್ತೆಗೆ ಜಮೆ ಮಾಡದಿರುವ ಪ್ರಮಾಣಾನುಗುಣವಾದಂತಹ ಅನುದಾನದ ಹಂಚಿಕೆಯನ್ನು ಇದೀಗ ಪರಿಮಾಣೀಕರಿಸಲಾಗಿರುವುದು ಹಾಗೂ ಲಾಭ ಮತ್ತು ನಷ್ಟ ತ:ಖ್ತೆಯಲ್ಲಿ ಪೂರ್ವಾವಧಿ ಐಟಂ ಎಂಬುದಾಗಿ ಲೆಕ್ಕಕ್ಕೆ ತೆಗೆದುಕೊಳ್ಳಲಾಗಿರುವುದು ಹಾಗೂ ಇಷ್ಟರಮಟ್ಟಿಗೆ ಕಂಪನಿಯ ವರಮಾನವು ಹೆಚ್ಚಳಗೊಂಡಿರುವುದು. ವಿವರಗಳು ಈ ಕೆಳಗಿನಂತಿರುವವು :

ಕ್ರಮ ಸಂಖ್ಯೆ	ವಿವರಗಳು	ಪರಿಗಣಿಸಲಾಗಿರುವ ಬಂಡವಾಳ ಅನುದಾನಗಳು	ಪೂರ್ವಾವಧಿಯ ವರಮಾನ ಎಂಬುದಾಗಿ ಪರಿಗಣಿಸಲಾಗಿರುವ ಸವಕಳಿ
01	ಬಂಡವಾಳ ಅನುದಾನಗಳು (ಕರ್ನಾಟಕ ಸರ್ಕಾರ)	2,97,20,876	39,12,277
02	ರಾತ್ರಿ ಸಫಾರಿ – ಬಂಡವಾಳ ಅನುದಾನ (ಕರ್ನಾಟಕ ಸರ್ಕಾರ)	1,72,50,000	22,70,686
	ಒಟ್ಟು	**4,69,70876**	**61,82,963**

2.3 ರೂ.17,19,67,979/–ರಷ್ಟು (ರೂಪಾಯಿಗಳು ಹದಿನೇಳು ಕೋಟಿ ಹತ್ತೊಂಬತ್ತು ಲಕ್ಷ ಅರವತ್ತೇಳು ಸಾವಿರ ಒಂಬೈನೂರ ಎಪ್ಪತ್ತ ಒಂಬತ್ತು ಮಾತ್ರ) ಬಳಸಿಕೊಳ್ಳದೇ ಇರುವಂತಹ ಬಂಡವಾಳ ಅನುದಾನಗಳು ಹಾಗೂ ಖರ್ಚು ಮಾಡದೇ ಉಳಿದಿರುವಂತಹ ರೂ.4,36,03,280/–ರಷ್ಟು (ರೂಪಾಯಿಗಳು ನಾಲ್ಕು ಕೋಟಿ ಮೂವತ್ತ ಆರು ಲಕ್ಷ ಮೂರು ಸಾವಿರದ ಇನ್ನೂರ ಎಂಬತ್ತು ಮಾತ್ರ) ಮೊತ್ತದ ವರಮಾನ ಅನುದಾನಗಳನ್ನು ಚಾಲ್ತಿಯೇತರ ಜವಾಬ್ದಾರಿಗಳು ಎಂಬುದಾಗಿ ಪರಿಗಣಿಸುವ ಬದಲು ಮೀಸಲಿರಿಸಿರುವಿಕೆಗಳು ಮತ್ತು ಮಿಗುತಾಯಗಳು ಎಂಬುದಾಗಿ ಪರಿಗಣಿಸಲಾಗಿರುವುದು.

2.4 ಬಳಸಿಕೊಳ್ಳದೇ ಇರುವಂತಹ ಅನುದಾನಗಳಿಗೆ ಸಂಬಂಧಿತ ನಿಶ್ಚಿತ ಅವಧಿ ಠೇವಣಿಗಳ ಮೇಲಿನ ಬಡ್ಡಿ ವರಮಾನವನ್ನು ಬಂಡವಾಳೀಕರಿಸಿರುವುದಿಲ್ಲ ಹಾಗೂ ಬಂಡವಾಳ ಲೆಕ್ಕಕ್ಕೆ ಹಾಕಿರುವುದಿಲ್ಲ ಹಾಗೂ ಅವುಗಳನ್ನು ಕಾರ್ಯಾಚರಣೆಗಳಿಂದ ಗಳಿಸಲಾದಂತಹ ವರಮಾನ ಎಂಬುದಾಗಿ ಲೆಕ್ಕಕ್ಕೆ ತೆಗೆದುಕೊಳ್ಳಲಾಗಿರುವುದು. ಬಳಸಿಕೊಳ್ಳದೇ ಉಳಿದಿರುವಂತಹ ಬಂಡವಾಳ ಅನುದಾನದ ಹೂಡಿಕೆಯ ಮೇಲೆ ಗಳಿಸಲಾಗಿರುವಂತಹ ರೂ.57,14,323/–ರಷ್ಟು (ರೂಪಾಯಿಗಳು ಐವತ್ತ ಏಳು ಲಕ್ಷ ಹದಿನಾಲ್ಕು ಸಾವಿರದ ಮುನ್ನೂರ ಇಪ್ಪತ್ತ ಮೂರು ಮಾತ್ರ) ಬಡ್ಡಿಯನ್ನು ಬಂಡವಾಳೀಕರಿಸಲಾಗಿರುವುದು ಹಾಗೂ ಬಂಡವಾಳ ಲೆಕ್ಕಕ್ಕೆ ಜಮೆ ಮಾಡಲಾಗಿರುವುದು. ಬಳಸಿಕೊಳ್ಳದೇ ಉಳಿದಿದ್ದಂತಹ ಬಂಡವಾಳ ಅನುದಾನಗಳ ಮೇಲೆ ಗಳಿಸಲಾದ ಬಡ್ಡಿಯನ್ನು ಕಂಪನಿಯು ಬಡ್ಡಿ ವರಮಾನ ಎಂಬುದಾಗಿ ಪರಿಗಣಿಸಿ ಲಾಭ ಮತ್ತು ನಷ್ಟ ತ:ಖ್ತೆಗೆ ಜಮೆ ಮಾಡುತ್ತಿದ್ದಿತಾದ್ದರಿಂದ, ಇದು ಕಂಪನಿಯ ಈ ಮುಂಚಿನ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಕಾರ್ಯನೀತಿಯನ್ನು ಬದಲಾವಣೆಗೊಳಿಸಿದಂತಾಗಿರುವುದು.

2.5 ಬಳಸಿಕೊಳ್ಳದೇ ಉಳಿದಿದ್ದಂತಹ ಬಂಡವಾಳ ಅನುದಾನದ ಹಣಕಾಸಿಗೆ ಸಂಬಂಧಿತ ನಿಶ್ಚಿತ ಅವಧಿ ಠೇವಣಿಗಳು ರೂ.10,73,94,238/–ರಷ್ಟು (ರೂಪಾಯಿಗಳು ಹತ್ತು ಕೋಟಿ ಎಪ್ಪತ್ತ ಮೂರು ಲಕ್ಷ ತೊಂಬತ್ತ ನಾಲ್ಕು ಸಾವಿರದ ಇನ್ನೂರ ಮೂವತ್ತ ಎಂಟು ಮಾತ್ರ) ಆಗಿದ್ದಿತು. ಆದಾಗ್ಯೂ, ಬಳಸಿಕೊಳ್ಳದೇ ಇದ್ದಂತಹ ಬಂಡವಾಳ ಅನುದಾನಗಳು ರೂ.17,19,67,979/–ರಷ್ಟು (ರೂಪಾಯಿಗಳು ಹದಿನೇಳು ಕೋಟಿ ಹತ್ತೊಂಬತ್ತು ಲಕ್ಷ ಅರವತ್ತ ಏಳು ಸಾವಿರ ಒಂಬೈನೂರ ಎಪ್ಪತ್ತ ಒಂಬತ್ತು ಮಾತ್ರ) ಆತದ್ದಿತು.

2.6 ಆಸ್ತಿಗಳ ದುರ್ಬಲಗೊಳ್ಳುವಿಕೆಗೆ ಅನುವು ಮಾಡದಿರುವುದಕ್ಕೆ ಸಂಬಂಧಿಸಿದಂತೆ, ಹಿಂದಿನ ಸಾಲಿನ ವರದಿಯ ಮುಂದುವರಿದ ಭಾಗವಾಗಿ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಮಾನದಂಡ – 28ರ ಅನುಸಾರ ಅಗತ್ಯತೆಯಿರುವಂತೆ ಆಸ್ತಿಗಳ ದುರ್ಬಲಗೊಳ್ಳುವಿಕೆಗಾಗಿ ಅನುವನ್ನು ಇನ್ನೂ ಮಾಡಬೇಕಾಗಿದೆ. ಕಂಪನಿಯ ವ್ಯಾಪಾರ–ವ್ಯವಹಾರಗಳ ಉದ್ದೇಶಕ್ಕಾಗಿ ಬಳಸುವ ಸಲುವಾಗಿ ಯಾವುದೇ ಮೌಲ್ಯವನ್ನೂ ಹೊಂದಿರದೆ ದುರ್ಬಲಗೊಂಡಿದ್ದು ನಿರುಪಯುಕ್ತವಾಗಿರುವಂತಹ ಆಸ್ತಿಗಳನ್ನು ಗುರುತಿಸಬೇಕು ಹಾಗೂ ಅಂತಹ ದುರ್ಬಲಗೊಂಡಿರುವಂತಹ ಆಸ್ತಿಗಳ ಮೌಲ್ಯವನ್ನು ದಾಖಲೆಗಳಿಂದ ತೆಗೆದುಹಾಕಬೇಕು (ರೈಟ್ ಆಫ್) ಎಂಬುದಾಗಿ ಈ ಮೂಲಕ ಸಲಹೆಯನ್ನು ನೀಡುತ್ತಿರುವೆವು.

2.7 ಸಣ್ಣಪುಟ್ಟ ಸಾಲಗಾರರುಗಳು, ಸಣ್ಣಪುಟ್ಟ ಸಾಲದಾತರುಗಳು ಹಾಗೂ ಸಾಲಗಳು ಮತ್ತು ಮುಂಗಡಗಳ ಶಿಲ್ಕುಗಲು ಖಚಿತಪಡಿಸಿಕೊಳ್ಳುವಿಕೆಯ ಷರತ್ತಿಗೆ ಒಳಪಟ್ಟಿರುತ್ತವೆ. ಸಂಬಂಧಿತ ಮಾಹಿತಿಯ ಅನುಪಸ್ಥಿತಿಯಲ್ಲಿ, ಸಣ್ಣಪುಟ್ಟ ಸಾಲಗಾರರುಗಳಿಂದ ವಸೂಲಾತಿ, ಸಣ್ಣಪುಟ್ಟ ಸಾಲದಾತರುಗಳಿಗೆ ಮರುಪಾವತಿ, ಸಾಲಗಳು ಮತ್ತು ಮುಂಗಡಗಳ ಮರುಪಾವತಿ, ಇವುಗಳ ಬಗ್ಗೆ ನಾವು ಟೀಕೆಟಿಪ್ಪಣಿಗಳನ್ನು ಮಾಡಲು ಸಾಧ್ಯವಾಗಲಿಲ್ಲ.

2.8 ಹಿಂದಿನ ಸಾಲಿನ ವರದಿಯ ಮುಂದುವರಿದ ಭಾಗವಾಗಿ, ರೂ.51,45,847/–ರಷ್ಟು ಮೊತ್ತದ ವಸೂಲಾತಿಯಾಗಲು ಅನುಮಾನಾಸ್ಪದವಾಗಿರುವ ಸಾಲಗಳಿಗೆ ಅನುವನ್ನು ಮಾಡುವುದಕ್ಕೆ ಸಂಬಂಧಿಸಿದಂತೆ, ಇನ್ನೂ ಅನುಸರಣಾ ಕ್ರಮವನ್ನು ತೆಗೆದುಕೊಳ್ಳಬೇಕಾಗಿರುತ್ತದೆ.

ಸದಸ್ಯರ ಗಮನ ಸೆಳೆಯುವ ಸಲುವಾಗಿ ಒತ್ತಿಹೇಳಲಾಗುತ್ತಿರುವ ವಿಷಯಗಳು :

1. ನಿಗಮವು 31 ಮಾರ್ಚ್ 2014ರವರೆಗೆ ಬಂಡವಾಳೀಕರಿಸಲಾದ ಆಸ್ತಿಗಳಿಗೆ ಕಂಪನಿಗಳ ಅಧಿನಿಯ್ತಮ, 2013ರ ಷೆಡ್ಯೂಲು – ಖಖರ ಅನುಸಾರ ಸವಕಳಿಯನ್ನು ಅನುವು ಮಾಡುತ್ತಿರುವುದಿಲ್ಲ. ಈ ಕಾರಣದಿಂದಾಗಿ ಲೆಕ್ಕಪತ್ರಗಳ ಮೇಲೆ ಭೀರಬಹುದಾದ ಪರಿಣಾಮವನ್ನು ಪರಿಮಾಣೀಕರಿಸಲು ಸಾಧ್ಯವಿರುವುದಿಲ್ಲ.

2. ನಿಗಮವು ಸ್ಥಿರಾಸ್ತಿಗಳ ರಿಜಿಸ್ಟರನ್ನು ನಿರ್ವಹಿಸಿಲ್ಲವಾದ್ದರಿಂದ, ಕಟ್ಟಡಾ/ಭೂಮಿ ಮುಂತಾದ ಆಸ್ತಿಗಳು, ಯಂತ್ರಗಳು/ಸ್ಥಾವರ ಮತ್ತು ಉಪಕರಣಗಳ ಮೌಲ್ಯ ಹಾಗೂ ಅವುಗಳ ಮೇಲಿನ ಸವಕಳಿಯ ಯಥಾರ್ಥತೆಯ ಬಗ್ಗೆ ನಾವು ಯಾವುದೇ ಟೀಕೆಟಿಪ್ಪಣಿಯನ್ನು ಮಾಡಲು ಸಾಧ್ಯವಾಗಲಿಲ್ಲ.

3. ನಿಗಮವು ಎಲ್ಲಾ ಘಟಕಗಳಿಗೆ ಸಂಬಂಧಿಸಿದಂತೆ 31 ಮಾರ್ಚ್ 2020ರಲ್ಲಿದ್ದಂತೆ ಅಂತಿಮ ದಾಸ್ತಾನಿನ ಭೌತಿಕ ಪರಿಶೀಲನೆಯನ್ನು ನಡೆಸಿರುವುದಿಲ್ಲ. ಸವಿವರ ಭೌತಿಕ ಪರಿಶೀಲನಾ ದಾಖಲೆಗಳ ಅನುಪಸ್ಥಿತಿಯಲ್ಲಿ ಘಟಕದ ವ್ಯವಸ್ಥಾಪಕರು ಪ್ರಮಾಣೀಕರಿಸಿದಂತೆ ಅಂತಿಮ ದಾಸ್ತಾನನ್ನು ಹಣಕಾಸು ತ:ಖ್ತೆಗಳಲ್ಲಿ ಪರಿಗಣಿಸಲಾಗಿರುವುದು.

4. ಸರ್ಕಾರಿ ಸಾಲಗಳು, ವ್ಯಾಪಾರವ್ಯವಹಾರಗಳಿಗೆ ಸಂಬಂಧಿಸಿದಂತೆ ಪಾವತಿಸಬೇಕಾಗಿರುವವುಗಳು, ಇತರೆ ಚಾಲ್ತಿ ಜವಾಬ್ದಾರಿಗಳು, ವ್ಯಾಪಾರವ್ಯವಹಾರಗಳಿಗೆ ಸಂಬಂಧಿಸಿದಂತೆ ಸ್ವೀಕರಿಸಬೇಕಾಗಿರುವವುಗಲು ಹಾಗೂ ಇತರೆ ಚಾಲ್ತಿ ಆಸ್ತಿಗಳ ಶಿಲ್ಕುಗಳಿಗೆ ಸಂಬಂಧಿಸಿದಂತೆ ಖಚಿತಪಡಿಸಿಕೊಂಡಿರುವಿಕೆಯ ಅನುಪಸ್ಥಿಯಲ್ಲಿ ಹಾಗೂ ಅವುಗಳ ಸಮನ್ವಯಗೊಳಿಸುವಿಕೆಯಿಂದ ಲಾಭ/ನಷ್ಟ ಮತ್ತು ಆಸ್ತಿಗಳು/ಜವಾಬ್ದಾರಿಗಳ ಮೇಲೆ ಸಂಭವಿಸಬಹುದಾದ ತತ್ಪರಿಣಾಮವು, ಯಾವುದಾದರೂ ಇದ್ದಲ್ಲಿ, ಅವುಗಳನ್ನು ಖಚಿತಪಡಿಸಿಕೊಳ್ಳಲು ಸಾಧ್ಯವಿರುವುದಿಲ್ಲ.

5. ಕರ್ನಾಟಕ ಸರ್ಕಾರವು ಆನೇಕಲ್ಲು ಮತ್ತು ಬಿಳಿಗಿರಿರಂಗನ ಬೆಟ್ಟಗಳಲ್ಲಿ ಅನುದಾನಗಳ ಪೈಕಿಯಿಂದ ಹೋಟೆಲು ಯೋಜನೆಗಳ ನಿರ್ಮಾಣವನ್ನು ನಿಗಮಕ್ಕೆ ವಹಿಸಿತು. ಈ ಯೋಜನೆಗಳನ್ನು ರೂ.2,16,07,919/–ರಷ್ಟು ಮೌಲ್ಯದಲ್ಲಿ ಪ್ರಸಕ್ತ ಸಾಲಿನಲ್ಲಿ ಬಂಡವಾಳೀಕರಿಸಲಾಯಿತು, ಆದಾಗ್ಯೂ, ಇತರೆ ಸ್ಥಳಗಳಲ್ಲಿ ರೂ.46,00,797/–ರಷ್ಟು ಮೌಲ್ಯದಲ್ಲಿ ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿಗಳ ಅಡಿಯಲ್ಲಿ ತೋರಿಸಲಾಗಿದ್ದಿತು, ನಮಗೆ ನೀಡಲಾದ ವಿವರಣೆಗಳಂತೆ ಸಂಬಂಧಿತ ಭೂಮಿಯ ಹಕ್ಕು ಪತ್ರಗಳು ನಿಗಮದ ಹೆಸರಿನಲ್ಲಿ ಇರುವುದಿಲ್ಲ.

6. ನಮಗೆ ನೀಡಲಾದ ವಿವರಣೆಗಳಂತೆ, ನಿಗಮವು ರೂ.4,00,00,000/– ಮೊತ್ತದಷ್ಟು ಭದ್ರತೆಯಿಂದ ಕೂಡಿರದ ಸಾಲವನ್ನು ಕರ್ನಾಟಕ ಸರ್ಕಾರದಿಂದ ಪಡೆದುಕೊಂಡಿದ್ದಿತು, ಈ ಸಾಲವು ಮೂಲ ಸಾಲದ ಷರತ್ತುಗಳ ಅನುಸಾರ ಮರುಪಾವತಿಸಲು ನಿಗದಿತ ದಿನಾಂಕವನ್ನು ಮಿತಿಮೀರಿದ್ದಿತು. ಮುಂದುವರೆದು, ಇತರೆ ಚಾಲ್ತಿ ಜವಾಬ್ದಾರಿಗಳಿಗೆ ಸಂಬಂಧಿತ ಟಿಪ್ಪಣಿ ಸಂಖ್ಯೆ 9ರಲ್ಲಿ ಬಹಿರಂಗಪಡಿಸಿರುವಂತೆ ರೂ.5,55,49,397/–ರಷ್ಟು ಬಡ್ಡಿ ಮೊತ್ತವು ಆಸ್ತಿ–ಜವಾಬ್ದಾರಿ ತ:ಖ್ತೆಯ ದಿನಾಂಕದಲ್ಲಿದ್ದಂತೆ ಪಾವತಿಸಲು ಬಾಕಿಯಿದ್ದಿತು. ಈ ನಿಟ್ಟಿನಲ್ಲಿ ಬಾಕಿಯಿರುವ ಶಿಲ್ಕಿನ ಬಗ್ಗೆ ಸಂಬಂಧಿತ ಇಲಾಖೆಯಿಂದ ಖಚಿತಪಡಿಸಿಕೊಂಡಿರುವ ಬಗ್ಗೆ ದಾಖಲೆಯನ್ನು ನಮಗೆ ಒದಗಿಸಲಿಲ್ಲ ಅಥವಾ ಸರ್ಕಾರಕ್ಕೆ ಪಾವತಿಸಲು ಬಾಕಿ ಉಳಿದಿರುವ ಸಾಲದ ಮೊತ್ತದ ಬಗ್ಗೆ ಖಚಿತಪಡಿಸಿಕೊಂಡಿರಲಿಲ್ಲ.

7. ನಾವು ಈ ಮೂಲಕ ಟಿಪ್ಪಣಿ ಸಂಖ್ಯೆ 45ರ ಕಡೆಗೆ ನಿಮ್ಮ ಗಮನವನ್ನು ಸೆಳೆಯುತ್ತಿರುವೆವು, ಕಂಪನಿಯ ಭವಿಷ್ಯದಲ್ಲಿನ ಕಾರ್ಯಾಚರಣೆಗಳ ಮೇಲೆ ಕೋವಿಡ್ – 19ರ ಪ್ರಭಾವದ ಬಗ್ಗೆ ಕೆಲವು ಅನಿಶ್ಚಿತತೆಗಳು ಇರುವುದಾಗಿ ಈ ಟಿಪ್ಪಣಿಯಲ್ಲಿ ತಿಳಿಸಲಾಗಿರುವುದು. ತನ್ನ ಕಾರ್ಯಚಟುವಟಿಕೆಗಳನ್ನು ಮುಂದುವರೆಸಿಕೊಂಡು ಹೋಗುವ ಬಗ್ಗೆ ಊಹೆಯ ಸೂಕ್ತತೆಯು ಕಂಪನಿಯ ವ್ಯಾಪಾರವ್ಯವಹಾರದ ಮೇಲೆ ಕೋವಿಡ್ – 19ರ ಪ್ರಭಾವವನ್ನು ತೊಡೆದುಹಾಕುವ ಸಲುವಾಗಿ ಕಂಪನಿಯು ಕೈಗೊಳ್ಳುವಂತಹ ವಿವಿಧ ಕ್ರಮಗಳನ್ನು ಸಾಕಾರಗೊಳಿಸುವುದರ ಮೇಲೆ ಅವಲಂಭಿಸಿರುತ್ತದೆ.

ಕ್ರೋಡೀಕೃತ ಹಣಕಾಸು ತ:ಖ್ತೆಗಳು ಮತ್ತು ಅವುಗಳ ಮೇಲಿನ ಲೆಕ್ಕಪರಿಶೋಧಕರುಗಳ ವರದಿಯನ್ನು ಹೊರತುಪಡಿಸಿದಂತೆ ಇತರೆ ಮಾಹಿತಿ ಇತರೆ ಮಾಹಿತಿಗಳನ್ನು ಒದಗಿಸುವಲ್ಲಿ ಕಂಪನಿಯ ವ್ಯವಸ್ಥಾಪನೆಯು ಹಾಗೂ ಕಂಪನಿಯ ನಿರ್ದೇಶಕರುಗಳ ಮಂಡಳಿಯು ಜವಾಬ್ದಾರಿಯುತವಾಗಿರುತ್ತದೆ. ಇತರೆ ಮಾಹಿತಿಗಳು ಕಂಪನಿಯ ವಾರ್ಷಿಕ ವರದಿಯಲ್ಲಿ ಒಳಗೊಂಡಿರುವಂತಹ ಮಾಹಿತಿಯನ್ನು ಒಳಗೊಂಡಿರುತ್ತವೆ, ಆದರೆ ಹಣಕಾಸು ತ:ಖ್ತೆಗಳನ್ನು ಹಾಗೂ ಅವುಗಳ ಮೇಲಿನ ನಮ್ಮ ಲೆಕ್ಕಪರಿಶೋಧನಾ ವರದಿಯನ್ನು ಒಳಗೊಂಡಿರುವುದಿಲ್ಲ.

ಹಣಕಾಸು ತ;ಖ್ತೆಗಳ ಮೇಲಿನ ನಮ್ಮ ಅಭಿಪ್ರಾಯವು ಇತರೆ ಮಾಹಿತಿಗಳನ್ನು ಒಳಗೊಂಡಿರುವುದಿಲ್ಲ ಹಾಗೂ ಅವುಗಳ ಮೇಲೆ ನಾವು ಯಾವುದೇ ರೀತಿಯಲ್ಲಿಯೂ ಭರವಸೆಗಳ ನಿರ್ಣಯವನ್ನು ವ್ಯಕ್ತಪಡಿಸುವುದಿಲ್ಲ.

ಹಣಕಾಸು ತ:ಖ್ತೆಗಳ ನಮ್ಮ ಲೆಕ್ಕಪರಿಶೋಧನೆಯ ಸಂಬಂಧವಾಗಿ, ನಮ್ಮ ಜವಾಬ್ದಾರಿಯು ಇತರೆ ಮಾಹಿತಿಗಳನ್ನು ಓದುವುದಾಗಿರುತ್ತದೆ ಹಾಗೂ ಆ ರೀತಿ ಓದುವ ಸಮಯದಲ್ಲಿ, ಇತರೆ ಮಾಹಿತಿಗಳು ಹಣಕಾಸು ತ:ಖ್ತೆಗಳೊಂದಿಗೆ ಅಥವಾ ನಾವು ನಮ್ಮ ಲೆಕ್ಕಪರಿಶೋಧನೆಯಲ್ಲಿ ಪಡೆದುಕೊಂಡಿರುವಂತಹ ಅರಿವು/ಮಾಹಿತಿಗಳ ಜೊತೆಯಲ್ಲಿ ವಿಷಯಕವಾಗಿ ಅಸಮಂಜಸತೆಗಳಿಂದ ಕೂಡಿರುತ್ತವೆಯೇ ಅಥವಾ ವಿಷಯಕವಾಗಿ ತಪ್ಪು ಹೇಳಿಕೆಗಳಿಂದ ಕೂಡಿರುತ್ತವೆಯೇ ಎಂಬುದನ್ನು ಪರಿಗಣಿಸುವೆವು.

ನಾವು ನಿರ್ವಹಿಸಿದ ಕಾರ್ಯಚಟುವಟಿಕೆಗಳ ಆಧಾರದ ಮೇರೆಗೆ, ಇತರೆ ಮಾಹಿತಿಗಳಲ್ಲಿ ಒಂದು ವಿಷಯಕ ತಪ್ಪು ಹೇಳಿಕೆ ಇರುವುದಾಗಿ ನಾವು ತೀರ್ಮಾನಕ್ಕೆ ಬಂದಲ್ಲಿ, ನಾವು ಅಂತಹ ವಾಸ್ತವಾಂಶವನ್ನು ವರದಿ ಮಾಡುವ ಅಗತ್ಯತೆಯಿರುತ್ತದೆ. ನಾವು ಈ ನಿಟ್ಟಿನಲ್ಲಿ ಆ ರೀತಿ ವರದಿ ಮಾಡಲು ಯಾವುದೇ ಅಂಶಗಳು/ವಿಷಯಗಳು ಇರುವುದಿಲ್ಲ.

ಹಣಕಾಸು ತ:ಖ್ತೆಗಳ ತಯಾರಿಕೆಗೆ ಸಂಬಂಧಿಸಿದಂತೆ ವ್ಯವಸ್ಥಾಪನೆ / ಆಡಳಿತ ಮಂಡಳಿಯ ಜವಾಬ್ದಾರಿ

ಕಂಪನಿಗಳ (ಲೆಕ್ಕಪತ್ರಗಳು) ನಿಯಮಗಳು, 2014ರ ನಿಯಮ 7ರ ಜೊತೆಯಲ್ಲಿ ಓದಲ್ಪಡುವ ಅಧಿನಿಯಮದ 133ನೇ ಪರಿಚ್ಛೇದದಲ್ಲಿ ನಿರ್ದಿಷ್ಟಪಡಿಸಲಾಗಿರುವ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಮಾನದಂಡಗಳು ಒಳಗೊಂಡಂತೆ ಭಾರತದಲ್ಲಿ ಸರ್ವೇಸಾಮಾನ್ಯವಾಗಿ ಒಪ್ಪಿಕೊಳ್ಳಲಾಗಿರುವ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ತತ್ವಗಳ ಅನುಸಾರ ಕಂಪನಿಯ ಹಣಕಾಸಿನ ಸ್ಥಿತಿಗತಿಗಳ, ಹಣಕಾಸಿನ ನಿರ್ವಹಣೆ ಹಾಗೂ ಹಣಕಾಸಿನ ಹರಿವಿನ ಬಗ್ಗೆ ಒಂದು ಸತ್ಯಾಸತ್ಯತೆಯಿಂದ ಕೂಡಿದ ಹಾಗೂ ನ್ಯಾಯಸಮ್ಮತ ಅಭಿಪ್ರಾಯವನ್ನು ನೀಡುವಂತಹ ಈ ಹಣಕಾಸು ತ:ಖ್ತೆಗಳನ್ನು ತಯಾರಿಸುವುದಕ್ಕೆ ಸಂಬಂಧಿಸಿದಂತೆ ಕಂಪನಿಗಳ ಅಧಿನಿಯಮ, 2013ರ ಪರಿಚ್ಛೇದ 134 (5)ರಲ್ಲಿ ಉಲ್ಲೇಖಿಸಲಾಗಿರುವ ವಿಷಯಗಳಿಗೆ ಸಂಬಂಧಿಸಿದಂತೆ ಕಂಪನಿಯ ನಿರ್ದೇಶಕರುಗಳ ಮಂಡಳಿಯು ಜವಾಬ್ದಾರಿಯುತವಾಗಿರುತ್ತದೆ. ಈ ಜವಾಬ್ದಾರಿಯು ಅಧಿನಿಯಮದ ಅನುವುಗಳ ಅನುಸಾರ ಕಂಪನಿಯ ಆಸ್ತಿಗಳ ಸಂರಕ್ಷಣೆಗಾಗಿ ಹಾಗೂ ವಂಚನೆಗಳು ಮತ್ತು ಇತರೆ ನಿಯಮಬಾಹಿರತೆಗಳನ್ನು ತಡೆಯುವ ಸಲುವಾಗಿ ಸೂಕ್ತ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಕಾರ್ಯನೀತಿಗಳನ್ನು ಆಯ್ಕೆ ಮಾಡುವುದು ಹಾಗೂ ಅನ್ವಯಗೊಳಿಸುವುದು, ಲೆಕ್ಕಪತ್ರಗಳ ದಾಖಲೆಗಳ ಯಾಥಾರ್ಥತೆ ಮತ್ತು ಪರಿಪೂರ್ಣತೆಯನ್ನು ಖಚಿತಪಡಿಸಿಕೊಳ್ಳಲು ನ್ಯಾಯಸಮ್ಮತವಾದ ಹಾಗೂ ವಿವೇಚನೆಯಿಂದ ಕೂಡಿದ ತೀರ್ಮಾನಗಳನ್ನು ತೆಗೆದುಕೊಳ್ಳುವುದು ಮತ್ತು ಅಂದಾಜುಗಳನ್ನು ಮಾಡುವುದು, ಒಂದು ಸತ್ಯಾಸತ್ಯತೆಯಿಂದ ಹಾಗೂ ನ್ಯಾಯಸಮ್ಮತತೆಯಿಂದ ಕೂಡಿದ, ತಪ್ಪು ಹೇಳಿಕೆಗಳಿಂದ ಹೊರತಾದ ಹಣಕಾಸಿನ ತ:ಖ್ತೆಗಳನ್ನು ತಯಾರಿಸುವ ಹಾಗೂ ಮಂಡಿಸುವುದಕ್ಕೆ ಸೂಕ್ತವಾದಂತಹ ಸಮರ್ಪಕ ಆಂತರಿಕ ಹಣಕಾಸು ನಿಯಂತ್ರಣಗಳನ್ನು ರೂಪಿಸುವುದು, ಕಾರ್ಯಗತಗೊಳಿಸುವುದು ಹಾಗೂ ನಿರ್ವಹಿಸುವುದನ್ನು ಕೂಡ ಒಳಗೊಂಡಿರುತ್ತದೆ.

ಹಣಕಾಸು ತ:ಖ್ತೆಗಳನ್ನು ತಯಾರಿಸುವಲ್ಲಿ, ವ್ಯವಸ್ಥಾಪನೆಯು ತನ್ನ ಕಂಪನಿಯು ತನ್ನ ವ್ಯವಹಾರಗಳನ್ನು ಮುಂದುವರೆಸಿಕೊಂಡು ಹೋಗುವ ಕಂಪನಿಯನ್ನಾಗಿ ನಡೆಸಿಕೊಂಡು ಹೋಗುವ ಸಾಮರ್ಥ್ಯವನ್ನು ಹೊಂದಿರುವುದೇ ಎಂಬುದನ್ನು ನಿರ್ಧಾರಣೆ ಮಾಡುವಲ್ಲಿ ಜವಾಬ್ದಾರಿಯುತವಾಗಿರುತ್ತದೆ ಹಾಗೂ ವ್ಯವಸ್ಥಾಪನೆಯು ಕಂಪನಿಯನ್ನು ಸಮಾಪನಗೊಳಿಸುವ ಅಥವಾ ಅದರ ಕಾರ್ಯಾಚರಣೆಗಳನ್ನು ಮುಕ್ತಾಯಗೊಳಿಸುವ ಅಥವಾ ಆ ರೀತಿ ತೀರ್ಮಾನಕ್ಕೆ ಬರದಿರಲು ವಾಸ್ತವಿಕ ಬದಲಿ ಚಿಂತನೆಗಳು ಇಲ್ಲದಿರದ ಹೊರತು, ಲೆಕ್ಕಪತ್ರಗಳನ್ನು ಕಂಪನಿಯು ತನ್ನ ವ್ಯಾಪಾರ ವ್ಯವಹಾರಗಳನ್ನು ಮುಂದುವರೆಸಿಕೊಂಡು ಹೋಗುವ ಆಧಾರದ ಮೇರೆಗೆ ತಯಾರಿಸಲು ಜವಾಬ್ದಾರಿಯುತವಾಗಿರುತ್ತದೆ.

ಕಂಪನಿಯ ಹಣಕಾಸು ತ:ಖ್ತೆಗಳ ತಯಾರಿಕೆಯ ಪ್ರಕ್ರಿಯೆಗಳನ್ನು ಮೇಲ್ವಿಚಾರಣೆ ಮಾಡುವಲ್ಲಿಯೂ ಕೂಡ ಕಂಪನಿಯ ನಿರ್ದೇಶಕರುಗಳ ಮಂಡಳಿಯು ಜವಾಬ್ದಾರಿಯುತವಾಗಿರುತ್ತದೆ.

ಲೆಕ್ಕಪರಿಶೋಧಕರುಗಳ ಜವಾಬ್ದಾರಿ:

ಹಣಕಾಸು ತ:ಖ್ತೆಗಳು, ಒಟ್ಟಾರೆಯಾಗಿ ವಂಚಿಸುವ ಉದ್ದೇಶದಿಂದಲೇ ಆಗಿರಲಿ ಅಥವಾ ಕೈ ಅಚಾತುರ್ಯದಿಂದಲೇ ಆಗಿರಲಿ ಇರಬಹುದಾದಂತಹ ವಿಷಯಕ ತಪ್ಪು ಹೇಳಿಕೆಗಳಿಂದ ಮುಕ್ತವಾಗಿರುವವೆ ಎಂಬುದರ ಬಗ್ಗೆ ಒಂದು ನ್ಯಾಯಸಮ್ಮತ ಭರವಸೆಯನ್ನು ಪಡೆಯುವುದು, ನಮ್ಮ ಅಭಿಪ್ರಾಯವನ್ನು ಒಳಗೊಂಡಿರುವಂತಹ ಲೆಕ್ಕಪರಿಶೋಧಕರ ವರದಿಯನ್ನು ನೀಡುವುದು ನಮ್ಮ ಉದ್ದೇಶಗಳಾಗಿರುತ್ತವೆ. ನ್ಯಾಯಸಮ್ಮತ ಭರವಸೆಯು ಒಂದು ಉನ್ನತ ಮಟ್ಟದ ಭರವಸೆಯಾಗಿರುತ್ತದೆ, ಆದರೆ ಭಾರತೀಯ ಚಾರ್ಟರ್ಡ್ ಅಕೌಂಟೆಂಟ್‌ಗಳ ಸಂಸ್ಥೆಯು ಲೆಕ್ಕಪರಿಶೋಧನೆಗೆ ಸಂಬಂಧಿಸಿದಂತೆ ನೀಡಿರುವಂತಹ ಮಾನದಂಡಗಳ ಅನುಸಾರ ನಡೆಸಲಾಗಿರುವ ಲೆಕ್ಕಪರಿಶೋಧನೆಯು ಸದಾಕಾಲವೂ, ಒಂದು ವಿಷಯಕ ತಪ್ಪು ಹೇಳಿಕೆಗಳು ಇರುವ ಸಂದರ್ಭಗಳಲ್ಲೆಲ್ಲವೂ ಪತ್ತೆಹಚ್ಚಲಾಗುವುದು ಎಂಬುದರ ಬಗ್ಗೆ ಯಾವುದೇ ಖಾತರಿಯಿಂದ ಕೂಡಿರುವುದಿಲ್ಲ. ತಪ್ಪು ಹೇಳಿಕೆಗಳು ವಂಚನೆಗಳು ಅಥವಾ ಕೈಯಿಂದ ಆದಂತಹ ಅಚಾತುರ್ಯಗಳ ಕಾರಣ ಉದ್ಭವಿಸುತ್ತವೆ ಹಾಗೂ ವೈಯಕ್ತಿಕವಾಗಿ ಅಥವಾ ಒಟ್ಟಾರೆಯಾಗಿ ಈ ಹಣಕಾಸು ತ:ಖ್ತೆಗಳ ಆಧಾರದ ಮೇರೆಗೆ ಬಳಕೆದಾರರುಗಳು ತೆಗೆದುಕೊಳ್ಳಲಾದಂತಹ ಆರ್ಥಿಕ ನಿರ್ಣಯಗಳ ಮೇಲೆ ಪರಿಣಾಮ ಭೀರುವುದನ್ನು ನ್ಯಾಯಸಮ್ಮತವಾಗಿ ನಿರೀಕ್ಷಿಸಿದಲ್ಲಿ ಅವುಗಳನ್ನು ಪರಿಗಣಿಸಲಾಗುವುದು.

ಲೆಕ್ಕಪರಿಶೋಧನೆಯ ಮಾನದಂಡಗಳ ಅನುಸಾರ ನಡೆಸಲಾಗುವ ಒಂದು ಲೆಕ್ಕಪರಿಶೋಧನೆಯ ಒಂದು ಭಾಗವಾಗಿ, ನಾವು ನಮ್ಮ ಸಂಪೂರ್ಣ ಲೆಕ್ಕಪರಿಶೋಧನೆಯ ಪ್ರಕ್ರಿಯೆಗಳ ಉದ್ದಕ್ಕೂ ನಮ್ಮ ವೃತ್ತೀಯ ತೀರ್ಮಾನವನ್ನು ಚಲಾಯಿಸುವೆವು. ಈ ಕೆಳಗಿನ ಅಂಶಗಳನ್ನೂ ಸಹ ನಾವು ಗಮನದಲ್ಲಿಟ್ಟುಕೊಂಡಿರುವೆವು :

○ ವಂಚಿಸುವ ಉದ್ದೇಶದಿಂದಲೇ ಆಗಿರಲಿ ಅಥವಾ ಕೈಯಿಂದ ಆಗುವಂತಹ ಅಚಾತುರ್ಯದಿಂದಲೇ ಆಗಿರಲಿ ಇರಬಹುದಾದಂತಹ ವಿಷಯಕ ತಪ್ಪು ಹೇಳಿಕೆಗಳನ್ನು ಗುರುತಿಸುವುದು ಹಾಗೂ ಅವುಗಳ ಸಂಭಾವ್ಯ ಅಪಾಯಗಳ ನಿರ್ಧಾರಣೆ ಮಾಡುವುದು, ಇಂತಹ ಸಂಭಾವ್ಯ ಅಪಾಯಗಳಿಗೆ ಸ್ಪಂದಿಸುವಂತಹ ಲೆಕ್ಕಪರಿಶೋಧನಾ ಪೂರ್ವಭಾವಿ ಯೋಜನೆಯನ್ನು ರೂಪಿಸುವುದು ಹಾಗೂ ಲೆಕ್ಕಪರಿಶೋಧನಾ ಕಾರ್ಯವಿಧಾನಗಳನ್ನು ನಡೆಸಿಕೊಂಡು ಹೋಗುವುದು ಹಾಗೂ ನಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುವ ಸಲುವಾಗಿ ಸಮರ್ಪಕವಾಗಿರುವಂತಹ ಹಾಗೂ ಸೂಕ್ತವಾಗಿರುವಂತಹ ಲೆಕ್ಕಪರಿಶೋಧನಾ ಸಾಕ್ಷ್ಯಾಧಾರ ದಾಖಲೆಗಳನ್ನು ಪಡೆದುಕೊಳ್ಳುವುದು. ವಂಚನೆ, ಸುಳ್ಳು ಸಹಿ/ಸುಳ್ಳು ದಾಖಲೆ ಸೃಷ್ಟನೆ, ಉದ್ದೇಶಪೂರ್ವಕ ಲೋಪದೋಷಗಳು, ತಪ್ಪುಗಳಿಂದ ಕೂಡಿದ ನಿರೂಪಣೆಗಳು/ಹೇಳಿಕೆಗಳು ಅಥವಾ ಆಂತರಿಕ ನಿಯಂತ್ರಣಗಳನ್ನು ಪಾಲಿಸದಿರುವುದು, ಇತ್ಯಾದಿಗಳನ್ನು ಒಳಗೊಂಡಿರಬಹುದಾದ್ದರಿಂದ ಒಂದು ವಿಷಯಕ ತಪ್ಪು ಹೇಳಿಕೆಗಳನ್ನು ಪತ್ತೆಹಚ್ಚದಿರುವ ಸಂಭಾವ್ಯ ಅಪಾಯವು ತಪ್ಪುಗಳು ಅಥವಾ ಲೋಪದೋಷಗಳ ಕಾರಣದಿಂದ ಇರಬಹುದಾದಂತಹ ಸಂಭಾವ್ಯ ಅಪಾಯಕ್ಕಿಂತಲೂ ದೊಡ್ಡದಾಗಿರುತ್ತದೆ, ಇಂತಹವುಗಳನ್ನೂ ಸಹ ನಾವು ಗುರುತಿಸುವೆವು.

○ ಸಂದರ್ಭಗಳಿಗೆ ಸೂಕ್ತವೆನಿಸುವಂತಹ ಲೆಕ್ಕಪರಿಶೋಧನಾ ಕಾರ್ಯವಿಧಾನಗಳನ್ನು ರೂಪಿಸುವ ಉದ್ದೇಶದಿಂದ ಲೆಕ್ಕಪರಿಶೋಧನೆಗೆ ಸಂಬಂಧಿಸಿರುವಂತಹ ಕಂಪನಿಯ ಆಂತರಿಕ ನಿಯಂತ್ರಣಗಳ ಮಾಹಿತಿಯನ್ನು ಪಡೆದುಕೊಳ್ಳುವುದು. ಕಂಪನಿಗಳ ಅಧಿನಿಯಮ, 2013ರ ಪರಿಚ್ಛೇದ 143 (3)(i)ರ ಅಡಿಯಲ್ಲಿ, ಕಂಪನಿಯು ಸಮರ್ಪಕ ಆಂತರಿಕ ಹಣಕಾಸು ನಿಯಂತ್ರಣಗಳ ವ್ಯವಸ್ಥೆಯನ್ನು ಹೊಂದಿರುವುದೆ ಹಾಗೂ ಅಂತಹ ನಿಯಂತ್ರಣಗಳ ಕಾರ್ಯಾಚರಣೆಗಳು ಪರಿಣಾಮಕಾರಿತ್ವದಿಂದ ಕೂಡಿರುವವೆ ಎಂಬುದರ ಬಗ್ಗೆ ವರದಿಯನ್ನು ಸಲ್ಲಿಸುವುದಕ್ಕೂ ಸಹ ನಾವು ಜವಾಬ್ದಾರರಾಗಿರುವೆವು.

